coupon ಅನ್ನು ಕೊಟ್ಟು ಆಹಾರ ಪದಾರ್ಥವನ್ನು ಪಡೆಯುವಂಥ ವ್ಯವಸ್ಥೆ ಜಾರಿಗೆ ಬರುತ್ತದೆ. ಅದು ಬರುವುದರಿಂದ ಈ mis-use ಆಗುವುದನ್ನು ತಡೆಗಟ್ಟುವುದಕ್ಕೆ ಅವಕಾಶವಾಗುತ್ತದೆ.

(ಆ) ವಿಷಯ :- ಪಿ. ಹೆಚ್. ಸಿ. ಯನ್ನು ಎನ್.ಜಿ.ಓ.ಗೆ ವಹಿಸಿರುವುದರಿಂದ ತೊಂದರೆ ಯಾಗಿರುವುದರ ಬಗ್ಗೆ.

ಶ್ರೀ ಜೆ. ಸಿ. ಮಾಧುಸ್ವಾಮಿ:- ಮಾನ್ಯ ಉಪಾಧ್ಯಕ್ಷರೆ, ಆರೋಗ್ಯ ಇಲಾಖೆಗೆ ಸಂಬಂಧಿಸಿದಂತೆ ನಾನು ಒಂದು ಪ್ರಶ್ನೆಯನ್ನು ಕೇಳಿದ್ದು ಅದಕ್ಕೆ ಸಂಬಂಧಿಸಿದಂತೆ ಮಾನ್ಯ ಆರೋಗ್ಯ ಸಚಿವರು ಒಂದು ಹೇಳಿಕೆಯನ್ನು ಕೊಡಬೇಕಾಗಿದೆ. ಅವರು ಈಗ ಸದನದಲ್ಲಿರುವುದರಿಂದ ದಯಮಾಡಿ ಉತ್ತರ ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಚಲುವರಾಯಸ್ವಾಮಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ಆವತ್ತು ಶ್ರೀ ಮಾಧುಸ್ವಾಮಿಯವರು ಅವರ ಕ್ಷೇತ್ರದಲ್ಲಿ ಒಂದು P.H.C. ಯನ್ನು N.G.O.ಗೆ ವಹಿಸಿರುವುದರ ಬಗ್ಗೆ ಹಾಗೂ ಅವರು ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ. ಡಾಕ್ಟರುಗಳು ಇಲ್ಲಿ, ಅಲ್ಲಿ staff ಇಲ್ಲ, ಇದರಿಂದ ಸಾರ್ವನಿಕರಿಗೆ ತೊಂದರೆಯಾಗುತ್ತದೆ ಎಂದು ಸಭೆಯ ಗಮನಕ್ಕೆ ತಂದಿದ್ದರು. ನಾನು ಆವತ್ತು ಸದನದಲ್ಲಿ ಇಲ್ಲದಿದ್ದುದರಿಂದ ಸಂಬಂಧಪಟ್ಟ ಸಚಿವರು ಬಂದ ಮೇಲೆ ಅವರಿಂದ ಉತ್ತರ ಕೊಡಿಸುತ್ತೇನೆಂದು ಮಾನ್ಯ ಅಧ್ಯಕ್ಷರು ಹೇಳಿದ್ದರಂತೆ. ಆದ್ದರಿಂದ ಆ ಬಗ್ಗೆ ನಾಳೆ ವರದಿಯನ್ನು ತರಿಸಿಕೊಂಡು, ನಾವು ಆ ರಿತಿ N.G.O. ಗಳಿಗೆ ಕೊಡತಕ್ಕಂಥ ಉದ್ದೇಶವೇನೆಂದರೆ, ಸರ್ಕಾರಕ್ಕಿಂತ ಇನ್ನು ಹೆಚ್ಚಿನ ಸೇವೆಯನ್ನು ಜನರಿಗೆ ಕೊಡುವ ಉದ್ದೇಶ ಇದ್ದರೆ ಮಾತ್ರ ಅವರಿಗೆ ವಹಿಸತಕ್ಕಂಥ ತೀರ್ಮಾನವಾಗಿರುವಂಥದ್ದು. ಅದು ತಾವು ಹೇಳಿದಂತೆ ಆ ರೀತಿ ಇದ್ದರೆ ಅದನ್ನು ವಾಪಸ್ಸು ತೆಗೆದುಕೊಂಡು ನಾವು ಸರ್ಕಾರದಿಂದ ಸರಿಯಾದ ವ್ಯವಸ್ಥೆಯನ್ನು ಮಾಡುತ್ತೇವೆ.

11. ವಿತ್ತೀಯ ಕಾರ್ಯಕಲಾಪ

2005-2006ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ

ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ):- ಮಾನ್ಯ ಅಧ್ಯಕ್ಷರೆ, 2005-06ನೇ ಸಾಲಿನ ಆಯವ್ಯಯದ ಮೇಲೆ ಮಾತನಾಡಲು ನನಗೆ ಅವಕಾಶ ಮಾಡಿಕೊಟ್ಟಂಥ ತಮಗೆ ಅಭಿನಂದನೆಗಳನ್ನು ಸಲ್ಲಿಸಿ ಮಾತನಾಡಬಯಸುತ್ತೇನೆ. ಇವೊತ್ತು ನಮ್ಮ ಮಾನ್ಯ ಧರ್ಮಸಿಂಗ್ ರವರ ನೇತೃತ್ವದಲ್ಲಿರುವ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯನವರು 2005-06ನೇ ಸಾಲಿನ ಆಯವ್ಯಯವನ್ನು ಏನು ಮಂಡಿಸಿದ್ದಾರೆ ಮತ್ತು ಆ ಮೂಲಕ ರಾಜ್ಯಕ್ಕೆ ಏನು ಕೊಟ್ಟಿದ್ದಾರೆ ಈ ಒಂದು ಬಜೆಟ್ ಅತ್ಯಂತ ಜನಪರವಾದಂತಹ ಮತ್ತು ಅತ್ಯಂತ ಪ್ರಗತಿದಾಯಕವಾದಂಥ ಮತ್ತು ಎಲ್ಲಾ ಸಮುದಾಯದ ಜನಗಳಿಗೆ ಸ್ನೇಹಮಯವಾಗಿ ಒಪ್ಪಿಗೆಯನ್ನು ನೀಡುವಂಥ ಬಜೆಟ್‌ನ್ನು ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಈ ಆಯವ್ಯಯವನ್ನು

ಬೆಂಬಲಿಸಿ ವ್ಯಕ್ತಿಗತವಾಗಿ ನಾನು ಉಪ ಮುಖ್ಯಮಂತ್ರಿಗಳಿಗೆ, ಹಣಕಾಸಿನ ಮಂತ್ರಿಗಳಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇಂಥ ಒಳ್ಳೆಯ ಬಜೆಟ್‌ನ್ನು ನೀಡುವುದಕ್ಕೆ ಮುಖ್ಯ ಕಾರಣಕರ್ತರು ಸನ್ಮಾನ್ಯ ಧರ್ಮಸಿಂಗ್‌ರವರ ಸರ್ಕಾರ. ಈ ಒಂದು ಸಮ್ಮಿಶ್ರ ಸರ್ಕಾರ ಹಲವಾರು ವಿಚಾರಗಳನ್ನು ತೆಗೆದುಕೊಂಡು ಅತ್ಯಂತ ಜನಪರವಾದಂಥ ಬಜೆಟ್‌ನ್ನು ಮಂಡಿಸಿದೆ. ಇದನ್ನು ನಾವೆಲ್ಲರೂ ಕೂಡ ಸ್ವಾಗತವನ್ನು ಮಾಡಬೇಕು. ಮಾನ್ಯ ಸಿದ್ದರಾಮಯ್ಯನವರು ಆರ್ಥಿಕ ವಲಯದಲ್ಲಿ ಒಳ್ಳೆಯ ಅನುಭವವನ್ನು ಪಡೆದುಕೊಂಡಿದ್ದಾರೆ. ಇದಕ್ಕೆ ಕಾರಣ ಸನ್ಮಾನ್ಯ ದಿವಂಗತ ರಾಮಕೃಷ್ಣ ಹೆಗಡೆಯವರನ್ನು ಬಿಟ್ಟಮೇಲೆ ಸಿದ್ದರಾಮಯ್ಯನವರೇ ಅತಿ ಹೆಚ್ಚು ಬಾರಿ ಆಯವ್ಯಯವನ್ನು ಮಂಡಿಸಿದ್ದಾರೆ. ಹೀಗಾಗಿ ಆರ್ಥಿಕ ಇಲಾಖೆಯ ಮೇಲೆ ಅವರಿಗೆ ಬಹಳ ಅಪಾರವಾದಂಥ ಅನುಭವ ಇದೆ. ಹೀಗಾಗಿ ಇವೊತ್ತು ಈ ರಾಜ್ಯದಲ್ಲಿ ಒಳ್ಳೆಯ ಆಯವ್ಯಯ ಬಂದಿದೆ. ಇದರ ಬಗ್ಗೆ ಹೇಳಬೇಕೆಂದರೆ this is one of the best budgets ಬಹಳ ಉತ್ತಮವಾದ ಈ ಬಜೆಟ್ ಆಗಿದೆಯೆಂದು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಅದಕ್ಕಾಗಿ ನಾನು ಇಂದು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇದರ ಜೊತೆಗೆ ಕೇವಲ ಬಜೆಟ್‌ನ್ನು ಮಂಡಿಸುವುದಷ್ಟೇ ಅಲ್ಲ, ತೆರಿಗೆಗಳನ್ನು ಹೆಚ್ಚಿಗೆ ಹಾಕುವುದಲ್ಲ, ಸಾಲಗಳನ್ನು ತರುವುದಲ್ಲ ಮುಖ್ಯವಾಗಿ; ಆದರೆ ಇವೊತ್ತು ಧರ್ಮಸಿಂಗ್ ನೇತೃತ್ವದಲ್ಲಿ ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅತ್ಯಂತ ಆದ್ಯತೆಯನ್ನು ಕೊಟ್ಟಿದ್ದು ಆರ್ಥಿಕ ಶಿಸ್ತಿಗೆ. ಫೈನಾನ್ಸಿಯಲ್ ಡಿಸಿಪ್ಲಿನ್ ಅಂದರೆ ಆರ್ಥಿಕ ಶಿಸ್ತನ್ನು ಯಾವ ಸರ್ಕಾರ ಅಥವಾ ಯಾವ ಕುಟುಂಬ ಯೋಜನೆಗಳಲ್ಲಿ ಅಳವಡಿಸಿ ಕೊಳ್ಳುವುದಿಲ್ಲವೋ ಆ ಕುಟುಂಬ ಅಥವಾ ಆ ಸರ್ಕಾರ ಬಿದ್ದುಹೋಗುತ್ತದೆ. ಸರ್ಕಾರ ಯಶಸ್ವಿಯಾಗಿ ನಡೆಯುವುದಿಲ್ಲ. ಅದಕ್ಕಾಗಿ ಈ ಸರ್ಕಾರ ಪ್ರಥಮ ಆದ್ಯತೆಯಲ್ಲಿ ಆರ್ಥಿಕ ಶಿಸ್ತನ್ನು ತಂದಿದೆ. ಆರ್ಥಿಕ ಶಿಸ್ತನ್ನು ತಂದು ನಮ್ಮ ಆದ್ಯತೆಗಳು ಹೇಗಿರಬೇಕು ಎನ್ನುವುದನ್ನು ಈಗಾಗಲೇ, ಈ ಸರ್ಕಾರ ಗುರುತಿಸಿದೆ ಮತ್ತು ಇಡೀ ರಾಷ್ಟ್ರದಲ್ಲಿಯೇ ಯಾರು ಮಾಡಿರದಂಥ ರೀತಿಯಲ್ಲಿ ಹೆಚ್ಚು ತೆರಿಗೆ ಸಂಗ್ರಹವನ್ನು ಮಾಡಿದ್ದಾರೆ. ಇದನ್ನು ನಾವು ಮೆಚ್ಚಬೇಕಾಗುತ್ತದೆ. ಇವೊತ್ತು ವಾಣಿಜ್ಯ ತೆರಿಗೆ ಅಧಿಕಾರಿಗಳೇ ಇರಬಹುದು, ಸ್ಟ್ಯಾಂಪ್ ಅಂಡ್ ಡ್ಯೂಟಿ ರಿಜಿಸ್ಟೇಶನ್ ಅಧಿಕಾರಿಗಳೇ ಇರಬಹುದು, ಮೋಟಾರ್ ವೆಹಿಕಲ್ ಡಿಪಾರ್ಟ್‌ಮೆಂಟ್ ಅಧಿಕಾರಿಗಳೇ ಇರಬಹುದು, ಎಕ್ಸೈಸ್ ಡಿಪಾರ್ಟ್‌ಮೆಂಟ್ ಇರಬಹುದು, ಈ ಎಲ್ಲಾ ತೆರಿಗೆಗಳನ್ನು ಸಂಗ್ರಹಣೆ ಮಾಡುವಂಥ ಇಲಾಖೆಗಳು ಈ ವರ್ಷ ಅತ್ಯಂತ ಹೆಚ್ಚಿನ ತೆರಿಗೆಗಳನ್ನು ಸಂಗ್ರಹಣೆಯನ್ನು ಮಾಡಿವೆ. ಸುಮಾರು 27 ಪರ್ಸೆಂಟ್ ಹೆಚ್ಚು ತೆರಿಗೆಯನ್ನು ಇಡೀ ರಾಷ್ಟ್ರದಲ್ಲಿಯೇ ಮಾಡಿ ಇವೊತ್ತು ಕರ್ನಾಟಕ ರಾಜ್ಯ ಇಡೀ ರಾಷ್ಟ್ರದಲ್ಲಿಯೇ ಒಂದು ಒಳ್ಳೆಯ ಆರ್ಥಿಕ ನೀತಿ ಮತ್ತು ಆರ್ಥಿಕ ಶಿಸ್ತನ್ನು ತಂದಿದೆಯೆಂದು ಕೇಂದ್ರ ಸರ್ಕಾರ ಮನ್ನಣೆಯನ್ನು ಕೊಟ್ಟಿದೆ. ಮನ್ನಣೆ ಕೊಡುವುದು ಅಷ್ಟೇ ಅಲ್ಲ, ಈ ರೀತಿಯಲ್ಲಿ ಹೆಚ್ಚು ತೆರಿಗೆ ಹೆಚ್ಚು ಸಂಗ್ರಹಣೆ ಮಾಡಿರುವುದಕ್ಕಾಗಿ ಕೇಂದ್ರ ಸಕಾರ 185 ಕೋಟಿ ರೂಪಾಯಿಗಳ ಇನ್ಸೆಂಟಿವ್‌ನ್ನು ಕರ್ನಾಟಕ ಸರ್ಕಾರಕ್ಕೆ ಕೊಟ್ಟಿದೆ. ಇದೊಂದು ಬಹಳ ದೊಡ್ಡ ಸಾಧನೆಯೇ ಆಗಿದೆ.

ಇದರ ಜೊತೆಗೆ ಈ ಸರ್ಕಾರ ಬಂದಂಥ ಪ್ರಾರಂಭದಲ್ಲಿ 2004–05ನೇ ಸಾಲಿನ ಪ್ರಾರಂಭದಲ್ಲಿ 14958 ಕೋಟಿ ರೂಪಾಯಿಗಳ ತೆರಿಗೆ ಸಂಗ್ರಹಣೆಯನ್ನು ಮಾಡಬೇಕೆನ್ನುವ ಗುರಿಯನ್ನು ಹೊಂದಿತ್ತು. ಆದರೆ ಈ ಸರ್ಕಾರ ಮಾರ್ಚ್ ಕೊನೆಯವರೆಗೆ ಸುಮಾರು 15748 ಕೋಟಿ ರೂ. ಸುಮಾರು ಹೆಚ್ಚು ಕಡಿಮೆ 16 ಸಾವಿರ ಕೋಟಿ ರೂಪಾಯಿಗಳ ತೆರಿಗೆ ಸಂಗ್ರಹಣೆಯನ್ನು ಮಾಡುತ್ತಿದ್ದಾರೆ. ಅಂದರೆ ಸುಮಾರು 800 ಕೋಟಿ ರೂಪಾಯಿಗಳ ಹೆಚ್ಚುವರಿ ತೆರಿಗೆಯನ್ನು ಸಂಗ್ರಹಣೆ ಮಾಡುವುದು ಸಣ್ಣ ಮಾತೇನಲ್ಲ. ಅದಕ್ಕೇ ನಾನು ಹೇಳಿದ್ದು, ಆರ್ಥಿಕ ಶಿಸ್ತನ್ನು ಈ ಸರ್ಕಾರ ತಂದಿದೆ ಎಂದು. ಇವೊತ್ತು ಇಲಾಖೆಗಳಲ್ಲಿ ಸ್ಪಷ್ಟವಾದಂಥ ನಿರ್ದೇಶನ ಏನು ತೋರಿಸುತ್ತದೆಂದರೆ ಈ ಇಲಾಖೆಗಳಲ್ಲಿ ಭ್ರಷ್ಟಾಚಾರ ಇಲ್ಲ, ಬಹಳ ಕಡಿಮೆ ಆಗಿದೆ ಎಂದು ನಾನು ಹೇಳಬಯಸುತ್ತೇನೆ. ಇದರ ಜೊತೆಗೆ ನಮ್ಮ ಟಾರ್ಗೆಟ್‌ಗಿಂತ ಒಂದು ಸಾವಿರ ಕೋಟಿ ರೂಪಾಟಿಯಗಳ ತೆರಿಗೆ ಸಂಗ್ರಹಣೆಯನ್ನು ಮಾಡಿದ್ದು ಸುಲಭದ ಮಾತೇನಲ್ಲ. ಅದಕ್ಕಾಗಿ ನಾನು ಈ ಸಂದರ್ಭದಲ್ಲಿ ಇದಕ್ಕೆ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ನಾನು ಅಭಿನಂದಿಸುತ್ತೇನೆ. ಇಂಥ ಒಂದು ಒಳ್ಳೆಯ ಕೆಲಸವನ್ನು ಈ ಸರ್ಕಾರ ಮಾಡಿದೆ. ಇದರ ಜೊತೆಗೆ ನಮ್ಮ ಉಪ ಮುಖ್ಯಮಂತ್ರಿಗಳು ಇನ್ನೂ ಒಂದು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಅದೇನೆಂದರೆ 2004–05ನೇ ಸಾಲಿನಲ್ಲಿ ಸುಮಾರು 8460 ಕೋಟಿ ರೂಪಾಯಿಗಳ ಸಾಲವನ್ನು ಮರುಪಾವತಿ ಮಾಡಿದ್ದಾರೆ. ಮೊದಲು ನೀವು ಬಜೆಟ್‌ನಲ್ಲಿ ಮಾಡಿಕೊಂಡಿದ್ದಕ್ಕಿಂತ ಸುಮಾರು 2500 ಕೋಟಿ ರೂಪಾಯಿಗಳ ಸಾಲವನ್ನು ಕೊಡುತ್ತಿದ್ದಿರಿ. ಆದರೆ ಈ ಬಾರಿ ಬಹಳ ಜಾಣ್ಮೆಯ ಕಾರ್ಯವನ್ನು.ಈ ವಿಚಾರದಲ್ಲಿ ಮಾಡಿದ್ದಾರೆ. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ ಕಳೆದ ಐದು ವರ್ಷಗಳ ಹಿಂದೆ ನಾವು ತೆಗೆದುಕೊಳ್ಳುತ್ತಿದ್ದಂಥ ಸಾಲದ ಮೇಲಿನ ಬಡ್ಡಿಯ ದರಗಳು 14 ಪರ್ಸೆಂಟ್‌ನಿಂದ 18 ಪರ್ಸೆಂಟ್‌ವರೆಗೂ ಇತ್ತು. ಆದರೆ ಇವೊತ್ತು ನಾವು ಸಾಲವನ್ನು ತೆಗೆದುಕೊಂಡರೆ ಸರಾಸರಿ 7 ಪರ್ಸೆಂಟ್‌ನಿಂದ 9 ಪರ್ಸೆಂಟ್‌ವರೆಗೂ ಇದೆ. ಅದಕ್ಕಾಗಿ ನಮ್ಮ ಉಪ ಮುಖ್ಯಮಂತ್ರಿಗಳು ಸುಮಾರು 8460 ಕೋಟಿ ರೂಪಾಯಿ ಸಾಲವನ್ನು ಮರುಪಾವತಿ ಮಾಡಿ ಬಡ್ಡಿಯನ್ನು ಕಡಿಮೆ ಮಾಡಿಕೊಂಡಿದ್ದಾರೆ. ಇದು ಒಂದು ಒಳ್ಳೆಯ ಜಾಣ್ಮೆಯ ಕಾರ್ಯಕ್ರಮ. ಏಕೆಂದರೆ ಅನಾವಶ್ಯಕವಾಗಿ ನಾವು ಏಕೆ ಬಡ್ಡಿಯನ್ನು ಕೊಡಬೇಕು. ಸಾಲ ತೀರಿಸುವುದೂ ಕೂಡ ಒಂದು ಒಳ್ಳೆಯ ಕಾರ್ಯಕ್ರಮ. ಅದಕ್ಕಾಗಿ ನಾವು ಈ ಜಾಣ್ಮೆಯನ್ನು ಅಭಿನಂದಿಸಬೇಕಾಗುತ್ತದೆ. ಈ ಒಂದು ಬಜೆಟ್‌ನಲ್ಲಿ ಹೊಸ ತೆರಿಗೆಗಳನ್ನು ಹಾಕಿಲ್ಲ ಮತ್ತು ಹೊಸದಾಗಿ ಹೆಚ್ಚಿನ ಸಾಲವನ್ನು ತೆಗೆದುಕೊಳ್ಳದೆಯೇ ಒಂದು ಒಳ್ಳೆಯ ಬಜೆಟ್‌ನ್ನು ಮಂಡಿಸಿದ್ದಾರೆ. ಆದರೆ ನಮ್ಮ ಉಪ ಮುಖ್ಯಮಂತ್ರಿಗಳು ತೆರಿಗೆ ಹಾಕಲು ಹಾಗೂ ಹೊಸದಾಗಿ ಸಾಲವನ್ನು ತೆಗೆದುಕೊಳ್ಳಲು ಹಿಂಜರಿಕೆ ಮಾಡಬೇಕಾಗಿಲ್ಲ ಅಥವಾ ಸಂಕೋಚಪಟ್ಟು ಕೊಳ್ಳಬೇಕಾಗಿಲ್ಲ. ಏಕೆಂದರೆ ಇವೊತ್ತು ಪ್ರೊಡಕ್ಟೀವ್ ಆ್ಯಕ್ಟಿವಿಟೀಸ್‌ಗೆ, ರಚನಾತ್ಮಕವಾದಂಥ ಅಭಿವೃದ್ಧಿ ಕೆಲಸಗಳನ್ನು ಮಾಡಲು ನಾವು ಸಾಲವನ್ನು ತೆಗೆದುಕೊಳ್ಳಬೇಕಾಗುತ್ತದೆ. ಮತ್ತು ತೆರಿಗೆಗಳನ್ನು ಹಾಕಲೇಬೇಕಾಗುತ್ತದೆ. ಏನೂ

ಮಾಡುವುದಕ್ಕಾಗುವುದಿಲ್ಲ. ಹೀಗಾಗಿ ನೀವು ಯಾವುದೇ ರೀತಿಯಾದಂಥ ಹಿಂಜರಿಕೆಪಡುವ ಅವಶ್ಯಕತೆ ಇಲ್ಲ. ಅಮೇರಿಕದ ಹಿಂದಿನ ಅಧ್ಯಕ್ಷರಾದ ಜಾನ್ ಎಫ್, ಕೆನಡಿಯವರು ಈ ಟ್ಯಾಕ್ಸೇಶನ್ ಮತ್ತು ಲೋನ್ ಬಗ್ಗೆ ಏನು ಹೇಳಿದ್ದಾರೆಂದರೆ.

"An economy hampered by the restrictive tax rate will never produce enough revenue to balance our budget just as it will never produce enough jobs or enough profits." ಇದರ ಅರ್ಥ ನಾವು ಹೊಸ ತೆರಿಗೆಗಳನ್ನು ಹಾಕದೇ ಇದ್ದರೆ ಬಜೆಟ್‌ನಲ್ಲಿ ಒಳ್ಳೆಯ ಬ್ಯಾಲೆನ್ಸ್ ಬಜೆಟ್‌ನ್ನು ಕೊಡುವುದಕ್ಕಾಗುವುದೇ ಇಲ್ಲ. ಹೊಸ ತೆರಿಗೆಗಳನ್ನು ಹಾಕಲೇಬೇಕಾಗುತ್ತದೆ. ಇದಕ್ಕೆ ಕಾರಣ ನಮ್ಮ ಜನಸಂಖ್ಯೆ ಪ್ರತಿ ದಿವಸ ಬೆಳೆಯುತ್ತಲೇ ಇರುವುದೇ ಆಗಿದೆ. ಇವೊತ್ತು ಸುಮಾರು ಐದೂವರೆ ಕೋಟಿ ಜನಸಂಖ್ಯೆ ನಮ್ಮ ರಾಜ್ಯದಲ್ಲಿ ಇದೆ. ಜನಸಂಖ್ಯೆಯ ಪ್ರಮಾಣ ಪ್ರತಿ ವರ್ಷ ಕರ್ನಾಟಕದಲ್ಲಿ 1.9 ಅಂದರೆ ಸುಮಾರು ಹೆಚ್ಚು ಕಡಿಮೆ 2 ಪರ್ಸೆಂಟ್‌ನಷ್ಟು ಜನರು ಜಾಸ್ತಿಯಾಗುತ್ತಿದ್ದಾರೆ. ಇದಕ್ಕಾಗಿ ನಾವು ಹೊಸ ತೆರಿಗೆಗಳನ್ನು ಹಾಕಲೇಬೇಕಾಗುತ್ತದೆ ಮತ್ತು ಸಾಲವನ್ನು ಮಾಡಬೇಕಾಗುತ್ತದೆ. ಇದಕ್ಕಾಗಿ ನೀವು ಹಿಂಜರಿಯಬೇಕಾದ ಅವಶ್ಯಕತೆ ಇಲ್ಲ. ಎಲ್ಲಿ ಸಾಲವನ್ನು ಮಾಡಬಾರದು ಎಂದರೆ ಸಾಲ ಮಾಡಿ ಮಜಾ ಮಾಡುವುದಕ್ಕೆ ಹೋಗಬಾರದು. ಇವೊತ್ತು ಸರ್ಕಾರ ಕೂಡ ಒಂದು ಕುಟುಂಬ ಇದ್ದ ಹಾಗೆ. ಒಂದು ಕುಟುಂಬದಲ್ಲಿ ಇವೊತ್ತು ಸಾಲ ಮಾಡಿ ನೀರಾವರಿಯನ್ನು ಮಾಡಿದರೆ ಅದು ತಪ್ಪಲ್ಲ. ಆದರೆ ಅದೇ ಸಾಲ ಮಾಡಿ ಮದುವೆ ಮಾಡಿದರೆ ಅದು ಬಹಳ ತಪ್ಪಾಗುತ್ತದೆ. ಆದರೆ ಇಲ್ಲಿ ಧರ್ಮಸಿಂಗ್ ನೇತೃತ್ವದಲ್ಲಿರುವ ಸರ್ಕಾರ ಇವೊತ್ತು ಸಾಲವನ್ನು ತೆಗೆದುಕೊಂಡಿದ್ದರೂ ಕೂಡ ಅದು ಪ್ರೊಡಕ್ಟೀವ್ ಆ್ಯಕ್ಟಿವಿಟೀಸ್ ಬಗ್ಗೆ. ಬಹಳ ಗಮನವನ್ನು ಸರ್ಕಾರ ಕೊಟ್ಟಿದೆ. ಇವೊತ್ತಿನ ದಿವಸ ನಾನು ಇನ್ನೊಂದು ವಿಚಾರದಲ್ಲಿ ನಾನು ಮುಖ್ಯಮಂತ್ರಿಗಳನ್ನು, ಉಪ ಮುಖ್ಯಮಂತ್ರಿಗಳನ್ನು ಹಾಗೂ ಈ ಸರ್ಕಾರವನ್ನು ನಾನು ಅಭಿನಂದಿಸುತ್ತೇನೆ. ಇವೊತ್ತು ಯೋಜನಾ ಪೂರ್ವಕವಾಗಿ ತೆಗೆದುಕೊಳ್ಳುವಂಥ ಕಾರ್ಯಕ್ರಮಗಳಲ್ಲಿ ಕೇಂದ್ರ ಸರ್ಕಾರದ ವಿವಿಧ ಅನುಪಾತದಲ್ಲಿ ಸಹಾಯಧನ ಇರುತ್ತದೆ. ಆ ಸಹಾಯಧನವನ್ನು ನಮ್ಮ ರಾಜ್ಯ ಪಡೆಯಲೇಬೇಕಾಗುತ್ತದೆ. ಅದಕ್ಕಾಗಿ ಪ್ರತಿ ವರ್ಷ ಎಲ್ಲಾ ರಾಜ್ಯಗಳು ಯೋಜನಾ ಆಯೋಗದ ಮುಂದೆ ತಮ್ಮ ವಿಚಾರವನ್ನು ಹೇಳಿ ನಮಗೆ ಇಷ್ಟು ಯೋಜನಾ ವೆಚ್ಚಗಳಿಗೆ ಹಣವನ್ನು ಅನುಮೋದನೆ ಕೊಡಿ ಎಂದು ಕೇಳುತ್ತಾರೆ. ಆ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಇಡೀ ರಾಷ್ಟ್ರದಲ್ಲಿರುವಂಥ ಎಲ್ಲಾ ರಾಜ್ಯಗಳಿಗಿಂತ ಅತ್ಯಂತ ಹೆಚ್ಚಿನ ಯೋಜನಾ ವೆಚ್ಚದ ಅನುಮೋದನೆಯನ್ನು ಪಡೆದುಕೊಂಡಿದ್ದಾರೆ. ಇದು ಬಹಳ ಮಹತ್ವದ ಸಂಗತಿ. ಈ ಸದನಕ್ಕೆ ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ, ಇವತ್ತು Plan size of other states. ಕರ್ನಾಟಕ ಬಹಳ ದೊಡ್ಡ ರಾಜ್ಯ ಏನಲ್ಲ. ಕರ್ನಾಟಕಕ್ಕಿಂತ ಬಹಳ ದೊಡ್ಡ ಜಿಡಿಪಿ, ಹೆಚ್‌ಪಿ ಯಲ್ಲಿ ಬೇರೆ ಬೇರೆ ರಾಜ್ಯಗಳು ಬಹಳಷ್ಟು ಮುಂದಿವೆ. ನಮ್ಮ ದೇಶದಲ್ಲಿ ಮಹಾರಾಷ್ಟ್ರ ಅತ್ಯಂತ ಹೆಚ್ಚಿನ ತೆರಿಗೆ ಮತ್ತು

ಹೆಚ್ಚಿನ ಆದಾಯ ಬರುವಂಥ ರಾಜ್ಯ. Plan sixe of Maharashtra this year 2005-06 ನಲ್ಲಿ ಮಹಾರಾಷ್ಟ್ರದ ಪ್ಲಾನ್ ಸೈಜ್ 11 ಸಾವಿರ ಕೋಟಿ ರೂ. ಆಂಧ್ರಪ್ರದೇಶ, Even it is not approved. ಅವರಿಗೆ ಇವತ್ತಿಗೂ ಕೂಡ ಒಪ್ಪಿಗೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ತಮಿಳುನಾಡು Chennai is much better than Bangalore, ಮತ್ತು ಅಲ್ಲಿರುವಂಥ ಟೆಕ್ಸ್‌ಟೈಲ್ ಇಂಡಸ್ಟ್ರಿ ಮತ್ತು ಬೇರೆ ಬೇರೆ ನೀರಾವರಿಯನ್ನು ಕಂಪೇರ್ ಮಾಡಿದರೆ ಅವರ ಪರ್ ಕ್ಯಾಪಿಟಲ್ ಇನ್‌ಕಹಿ ನಮಗಿಂತ ಉತ್ತಮ ಇದೆ. ಅವರದ್ದು ಈ ವರ್ಷದ ಪ್ಲಾನ್ ಸೈಜ್ 9100 ಕೋಟಿ. ರೂ. ಗುಜರಾತ್ ಕೈಗಾರಿಕೆ ಹಾಗೂ ಬೇರೆ ಬೇರೆ ವಿವಿಧ ರಂಗಗಳಲ್ಲಿ, ಸಹಕಾರಿ ಕ್ಷೇತ್ರದಲ್ಲಿ ಅತ್ಯುತ್ತಮವಾದ ರಾಜ್ಯ ಎನಿಸಿಕೊಂಡಿದೆ. ಅಲ್ಲಿ ಪ್ಲಾನ್ ಸೈಜ್ 11,000 ಕೋಟಿ ರೂ. ಮಧ್ಯಪ್ರದೇಶ, 7471 ಕೋಟಿ ರೂ. ನಮಗೆ ಅತೀ ಸಮೀಪ ಇರುವುದು ಎಂದರೆ ಉತ್ತರ ಪ್ರದೇಶ ಮಾತ್ರ. ಉತ್ತರ ಪ್ರದೇಶದ ಜನಸಂಖ್ಯೆ ಕರ್ನಾಟಕಕ್ಕಿಂತ ಡಬ್ಬಲ್, ನಾವು ಐದೂವರೆ ಕೋಟಿ ಇದ್ದರೆ ಅವರು ಹನ್ನೊಂದು ಕೋಟಿ ಇದ್ದಾರೆ. ದೆಹಲಿಯ ಪಕ್ಕದಲ್ಲಿ ಇದ್ದಾರೆ. ನೋಯಿಡಾ ಕೈಗಾರಿಕೆಯ ಪ್ರದೇಶ Noida is half of Delhi ಅಂಥ ಒಂದು ರಾಜ್ಯದವರು ಕೂಡ 13,500 ಕೋಟಿ ರೂಪಾಯಿಯ ಪ್ಲಾನ್ ಸೈಜ್ ಮಾಡಿದ್ದಾರೆ. ಆದರೆ, ಕರ್ನಾಟಕ ಇವತ್ತು 13,550 ಕೋಟಿ ರೂಪಾಯಿಯನ್ನು ಅನುಮೋದನೆ ಮಾಡಿಕೊಳ್ಳಬೇಕಾದರೆ, ಅಲ್ಲಿರುವ ಡಾ: ಮನ ಮೋಹನಸಿಂಗ್ ಅವರಾಗಲಿ ಹಾಗೂ ಮಾನ್ಯ ಆಹ್ಲುವಾಲಿಯವರಾಗಲಿ, ನಮ್ಮ ಪ್ಲಾನ್‌ಗೆ ಸುಮ್ಮನೆ ಮಾನ್ಯತೆ ಕೊಡುವುದಿಲ್ಲ, ಮೊದಲು ನಮ್ಮ ಬಂಡವಾಳ ತೋರಿಸಬೇಕಾಗುತ್ತದೆ, ಅವರು ನಿಮ್ಮ ಹತ್ತಿರ ಹಣ ಎಲ್ಲಿದೆ ಎಂದು ಕೇಳುತ್ತಾರೆ, ಅದಕ್ಕೆ 13,555 ಕೋಟಿ ರೂಪಾಯಿಯ ಯೋಜನಾ ವೆಚ್ಚಕ್ಕೆ ಅನುಮೋದನೆ ತೆಗೆದುಕೊಂಡಿರುವುದಕ್ಕಾಗಿಯೇ ನಾನು ಈ ಸಂದರ್ಭದಲ್ಲಿ, ಮಾನ್ಯ ಮುಖ್ಯಮಂತ್ರಿಗಳಾದಂಥ ಧರ್ಮಸಿಂಗ್‌ರವರನ್ನು ಹಾಗೂ ಉಪ ಮುಖ್ಯಮಂತ್ರಿಗಳವರನ್ನು ಮತ್ತು ಈ ಸಂಪುಟವನ್ನು ನಾನು ಅಭಿನಂದಿಸುತ್ತೇನೆ. ಮತ್ತು ಅದರ ಜೊತೆಗೆ ಆರ್ಥಿಕ ಶಿಸ್ತನ್ನು ತಂದುಕೊಟ್ಟಂಥ ಅದನ್ನು ಪರಿಗಣಿಸಿದಂಥ ನಮ್ಮ ಪ್ರಧಾನ ಮಂತ್ರಿಗಳನ್ನು ಮತ್ತು ನಮ್ಮ ಯುಪಿಎ ಛೇರ್ಮನ್ ಆದಂಥ ಶ್ರೀಮತಿ ಸೋನಿಯಾ ಗಾಂಧಿಯವರೂ ಕೂಡ ಇದಕ್ಕೆ ಸಹಾಯ ಮಾಡಿದ್ದಾರೆ. ಒಳ್ಳೆಯ ರಾಜ್ಯಕ್ಕೆ ಒಳ್ಳೆಯದು ಇದು ಕೊಡಿ ಎನ್ನುವಂಥ ಮಾರ್ಗದರ್ಶನವನ್ನು ಅವರು ಕೊಟ್ಟಿದ್ದಾರೆ. ಹೀಗಾಗಿ ಅವರೆಲ್ಲರಿಗೂ ಕೂಡ ನಾನು ಈ ಸಂದರ್ಭದಲ್ಲಿ ಅಭಿನಂದನೆಗಳನ್ನು ಸಲ್ಲಿಸಬೇಕಾಗುತ್ತದೆ. ಅದರ ಜೊತೆಗೆ 2004-05ನೇ ಸಾಲುನಲ್ಲಿ ದಯಮಾಡಿ ನಾನು ವಿರೋಧ ಪಕ್ಷದ ಮುಖಂಡರಿಗೆ ಹೇಳಲಿಕ್ಕಿಚ್ಚಿಸುತ್ತೇನೆ.

ಶ್ರೀ ಎಸ್. ರಾಜೇಂದ್ರನ್:- ಅವರು ಯಾರೂ ಇಲ್ಲವೆ? ಏಕೆ ಹೇಳುತ್ತೀರಿ? ವಿರೋಧ ಪಕ್ಷದ ನಾಯಕರು ಇಲ್ಲಿ ಇಲ್ಲ ಅಲ್ಲವೆ? ಯಾರಿಗೆ ಹೇಳುತ್ತೀರಿ?

ಶ್ರೀ ಬಸವರಾಜ್ ರಾಯರೆಡ್ಡಿ:- ಅವರಿಗೆ ನಮ್ಮ ಭಾಷಣ ಬೇಕಾಗಿಲ್ಲ. ಯಾವುದಾದರೊಂದು ಯೋಜನಾ ವೆಚ್ಚಕ್ಕೆ ಟ್ರೇಜರಿ ಬ್ಯಾನ್ ಅಗಿದೆಯೇ? ಸ್ಯಾಲರಿಗಳು

ನಿಂತಿದಿಯೇ? ಹಣಕಾಸಿನ ಮುಗ್ಗಟ್ಟು ಇಲ್ಲ, ಎಲ್ಲಿಯೂ ಕೂಡ ಟ್ರೇಜರಿ ಬ್ಯಾನ್ ಎನ್ನುವಂಥ ಪದ ಬರಲಿಲ್ಲ, ಅದಕ್ಕೆ ನಾನು ಹೇಳಿದ್ದು ಇದು ಈ ರಾಜ್ಯದ ಆರ್ಥಿಕ ಶಿಸ್ತನ್ನು ತೋರಿಸುತ್ತದೆ. ಅದಕ್ಕಿಂತ ಮುಖ್ಯವಾಗಿ ನಾನು ಇವತ್ತು ಮಾನ್ಯ ಸಿದ್ದರಾಮಯ್ಯನವರು ಮೆಚ್ಚುತ್ತೇನೆ. ಇತ್ತೀಚಿನ ದಿನಗಳಲ್ಲಿ ಏನಾಗಿದೆ, ಯೋಜನೆಗಿಂತ ನಮ್ಮ ಯೋಜನೇತರ ವೆಚ್ಚಗಳೇ ಜಾಸ್ತಿಯಾಗುತ್ತಿದೆ. ಹೀಗಾಗಿ ಆರೋಗ್ಯಕರವಾದ ಬೆಳವಣಿಗೆಯಾಗುವುದಿಲ್ಲ. ಯಾವ ರಾಜ್ಯದಲ್ಲಿ ನಾನ್ ಪ್ಲಾನ್ ಎಕ್ಸೆಪೆಂಡೀಚರ್‌ನ್ನು ಕಂಟ್ರೋಲ್ ಮಾಡುವುದಿಲ್ಲವೋ ಆ ರಾಜ್ಯದ ಅಭಿವೃದ್ಧಿ ಬೆಳವಣಿಗೆ ಆಗುವುದಿಲ್ಲ. ಇವತ್ತು ಈ ಸರ್ಕಾರ ನಾನ್ ಪ್ಲಾನ್ ಎಕ್ಸ್‌ಪಂಡೀಚರ್ ಅನ್ನು 62 ಪರ್ಸೆಂಟ್‌ನಿಂದ 45 ಪರ್ಸೆಂಟ್‌ಗೆ ಇಳಿಸಿದ್ದಾರೆ. The previous Governments had 62% Now the nonplan expenditure is reduced to 45% ಇದೊಂದು ದೊಡ್ಡ ಮೈಲಿಗಲ್ಲು. ಅದಕ್ಕಾಗಿ ಇದು ಅಭಿನಂದನೆಗೆ ಅರ್ಹ. ಈ ಸಾರಿ ಮಾನ್ಯ ಸಿದ್ದರಾಮಯ್ಯನವರು ಏನು ಬಜೆಟ್‌ನ್ನು ಮಂಡನೆ ಮಾಡಿದ್ದಾರೆ, ಈ ವರ್ಷದ ಬಜೆಟ್ ಕೊರತೆ ಬಜೆಟ್, 23 ಕೋಟಿ ರೂ. ಈ ವರ್ಷ ಸರ್‌ಪ್ಲಸ್‌ಬಜೆಟ್ It is not a surplus budget for this year. In the revenue account 23 ಕೋಟಿ ರೂ. ಇದೆ, ಇದು ಕೊರತೆ ಬಜೆಟ್ 49 ಕೋಟಿ ರೂ. ಅದು ಹೇಗೆ ಸರ್‌ಪ್ಲಸ್ ಆಯಿತು, 2004–05ನೇ ಸಾಲಿನಲ್ಲಿ ಆರ್ಥಿಕ ಶಿಸ್ತನ್ನು ತಂದಿದ್ದರಿಂದ ಆರಂಭದ ಶಿಲ್ಕು 72 ಕೋಟಿ ರೂಪಾಯಿ ಇತ್ತು., ಆ ಆರಂಭದ ಶಿಲ್ಕು ಇರುವುದರಿಂದ ಇವತ್ತು 49 ಕೋಟಿ ರೂಪಾಯಿಯ ಸರ್‌ಪ್ಲಸ್ ಬಜೆಟ್‌ಅನ್ನು ಮಂಡಿಸಲಿಕ್ಕೆ ಸಾಧ್ಯವಾಯಿತು. ಇವೆಲ್ಲವೂ ಕೂಡ ಅಭಿನಂದನೆಗೆ ಕಾರಣವಾಗುತ್ತದೆ. ಅದರ ಜೊತೆಗೆ ನಮ್ಮ ಉಪ ಮುಖ್ಯಮಂತ್ರಿಗಳು ಈ ವರ್ಷದಿಂದ ಮೌಲ್ಯವರ್ಧಿತ ತೆರಿಗೆಯನ್ನು ಜಾರಿಗೆ ತರುತ್ತೇವೆಂದು ನಿನ್ನೆ ಕೂಡ ಸಧೃಡವಾಗಿ ಹೇಳಿದ್ದಾರೆ. ನಾವು ಇದನ್ನು ಸ್ವಾಗತಿಸಬೇಕು. ವಾಟ್ ಈಸ್ ವ್ಯಾಟ್? ಮೌಲ್ಯ ವರ್ಧಿತ ತೆರಿಗೆಯನ್ನು ನಾವು ಏಕೆ ಸ್ವಾಗತಿಸಬೇಕಾಗಿದೆ? ಇವತ್ತು ಜಗತ್ತು ಯಾವ ಕಡೆಗೆ ಹೋಗುತ್ತದೆ ನಾವು ಆ ಕಡೆಗೆ ಹೋಗಬೇಕು. ಇವತ್ತು ಸೂರ್ಯನ ವಿರುದ್ಧ ದಿಕ್ಕಿನಲ್ಲಿ ನಾವು ಕೊಡೆ ಹಿಡಿದರೆ ನಮಗೆ ಬಿಸಿಲು ಬೀಳುತ್ತದೆ. ಏಕೆ ವ್ಯಾಟ್‌ಬೇಕು? ನಮ್ಮ ಇಡೀ ಪ್ರಪಂಚದಲ್ಲಿ 168 ದೇಶಗಳಲ್ಲಿ ಈ ವ್ಯಾಟ್‌ಅನ್ನು ಜಾರಿಗೆ ತಂದಿದ್ದಾರೆ. ಇಲ್ಲಿ ತೆರಿಗೆಗಳನ್ನು ಕದಿಯಲಿಕ್ಕೆ ಸಾಧ್ಯವಿಲ್ಲ. ಒಂದು ಕಡೆ ನಮ್ಮ ರಾಷ್ಟ್ರದ ಬ್ಲೂಟಿ ಓ ಅಗ್ರಿಮೆಂಟ್ ಮಾಡಿಕೊಂಡಿದೆ, ಇದನ್ನು ಮಾಡಿಕೊಂಡ ಮೇಲೆ ಸ್ಪರ್ಧಾತ್ಮಕವಾದಂಥ ದಿನಮಾನಗಳಲ್ಲಿ ನಮ್ಮ ವಸ್ತುಗಳನ್ನು ಮಾರಾಟ ಮಾಡಬೇಕಾಗುತ್ತದೆ. ವಿಶ್ವಮಟ್ಟದಲ್ಲಿ ಸ್ಪರ್ಧಾತ್ಮಕವಾಗಿ ನಮ್ಮ ವಸ್ತುಗಳನ್ನು ಮಾರಾಟ ಮಾಡಬೇಕಾಗಿದ್ದರೆ ನಮ್ಮ ತೆರಿಗೆ ಕಡಿಮೆಯಾಗಬೇಕು. ಮಾರಾಟ ತೆರಿಗೆ ಕಡಿಮೆಯಾಗಬೇಕು, ಟನ್ ಓವರ್ ಟ್ಯಾಕ್ಸ್ ಕಡಿಮೆಯಾಗಬೇಕು, ಮಲ್ಟಿಪಲ್ ಟ್ಯಾಕ್ಸ್ ಕಡಿಮೆಯಾಗಬೇಕು, ಅಂದಾಗ ಮಾತ್ರ ನಾವು ನಮ್ಮ ಸಾಮಾನುಗಳನ್ನು ರಾಜ್ಯ, ರಾಷ್ಟ್ರ ಹಾಗೂ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಮಾರಾಟ ಮಾಡಲಿಕ್ಕೆ ಸಾಧ್ಯ. ಈಗಿರುವಂಥ ತೆರಿಗೆ ವ್ಯವಸ್ಥೆ ಮಲ್ಟಿಪಲ್ ಟ್ಯಾಕ್ಸ್ ಇದೆ ಇದರಿಂದ ಯಾರಿಗೂ

ಪ್ರಯೋಜನವಿಲ್ಲ ಮತ್ತು ಅದರ ಜೊತೆಗೆ ತೆರಿಗೆಗಳನ್ನು ಕದಿಯಲಿಕ್ಕೆ ಅವಕಾಶವಿದೆ ಹಾಗೂ ಭ್ರಷ್ಟಚಾರಕ್ಕೆ ದಾರಿ ಇದೆ. ಅದಕ್ಕಾಗಿ ನಾವು ವ್ಯಾಟ್ ಅನ್ನು ಸ್ವಾಗತಿಸಬೇಕಾಗಿದೆ. ಇದರಿಂದ ನಾವು ಅಂತರ್‌ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸ್ಪರ್ಧೆಯನ್ನು ಮಾಡಲಿಕ್ಕೆ ಒಂದು ಒಳ್ಳೆಯ ಅನುಕೂಲವಾಗುತ್ತದೆ ಅದಕ್ಕೆ ಈ ವ್ಯಾಟ್ ಸಿಸ್ಟಂ ಅನ್ನು ಜಾರಿಗೊಳಿಸಬೇಕು, ತಾವು ಯಾವುದೇ ಇದರಲ್ಲಿ ಇದನ್ನು ನಿಲ್ಲಿಸಬಾರದು.

ಶ್ರೀ ಎಸ್. ರಾಜೇಂದ್ರನ್:– ವ್ಯಾಟ್‌ಗೇನು ಇಂಪರ್ಾಡೆಂನ್ಸ್ ಕೊಟಿದ್ದಾರೋ ಅದಕ್ಕೆ ಪ್ರಿಕಾಷನರಿಯಾಗಿ ಕೇಂದ್ರ ಸರ್ಕಾರದಿಂದ ಹಣ ತೆಗೆದುಕೊಂಡಿದ್ದಾರಾ? ತೆಗೆದುಕೊಳ್ಳಬೇಕು, ಕನ್‌ಸಲ್ಟ್ ಮಾಡಿರಬೇಕು, in case the Central Government fails, what is the fate of the State?

ಶ್ರೀ ಬಸವರಾಜ್ ರಾಯರೆಡ್ಡಿ:– ಬಹುತೇಕ ಇವತ್ತು ಎಲ್ಲಾ ರಾಜಕೀಯ ಪಕ್ಷಗಳು ವ್ಯಾಟ್‌ಅನ್ನು ಸ್ವಾಗತಿಸಿವೆ. ಆದರೆ ಇತ್ತೀಚಿನ ದಿನಗಳಲ್ಲಿ ನಾನು ಪತ್ರಿಕೆಗಳಲ್ಲಿ ಓದಿರುವಂತೆ, ಭಾರತೀಯ ಜನತಾ ಪಕ್ಷ ಇರುವಂಥ ರಾಜ್ಯಗಳಲ್ಲಿ ನಾವು ಈಗ ವ್ಯಾಟ್‌ಅನ್ನು ಜಾರಿಗೆ ತರುವುದಿಲ್ಲ ಎನ್ನುವಂಥ ಒಂದು ಸಂಗತಿಯನ್ನು ಓದಿದೆ. Is shows the double standards of the BJP. I want to cite the double standas of the BJP ಮಾನ್ಯ ಜಸ್ವಂತ್ ಸಿಂಗ್ ರವರು ಅರ್ಥ ಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಮಾನ್ಯ ವಾಜಪೇಯಿರವರು ಪ್ರಧಾನಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ವ್ಯಾಟ್ ಇಡೀ ರಾಷ್ಟ್ರದಲ್ಲಿ ಜಾರಿಗೆ ತರಬೇಕೆಂದು ಅವರೇ ಪ್ರಧಾನ ಮಂತ್ರಿಗಳ ನೇತೃತ್ವದಲ್ಲಿ ಎಲ್ಲಾ ಮುಖ್ಯ ಮಂತ್ರಿಗಳನ್ನು ಕರೆಸಿದ್ದರು. ಬಹುಶಃ ಇವರು ಅದಕ್ಕೂ ನೆನಪು ಮಾಡಿಕೊಂಡಿಲ್ಲವೆಂದು ಕಾಣುತ್ತದೆ. ನಾವು ಅಧಿಕಾರದಲ್ಲಿ ಇದ್ದಾಗ ಒಂದು, ವಿರೋಧ ಪಕ್ಷದಲ್ಲಿ ಇದ್ದಾಗ ಒಂದು, ಎಂದು ಮಾಡುತ್ತಿರುವುದು ತಪ್ಪು. ಇದನ್ನು ಬಿಜೆಪಿ ರಾಜ್ಯಗಳಾದಂಥ ಗುಜರಾತ್ ಇರಬಹುದು ಜಾರ್ಖಂಡ್ ಇರಬಹುದು, ಎಲ್ಲಾ ರಾಜ್ಯಗಳಲ್ಲಿಯೂ ಇದನ್ನು ತರಬೇಕು. If they want to keep up their words. ಇವತ್ತು ಕಮ್ಯುನಿಸ್ಟ್ ರಾಜ್ಯಗಳು ಇದನ್ನು ಸ್ವಾಗತಿಸಿವೆ. ಸ್ವಾಗತ ಅಷ್ಟೇ ಅಲ್ಲ, Ashim Das Gupta, Finance Minister of West Bengal, ಅವರೇ ಈ ವ್ಯಾಟ್‌ನ ಬಗ್ಗೆ ಹೆಚ್ಚು ಮಹತ್ವವನ್ನು ಕೊಟ್ಟದ್ದು. ಇವತ್ತು ಎಲ್ಲಾ ಕಮ್ಯುನಿಸ್ಟ್‌ರು ಒಪ್ಪಿದ್ದಾರೆ. ಹೀಗಾಗಿ ಎಲ್ಲಾ ರಾಜಕೀಯ ಪಕ್ಷಗಳು ವ್ಯಾಟ್ ಅನ್ನು ಸ್ವಾಗತಿಸಿವೆ. ಹಾಗಾದರೆ ಇವತ್ತು ನಮ್ಮಲ್ಲಿ ಶಂಕೆ ಎಲ್ಲಿದೆ? ಇದನ್ನು ವಿರೋಧಿಸುವವರು ಯಾರು? ಇದನ್ನು ವಿರೋಧಿಸುವವರು ಕೆಲವು ತೆರಿಗೆಗಳ್ಳರು. ಈ ತೆರಿಗೆಗಳ್ಳರು ಏನು ಇದ್ದಾರೆ ಅವರು ಇದನ್ನು ವಿರೋಧಿಸುತ್ತಿದ್ದಾರೆ. ಅದಕ್ಕಾಗಿ ಇವರು ಸುಮ್ಮಸುಮ್ಮನೆ ಇದರ ಬಗ್ಗೆ ಭಯ ಹುಟ್ಟಿಸುತ್ತಿದ್ದಾಖಎ. ಅದಕ್ಕಾಗಿ ನಮ್ಮ ಆರ್ಥಿಕ ಇಲಾಖೆಯವರು ಪ್ರತಿ ಜಿಲ್ಲೆಯಲ್ಲಿ ಈ ಮೌಲ್ಯವರ್ಧಿತ ತೆರಿಗೆಯ ಬಗ್ಗೆ ಒಂದು ಸೆಮಿನಾರ್‌ಅನ್ನು ಕಂಡಕ್ಟ್ ಮಾಡಬೇಕು. In every district, there should be some seminar on

that ಏಕೆಂದರೆ ಹೊಸ ಪದ್ಧತಿಯ ವ್ಯವಸ್ಥೆ ಬಂದಿದ್ದರಿಂದ ಬಹಳ ಜನಕ್ಕೆ ಗೊತ್ತಿಲ್ಲ. ಇದರ ಬಗ್ಗೆ ತ್ವರಿತವಾಗಿ ನಮ್ಮ ಆರ್ಥಿಕ ಇಲಾಖೆಯವರು ಹಾಗೂ ನಮ್ಮ ಉಪ ಮುಖ್ಯಮಂತ್ರಿಗಳು ಪ್ರತಿ ಜಿಲ್ಲೆಯಲ್ಲಿ ಒಂದು ಸೆಮಿನಾರ್ ಅನ್ನು ಇಟ್ಟು ಜನರಿಗೆ ತಿಳುವಳಿಕೆಯನ್ನು ಮಾಡಿಕೊಟ್ಟರೆ ಬಹುತೇಕ ಈ ಒಂದು ವ್ಯವಸ್ಥೆ ಜಾರಿಗೆ ಯಶಸ್ವಿಯಾಗುತ್ತೆಂದು ನಾನು ಹೇಳಲಿಕ್ಕೆ ಇಚ್ಚೆಪಡುತ್ತೇನೆ. ಆದ್ದರಿಂದ, ದಯಮಾಡಿ ತಾವು ಈ ವ್ಯಾಟ್‌ನಿಂದ ಹಿಂದಕ್ಕೆ ಹೋಗಬೇಡಿ. ಮಾನ್ಯ ಸಿದ್ದರಾಮಯ್ಯನವರೇ, you should not go back. ಒಂದು ಸಾರಿ ತಾವು ಮಾತು ಕೊಟ್ಟರೆ ಹಿಂದಕ್ಕೆ ಹೋಗುವುದಿಲ್ಲ ಎನ್ನತಕ್ಕಂಥದ್ದು ನನಗೆ ಗೊತ್ತಿದೆ. You are a man of certain quality. ಆದ್ದರಿಂದ, ತಾವು ಯಾರದೇ ಒತ್ತಡಕ್ಕೆ ಬೀಳಬಾರದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಮತ್ತೆ ಈ ವರ್ಷ ವ್ಯಾಟ್‌ನಿಂದ ಏನಾದರೂ ತೊಂದರೆ ಆದರೆ, ಕಏಂದ್ರ ಸರ್ಕಾರ ಸ್ವಲ್ಪ ಇನ್‌ಸೆಂಟಿವ್ಸ್ ಕೊಡುತ್ತದೆ. ಇದರ ಬಗ್ಗೆ ಬಹಳ ಬುದ್ಧಿವಂತಿಕೆ ಉಪಯೋಗ ಮಾಡಿದ್ದಾರೆ. ಆದ್ದರಿಂದ, ಇದರ ಬಗ್ಗೆ ನಾನು ಹೇಳುವಂಥ ಅವಶ್ಯಕತೆ ಇಲ್ಲಿ ಇಲ್ಲ. ಹಾಗೆಯೇ ನಮ್ಮ ಮುಖ್ಯಮಂತ್ರಿಗಳು ಬಹಳ ಜಾಣ್ಮೆ ಕೆಲಸವನ್ನು ಮಾಡಿದ್ದಾರೆ. ಆದ್ದರಿಂದ ಇವರು ಬಹಳ ಲಕ್ಕಿ ಚೀಫ್ ಮಿನಿಸ್ಟರ್ ಆಗಿದ್ದಾರೆ. ಈ ಸಾರಿ ವ್ಯಾಟ್‌ನ್ನು ಜಾರಿಗೆ ತಂದರೆ ಸುಮಾರು 2160 ಕೋಟಿ ರೂಪಾಯಿಗಳಷ್ಟು ನಮ್ಮ ರಾಜ್ಯದ ತೆರಿಗೆ ಕಡಿಮೆ ಆಗಬಹುದೆಂಬ ಅಂದಾಜನ್ನು ಇಟ್ಟಿದ್ದರಿಂದ ನಮಗೆ ಕೇಂದ್ರ ಸರ್ಕಾರ 100 ಪರ್ಸೆಂಟ್ ಈ ಹಣವನ್ನು ಕಟ್ಟಿಕೊಡುತ್ತದೆ.

ಶ್ರೀ ಎಸ್. ರಾಜೇಂದ್ರನ್:– ಮಾನ್ಯ ಉಪಾಧ್ಯಕ್ಷರೆ, ಬಹಳ ಗಂಭೀರ ಆಗಿರತಕ್ಕಂಥ ವಿಷಯ ಏನೆಂದರೆ, you are felicitating the Deputy Chief Minister you are very lucky. You have certain quality.' ಹಾಗಾದರೆ, ಮುಖ್ಯಮಂತ್ರಿ ಈಸ್ ವೆರಿ ಲಕ್ಕಿ ಆಗಿದ್ದರೆ ಡೆಪ್ಯುಟಿ ಚೀಫ್ ಮಿನಿಸ್ಟರ್ ಅನ್ ಲಕ್ಕಿಯೇ? ತಾವು ಇಬ್ಬರನ್ನೂ ಸೇರಿಸಿ ಹೇಳಬೇಕು. ಈಗ ಸಮ್ಮಿಶ್ರ ಸರ್ಕಾರ ಇದೆ.

ಶ್ರೀ ಬಸವರಾಜ್ ರಾಯರೆಡ್ಡಿ:– ಮುಖ್ಯಮಂತ್ರಿಗಳೆಂದರೆ, ಅವರು he is our leader. ಆದ್ದರಿಂದ, ಅವರಿಗೆ ಲಕ್ ಹೊಡೆದರೆ ನಮಗೆಲ್ಲರಿಗೂ ಲಕ್ ಹೊಡೆದ ಹಾಗೆ.

ಶ್ರೀ ಎಸ್. ರಾಜೇಂದ್ರನ್:– ಹಾಗಾದರೆ ಉಪ ಮುಖ್ಯಮಂತ್ರಿಯವರು ಅನ್ ಲಕ್ಕಿಯೇ?

ಶ್ರೀ ಬಸವರಾಜ್ ರಾಯರೆಡ್ಡಿ:– ನಾನು ಈಗಾಗಲೇ ಹೇಳಿದ ಹಾಗೆ ಅವರಿಗೆ ಲಕ್ ಹೊಡದರೆ ಎಲ್ಲರಿಗೂ ಲಕ್ ಹೊಡದೆ ಹಾಗೆ. ಆದ್ದರಿಂದ ಇಲ್ಲಿ ಇಂಡಿವಿಜ್ಯುವಲ್ ಲಕ್ ಬರುವುದಿಲ್ಲ.

ಶ್ರೀ ಎಸ್. ರಾಜೇಂದ್ರನ್:– ಆಯಿತು.

ಶ್ರೀ ಬಸವರಾಜ್ ರಾಯರೆಡ್ಡಿ:– ಮಾನ್ಯ ಉಪಾಧ್ಯಕ್ಷರೆ, ಈ ವರ್ಷ ಏನಾದರೂ 2160 ಕೋಟಿ ರೂಪಾಯಿ ಕೊರತೆ ಬಿದ್ದರೆ ಈ ಹಣವನ್ನು ಸಂಪೂರ್ಣವಾಗಿ ಕೊಡುತ್ತೇವೆಂದು ಕೇಂದ್ರ

ಸರ್ಕಾರ ಹೇಳಿದೆ. ಕೇಂದ್ರ ಸರ್ಕಾರ ಈ ಹಣವನ್ನು ಏನಾದರೂ ಕೊಟ್ಟರೆ ನಮಗೆ ಇನ್ನೂ ಹೆಚ್ಚಿನ ಆರ್ಥಿಕ ಲಾಭವಾಗುತ್ತದೆ. ಆದ್ದರಿಂದ, ಇದರ ಬಗ್ಗೆ ಭಯ ಬೀಳತಕ್ಕಂಥ ಅವಶ್ಯಕತೆ ಇಲ್ಲ. ಮತ್ತೆ ಈ ಸಂದರ್ಭದಲ್ಲಿ 12ನೇ ಹಣಕಾಸಿನ ಆಯೋಗದ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಸಂವಿಧಾನ ಬದ್ಧವಾಗಿ 5 ವರ್ಷಕ್ಕೊಂದು ಸಾರಿ ಈ ಹಣಕಾಸಿನ ಆಯೋಗ ರಚನೆಯಾಗುತ್ತದೆ. ಪ್ರತಿ ರಾಜ್ಯದ ಪರ್ ಕ್ಯಾಪಿಟಾ ಇನ್‌ಕಂ ಮತ್ತು ಬೇರೆ ಬೇರೆ ವಲಯಗಳಲ್ಲಿ ಆಗಿರತಕ್ಕಂಥ ಅಭಿವೃದ್ಧಿಯನ್ನು ಹಣಕಾಸು ಆಯೋಗ ತೆಗೆದುಕೊಂಡು ರಾಜ್ಯಕ್ಕೆ ಹಣವನ್ನು ನಿಗದಿ ಮಾಡುತ್ತದೆ. ಆದರೆ, ಒಂದು ಮತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. 12ನೇ ಹಣಕಾಸು ಆಯೋಗ ಏನು ಮಾಡುತ್ತಿದೆ ಎಂದರೆ, ಯಾವ ರಾಜ್ಯ ಸರಿಯಾಗಿ ಕೆಲಸ ಮಾಡುತ್ತಿರುವ ವಲಯಗಳಿಗೆ ಕಡಿಮೆ ಹಣ ಕೊಡುತ್ತಿದೆ. ಆದ್ದರಿಂದ, ಈ ಸಂಪ್ರದಾಯ ಒಳ್ಳೆಯದಲ್ಲ. ಉದಾಹರಣೆಗೆ ಹೇಳುವುದಾದರೆ ಶಿಕ್ಷಣ ಮತ್ತು ನೀರಾವರಿ ಕ್ಷೇತ್ರದಲ್ಲಿ ಕರ್ನಾಟಕ ರಾಜ್ಯ ಒಳ್ಳೆಯ ಕೆಲಸ ಮಾಡಿದರೆ ಮುಂದಿನ ಫೈನಾನ್ಸ್ ಸ್ಕೀಂನಲ್ಲಿ ಇದಕ್ಕೆ ನಮಗೆ ಹಣ ಕಡಿಮೆ ಕೊಡುತ್ತಾರೆ. ಆದರೆ, ಯಾವ ರಾಜ್ಯಗಳು ಕೆಲಸ ಮಾಡುವುದರಲ್ಲಿ ಹಿಂದೆ ಬೀಳುತ್ತವೆಯೋ ಅಂಥ ರಾಜ್ಯಗಳಿಗೆ ಹೆಚ್ಚಿನ ಹಣ ಕೊಡುತ್ತಾರೆ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ ಜಾಯಿಂಟ್ ಫ್ಯಾಮಿಲಿಯಲ್ಲಿ ಯಾರು ಅಶಕ್ತರಾಗಿರುತ್ತಾರೆಯೋ ಅಂಥವರಿಗೆ ಹೆಚ್ಚು ಸಹಾಯ ಮಾಡುವುದಕ್ಕೆ ಶಕ್ತಿ ಇರತಕ್ಕಂಥವರು ಕೊಡತಕ್ಕಂಥದ್ದು ಸರಿ. ಆದರೆ, ಇವತ್ತಿನದಿವಸ ಕೆಲವು ರಾಜ್ಯಗಳಾದ ಬಿಹಾರ, ಉತ್ತರ ಪ್ರದೇಶ ಹಾಗೂ ಇನ್ನೂ ಕೆಲವು ಉತ್ತರ ರಾಜ್ಯಗಳಲ್ಲಿ ಅಡ್ಮಿನಿಸ್ಟ್ರೇಷನ್ ಬಹಳಷ್ಟು ಕೊಲ್ಯಾಪ್ಸ್ ಆಗಿದೆ. ಅಡ್ಮಿನಿಸ್ಟ್ರೇಷನ್ ಸರಿಯಾಗಿ ಅಲ್ಲಿ ನಡೆಯುತ್ತಿಲ್ಲ. ಆದರೂ ಕೂಡ ಇಂಥ ರಾಜ್ಯಗಳಿಗೆ ಹೆಚ್ಚಿನ ಹಣಕಾಸು ಕೊಡುವುದಕ್ಕೆ ಉತ್ತೇಜನ ಕೊಡತಕ್ಕಂಥದ್ದು ಸರಿಯಾದ ಕ್ರಮವಲ್ಲ. ಮುಂದೆ ಬರತಕ್ಕಂಥ ಫೈನಾನ್ಸ್ ಕಮಿಷನಲ್ಲಿ ನಮ್ಮ ಉಪಮುಖ್ಯಮಂತ್ರಿಗಳು ಈ ಕೆಲವು ನೀತಿ ಬದಲಾವಣೆ ಮಾಡಿಕೊಳ್ಳಬೇಕು. ವಲಯಗಳಲ್ಲಿ ಯಾರು ಹೆಚ್ಚು ಕೆಲಸ ಮಾಡುತ್ತಾರೆ ಅಂಥವರಿಗೆ ಕೆಲವು ಇನ್‌ಸೆಂಟೀವ್ಸ್ ಕೊಡಬೇಕಾಗುತ್ತದೆ. ಇದಕ್ಕೆ ತಾವು ಒತ್ತಾಯ ಕೂಡ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆರ್ಥಿಕ ಶಿಸ್ತು ಮತ್ತು ಯಾರು ಸಮರ್ಥರಾಗಿದ್ದಾರೆ ಅಂಥ ರಾಜ್ಯಗಳಿಗೆ ಒಳ್ಳೆಯ ಇನ್‌ಸೆಂಟಿವ್ಸ್‌ನ್ನು ಕೊಡತಕ್ಕಂಥ ಕೆಲಸವನ್ನು ಇವತ್ತಿನದಿವಸ ಕೇಂದ್ರ ಸರ್ಕಾರ ಮಾಡುತ್ತಿದೆ. ಮತ್ತೆ ಕರ್ನಾಟಕ ರಾಜ್ಯ ಮೊಟ್ಟಮೊದಲ ಬಾರಿಗೆ ಈ ಒಂದು ಆರ್ಥಿಕ ಶಿಸ್ತನ್ನು ತರತಕ್ಕಂಥ ಕೆಲಸವನ್ನು ಮಾಡಿದೆ. 2002ನೇ ಇಸವಿಯಲ್ಲಿ ಸನ್ಮಾನ್ಯ ಎಸ್. ಎಂ.ಕೃಷ್ಣರವರು ಮುಖ್ಯಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಕರ್ನಾಟಕ ಫಿಜಿಕಲ್ ರೆಸ್ಪಾನ್ಸಿಬಿಲಿಟಿ ಆ್ಯಕ್ಟ್ ಅನ್ನು ಜಾರಿಗೆ ತಂದರು. ಇದಕ್ಕೆ ಅವರು ಬುನಾದಿ ಹಾಕಿದರು. ಅವರು ಬುನಾದಿ ಹಾಕಿರತಕ್ಕಂಥದಕ್ಕೆ ಅತ್ಯಂತ ಸುಂದರವಾದಂಥ ಬಿಲ್ಡಿಂಗ್‌ನ್ನು ಮಾನ್ಯ ಸಿದ್ದರಾಮಯ್ಯನವರು ಮತ್ತು ಮಾನ್ಯ ಧರ್ಮಸಿಂಗ್‌ನವರು ಕಟ್ಟಿದ್ದಾರೆ. ಫಿಸ್‌ಕಲ್ ರೆಸ್ಪಾನ್ಸಿಬಲ್ ಆ್ಯಕ್ಟ್ ನಿಜವಾಗಿಯೂ ಕೂಡ ಬಹಳ ಒಳ್ಳೆಯದು. ಅತ್ಯಂತ ಆರ್ಥಿಕ ಶಿಸ್ತನ್ನು ಇವರು ಪಾಲನೆ

ಮಾಡಿದ್ದಾರೆ. ಅಂದರೆ, ತೆರಿಗೆಯನ್ನು ಸಂಗ್ರಹಣೆ ಮಾಡಿದ್ದಾರೆ ಮತ್ತು ಯೋಜನೇತರ ವೆಚ್ಚವನ್ನು ಕಡಿಮೆ ಮಾಡಿದ್ದಾರೆ ಮತ್ತು ಸಾಲ ಹಾಗೂ ತೆರಿಗೆಯ ಹೊರೆಯಿಲ್ಲದೆ ಇರತಕ್ಕಂಥ ಒಳ್ಳೆಯ ಬಜೆಟ್‌ನ್ನು ಇವರು ಮಾಡಿದ್ದಾರೆ. ಮತ್ತೆ ಈಗ ತಂದಿರತಕ್ಕಂಥ ಫಿಸ್‌ಕಲ್ ರೆಸ್ಪಾನ್ಸಿಬಿಲಿಟಿ ಆ್ಯಕ್ಟ್‌ನಲ್ಲಿರತಕ್ಕಂಥ ಕೆಲವು ತತ್ವಗಳನ್ನು ಇವರು ಇದರಲ್ಲಿ ಪಾಲಿಸಿದ್ದಾರೆ. ಅದರಲ್ಲಿರತಕ್ಕಂಥ ತತ್ವ ಏನು ಹೇಳುತ್ತದೆಂದರೆ, ರಾಜ್ಯ ಸರ್ಕಾರವೂ ರಾಜಸ್ವ ಕೊರತೆಯನ್ನು ನಿವಾರಿಸುವುದಕ್ಕೆ ಮತ್ತು ಆರ್ಥಿಕ ಕೊರತೆಯ ನಿರ್ವಾಹಣಾ ಸಾಮರ್ಥ್ಯದ ಹಂತದೊಳಗೆ ಇರುವಂತೆ ತಡೆಯುವುದಕ್ಕೆ ಮತ್ತು ಸಾಕಷ್ಟು ಹೆಚ್ಚಿನ ರಾಜಸ್ವ ಸಂಗ್ರಹಣೆ ಮಾಡುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುವುದೆಂದು ಇದೆ. ಈ ಕೆಲಸವನ್ನು ಈ ಸರ್ಕಾರ ಮಾಡಿದೆ. ಮತ್ತೊಂದು ತತ್ವವನ್ನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ಬಂಡವಾಳ ಸಂಗ್ರಹಣೆಯಲ್ಲಿ ಮತ್ತು ಉತ್ಪಾದಕ ವೆಚ್ಚಗಳಲ್ಲಿ ಉಪಯೋಗಿಸುವುದಕ್ಕಾಗಿ ರಾಜಸ್ವದ ಹೆಚ್ಚಳವನ್ನು ವೃದ್ಧಿಪಡಿಸುವುದೆಂದು ಹೇಳಿದೆ. ಆದ್ದರಿಂದ, ಇವರು ಮಾಡಿರತಕ್ಕಂಥ ಕೆಲಸ ಇದೇ ಆಗಿದೆ. ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಆ್ಯಕ್ಟ್‌ನ್ನು ನೀವು ತಂದಿದ್ದಕ್ಕೆ ಕೇಂದ್ರ ಸರ್ಕಾರ ಕಳೆದ ಸಾರಿ 158 ಕೋಟಿ ರೂಪಾಯಿ ಕೊಟ್ಟಿದೆ. ಈ ಸಾರಿ ಬಹುತೇಕ ಇನ್ನೂ ಹೆಚ್ಚು ಕೊಡಬಹುದು. ಮತ್ತೆ ಕೇಂದ್ರ ಸರ್ಕಾರ ಕೂಡ ಈ ರೀತಿಯಸಾಧನೆ ಮಾಡುವುದಕ್ಕೆ ಆಗಿಲ್ಲ. ಇವತ್ತು ಕೇಂದ್ರ ಸರ್ಕಾರ ಕೂಡ ಫಿಸ್‌ಕಲ್ ರೆಸ್ಪಾನ್ಸಿಬಲ್ ಆ್ಯಕ್ಟ್ ನ್ನು ತಂದಿದೆ. ಆದರೆ, ಅವರೂ ಕೂಡ ಈ ರೀತಿ ಸಾಧನೆ ಮಾಡಿಲ್ಲ. ಕೇಂದ್ರ ಸರ್ಕಾರ ಮಾಡದೇ ಇರುವಂಥ ಆರ್ಥಿಕವಲಯದಲ್ಲಿ ಒಳ್ಳೆಯ ಕೆಲಸವನ್ನು ನಮ್ಮ ರಾಜ್ಯ ಸರ್ಕಾರ ಮಾಡಿದೆ. ಫೈನಾನ್ಸ್ ಫಿಸ್‌ಕಲ್ ರೆಸ್ಪಾನ್ಸಿಬಿಲಿಟಿ ಆ್ಯಕ್ಟ್ ಪ್ರಕಾರ ಆರ್ಥಿಕ ಶಿಸ್ತನ್ನು ತರತಕ್ಕಂಥದರಲ್ಲಿ ಇಡೀ ರಾಷ್ಟ್ರದಲ್ಲಿಯೇ ಪ್ರಥಮವಾಗಿರತಕ್ಕಂಥದ್ದು ನಮ್ಮ ಕರ್ನಾಟಕ ಎನ್ನತಕ್ಕಂಥದನ್ನು ದಯಮಾಡಿ ನಮ್ಮ ವಿರೋಧಪಕ್ಷದ ನಾಯಕರು ಗಮನಿಸಬೇಕು. ಮೊನ್ನೆದಿವಸ ಹಂಪಿಯಲ್ಲಿ ಇವತ್ತಿನ ದಿವಸ ರಾಜಕೀಯಕ್ಕಾಗಿ ಬಹಳಷ್ಟು ಮಂದಿಯನ್ನು ಡೆಪ್ಯುಟಿ ಛೇರ್ಮನ್ ಆಗಿ ಮಾಡುತ್ತಾರೆ, ಆದರೆ, he is not only the Deputy Chairman. He is not a political man. He was working in IMF, World Bank. ಅಂತಹ ಒಬ್ಬ ಆರ್ಥಿಕ ತಜ್ಞರು ಕರ್ನಾಟಕ ರಾಜ್ಯವನ್ನು ನೆನ್ನೆದಿಸವ ಹೊಗಳಿದ್ದಾರೆ. ಇವರೇನೂ ಕಾಂಗ್ರೇಸ್ ಅಥವಾ ಜನತಾ ದಳ ಪಕ್ಷಕ್ಕೆ ಸೇರಿದವರಲ್ಲ. ಒಬ್ಬ ಆರ್ಥಿಕ ತಜ್ಞ ಕರ್ನಾಟಕ ಸರ್ಕಾರದ ಆರ್ಥಿಕ ಶಿಸ್ತನ್ನು ಹೊಗಳಬೇಕಾದರೆ there must be something ಆದ್ದರಿಂದ, ಈ ಕೆಲಸವನ್ನು ಮಾನ್ಯ ಸಿದ್ದರಾಮಯ್ಯನವರೇ, ತಾವು ಮುಂದುವರಿಸಿ. ಆದ್ದರಿಂದಲೇ ಲಕ್ಷ್ಮೀ ಎಂದು ಈಗಾಗಲೇ ನಾನು ಹೇಳಿದ್ದೇನೆ. ಏಕೆಂದರೆ ಈ ಸಾರಿ ನಿಮಗೆ ಕೇಂದ್ರ ಸರ್ಕಾರದಿಂದ 1200 ಕೋಟಿ ರೂಪಾಯಿಗಳಷ್ಟು ಇನ್‌ಸೆಂಟಿವ್ಸ್ ಸಿಗುತ್ತದೆ. ಇದು ನಿಮಗೆ ಸಿಗಲೇ ಬೇಕಾಗುತ್ತದೆ. ಕೇಂದ್ರ ಸರ್ಕಾರ ಇದನ್ನು ಮೆಚ್ಚಿದರೆ, ತಾವು ಜುಲೈ ತಿಂಗಳವರೆಗೆ ಲೇಖಾನುದಾನ ತೆಗೆದುಕೊಳ್ಳುತ್ತಿದ್ದೀರಿ. ಆದರೆ, ಆನಂತರ ಮತ್ತೊಂದು ಸ್ಪೆಷಲ್ ಬಜೆಟ್‌ನ್ನು ಮಂಡನೆ ಮಾಡತಕ್ಕಂಥ ಪ್ರಸಂಗ ಬಹುತೇಕ ಬಂದರೂ ಬರಬಹುದು. I wish

you good luck for you and your team and your government. ಹಲವಾರು ವಲಯಗಳಿಗೆ ಹೆಚ್ಚಿನ ಒತ್ತನ್ನು ಈ ಆಯವ್ಯಯದಲ್ಲಿ ಈ ಸರ್ಕಾರ ಕೊಟ್ಟಿದೆ. ಅದರಲ್ಲಿಯೂ ಮುಖ್ಯವಾಗಿ ಕೃಷಿ ಮತ್ತು ನೀರಾವರಿ ಕ್ಷೇತ್ರಕ್ಕೆ ಹೆಚ್ಚಿನ ಒತ್ತನ್ನು ಮತ್ತು ಹೆಚ್ಚು ಹಣವನ್ನು ಕೊಟ್ಟಿದ್ದೀರಿ. ಇದಕ್ಕೆ ಸಂಬಂಧಪಟ್ಟಂತೆ ಕೆಲವು ಸಲಹೆಗಳನ್ನು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಇವತ್ತಿನದಿವಸ 100 ಪರ್ಸೆಂಟ್ ಒಳ್ಳೆಯ ಕೆಲಸಗಳನ್ನು ಮಾಡಿದರೂ ಕೂಡ ಕೆಲವು ಒಳ್ಳೆಯ ಸಲಹೆಗಳನ್ನು ಕೊಡಲೇಬೇಕಾಗುತ್ತದೆ. ಈ ಒಂದು ಹಿನ್ನಲೆಯಲ್ಲಿ ಹೇಳುವುದಾದರೆ, ಕೃಷಿ ವಲಯದ ಚಟುವಟಿಕೆಗಳಿಗೆ ಈ ವರ್ಷ 857 ಕೋಟಿ ರೂಪಾಯಿಗಳನ್ನು ತೆಗೆದಿರಿಸಿರತಕ್ಕಂಥದ್ದು ನಿಜವಾಗಿಯೂ ಕೂಡ ಸಂತೋಷದ ವಿಚಾರ. ಇವತ್ತಿನದಿವಸ ನಮ್ಮ ರಾಜ್ಯದಲ್ಲಿ ಶೇಕಡ 75 ರಷ್ಟು ಜನ ಕೃಷಿಯನ್ನು ಅವಲಂಬಿತರಾಗಿದ್ದಾರೆ. ಮತ್ತೆ ಶೇಕಡ 69 ರಷ್ಟು ಜನ ಇವತ್ತಿನದಿವಸ ಖುಷ್ಕಿ ಭೂಮಿಯಲ್ಲಿ ಕೃಷಿ ಮಾಡುತ್ತಿದ್ದಾರೆ. ಮತ್ತೆ ನಮ್ಮ ರಾಜ್ಯದಲ್ಲಿ ಕೇವಲ 31 ಪರ್ಸೆಂಟ್‌ನಷ್ಟು ಮಾತ್ರ ನೀರಾವರಿ ಪ್ರದೇಶವನ್ನು ಹೊಂದಿದೆ. ಆದರೆ, ನಮ್ಮ ದುರ್ದೈವಕ್ಕೆ ನಮ್ಮ ರಾಜ್ಯದಲ್ಲಿ ಒಳ್ಳೆಯ ಮಣ್ಣು ಮತ್ತು ನೀರೂ ಕೂಡ ಇದೆ. ಆದರೆ, ನೀರಾವರಿ ಸೌಲಭ್ಯಗಳನ್ನು ಮಾಡಿಕೊಳ್ಳುವುದರಲ್ಲಿ ನಾವು ಸ್ವಲ್ಪ ಹಿಂದೆ ಬಿದ್ದಿದ್ದೇವೆ. ಇವತ್ತಿನದಿವಸ ರಾಜಸ್ತಾನ ರಾಜ್ಯ ಬಿಟ್ಟರೆ ಅತೀ ಹೆಚ್ಚು ಒಣ ಭೂಮಿ ಪ್ರದೇಶ ಹೊಂದಿರತಕ್ಕಂಥದ್ದು ಕರ್ನಾಟಕ ರಾಜ್ಯ ಮಾತ್ರ ಆದ್ದರಿಂದ, ನೀರಾವರಿ ಮತ್ತು ಕೃಷಿ ಚಟುವಟಿಕೆಗಳಿಗೆ ಹೆಚ್ಚಿನ ಆದ್ಯತೆಗಳನ್ನು ಕೊಡಬೇಕಾಗುತ್ತದೆ. ನೀರಾವರಿ ವಲಯದ ಬಗ್ಗೆ ಆನಂತರ ಮಾತನಾಡುತ್ತೇನೆ. ಮೊದಲು ಕೃಷಿಕರ ಬಗ್ಗೆ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಈ ಸಂದರ್ಭದಲ್ಲಿ ಮಾನ್ಯ ಸಿದ್ಧರಾಮಯ್ಯನವರ ಗಮನಕ್ಕೆ ತರುವುದೇನೆಂದರೆ, ಇವತ್ತಿನದಿವಸ ಹಾರ್ಟಿಕಲ್ಚರ್ ಕ್ರಾಪ್‌ಗಳಿಗೆ ವಾಟರ್ ಮ್ಯಾನೇಜ್‌ಮೆಂಟ್ ವ್ಯವಸ್ಥೆಗೆಂದು, ಅಂದರೆ ಡ್ರಿಪ್ ಇರಿಗೇಶನ್‌ಗೆ ಕೋಲಾರ ಮತ್ತು ಬಿಜಾಪುರ ಜಿಲ್ಲೆಗಳಿಗೆ ಮಾತ್ರ 100 ಪರ್ಸೆಂಟ್ ಸಬ್ಸಿಡಿ ಕೊಡುತ್ತಿದ್ದೀರಿ. ದಯವಿಟ್ಟು ಇದನ್ನು ಎಲ್ಲಾ ಜಿಲ್ಲೆಗಳಿಗೆ ಅಂದರೆ, ಇವತ್ತಿನದಿವಸ ಎಲ್ಲೆಲ್ಲಿ ಹಾರ್ಟಿಕಲ್ಚರ್ ಕ್ರಾಪ್ ಬೆಳೆಯುತ್ತಿದ್ದಾರೆ ಅಂಥ ಕಡೆ ಕೂಡ ಈ ಸ್ಕೀಂನ್ನು ಎಕ್ಸ್‌ಟೆಂಡ್ ಮಾಡಿ. ಇವತ್ತಿನದಿವಸ ಕೊಪ್ಪಳ ಜಿಲ್ಲೆಯ ಕುಷ್ಟಗಿ ಮತ್ತು ಯಲಬುರ್ಗಾ ತಾಲ್ಲೂಕಿಗೆ ಇಸ್ರೇಲ್ ಟೆಕ್ನಾಲಜಿ ಅಪ್ರೋವಲ್ ಮಾಡಿದ್ದೀರಿ. what does it mean? That means it is the best Horticultural district. Bagalkot is one of the best Horticultural districts. ಚಿತ್ರದುರ್ಗ ಮತ್ತು ನಿಮ್ಮ ಹಳೆಯ ಮೈಸೂರು ಮತ್ತು ಚಾಮರಾಜನಗರದಲ್ಲಿಯೂ ಕೂಡ ಹಾರ್ಟಿಕಲ್ಚರ್ ಕ್ರಾಪ್ ಬೆಳೆಯುತ್ತಿರಬಹುದು.

ಶ್ರೀ ಎಸ್. ರಾಜೇಂದ್ರನ್:- ಕೋಲಾರ ಜಿಲ್ಲೆಯಲ್ಲಿಯೂ ಕೂಡ ಹಾರ್ಟಿಕಲ್ಚರ್ ಕ್ರಾಪ್ ಹೆಚ್ಚಾಗಿ ಬೆಳೆಯುತ್ತಾರೆ.

ಶ್ರೀ ಬಸವರಾಜ್ ರಾಯರೆಡ್ಡಿ:- ಕೋಲಾರ ಜಿಲ್ಲೆಗೆ ಈಗಾಗಲೇ ಸಬ್ಸಿಡಿ ಕೊಟ್ಟಿದ್ದಾರೆ. ಹೀಗಾಗಿ ನೀವು ಹನಿ ನೀರಾವರಿಯನ್ನು ಪ್ರೋತ್ಸಾಹಿಸಬೇಕಾಗಿದೆ, ನಾವು ಬರೀ ಮಾತನಾಡುತ್ತೇವೆ,

ಬೋರ್‌ವೆಲ್ ಹೊಡೆದರೆ ನೀರು ಬರುವುದಿಲ್ಲ. ನಮ್ಮ ರೈತರಿಗೆ we have to teach the water management. ವಾಟರ್ ಮ್ಯಾನೇಜ್‌ಮೆಂಟ್‌ನ್ನು ನಾವು ಕೃಷಿಗೆ ತಿಳಿಸಬೇಕಾಗಿದ್ದರೆ, ಹನಿ ನೀರಾವರಿಯನ್ನು ನಾವು ತಿಳಿಸಿಕೊಡಲೇಬೇಕು. There is a drip irrigation. There is a mist irrigation. Mist irrigation, we are not talking at alll. ಓನ್ಲಿ ಡ್ರಿಪ್ ಇರಿಗೇಶನ್ ಬಗ್ಗೆ ಮಾತನಾಡುತ್ತಿದ್ದೇವೆ. ಅದಕ್ಕೆ ನೀವು 100 ಪರ್ಸೆಂಟ್ ಸಬ್ಸಿಡಿ ಕೋಲಾರ ಮತ್ತು ಬಿಜಾಪುರ ಜಿಲ್ಲೆಗಳಿಗೆ ಕೊಟ್ಟಿದ್ದೀರಿ, ಹಾರ್ಟಿಕಲ್ಚರ್ ಡಿಸ್ಟ್ರಿಕ್ಸ್, ಎಲ್ಲಿ ಬಯಲು ಪ್ರದೇಶದ ಭೂಮಿ ಇದೆ, ದಯಮಾಡಿ ಬಾಗಲಕೋಟ ಕೊಪ್ಪಳ, ರಾಯಚೂರ ಗುಲ್ಬರ್ಗಾ, ಬೀದರ ಉತ್ತರ ಕರ್ನಾಟಕದ ಜೊತೆಗೆ ಚಿತ್ರದುರ್ಗ ಈ ಕಡೆ ಹಳೆ ಮೈಸೂರು ಜಿಲ್ಲೆಗಳಿಗೂ ಕೂಡ ನೀವು ಕನಿಷ್ಠ 90 ಪರ್ಸೆಂಟ್ ಆದರೂ ಈ ಎಲ್ಲಾ ಜಿಲ್ಲೆಗಳಿಗೆ ಕೊಡಬೇಕು. ಉತ್ತರ ಕರ್ನಾಟಕಕ್ಕೆ ತಾವು 100 ಪರ್ಸೆಂಟ್ ಕೊಟ್ಟು ಹಳೆ ಮೈಸೂರಿಗೆ 80–90 ಪರ್ಸೆಂಟ್ ಕೊಟ್ಟುಕೊಳ್ಳಬೇಕು. Please extend this facility to all farmers. Please don't divide the farmers. ಈ ಸಲಹೆಯನ್ನು ತಾವು ಒಪ್ಪುತ್ತೀರಿ ಎಂದು ನಾನು ಭಾವಿಸುತ್ತೇನೆ. ನಾನು ಇನ್ನೊಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ತಾವು ಹೆಚ್ಚು ಕಡಿಮೆ 33 ಕೋಟಿ ರೂ.ಗಳನ್ನು ರೈತರಿಗೆ ಬೀಜ ಮತ್ತು ಗೊಬ್ಬರಗಳನ್ನು ರೈತ ಮಿತ್ರಕೇಂದ್ರದ ಮೂಲಕ ಕೊಡಲಿಕ್ಕೆ 33 ಕೋಟಿ ರೂ.ಗಳನ್ನು ಕೊಟ್ಟಿದ್ದೀರಿ ಆದರೆ ಇದು ಸಾಲದು. ನಿಮಗೆ ಗೊತ್ತಿದೆ, ಕಳೆದ 4 ವರ್ಷಗಳಿಂದ ಸತತವಾದ ಭೀಕರ ಬರಗಾಲ ನಮ್ಮ ರಾಜ್ಯದಲ್ಲಿ ಬಂದಿದೆ. ಇವತ್ತು ರೈತನ ಹತ್ತಿರ ಊಟ ಮಾಡುವುದಕ್ಕೆ ಧಾನ್ಯವಿಲ್ಲ, ಬಿತ್ತಲಿಕ್ಕೆ ಬೀಜವಿಲ್ಲ. ಮಳೆಯಾಗದಿರುವುದರಿಂದ ಬೀಜ ಬಂದಿಲ್ಲ, ಹೀಗಾಗಿ ಇವತ್ತು ರೈತ ಮಳೆಯಾದಂಥ ಪ್ರದೇಶ ಇರಬಹುದು, ಅಥವಾ ಸಣ್ಣಪುಟ್ಟ ನೀರಾವರಿ ಪ್ರದೇಶದಲ್ಲಿ ಕೂಡ ಬಿತ್ತನೆಯ ಬೀಜಕ್ಕೆ ಹಣದ ಅಭಾವವಿದೆ. ದಯಮಾಡಿ ಇದನ್ನು ನೀವು 100 ಕೋಟಿ ರೂ.ಗಳಿಗೆ ಏರಿಸಬೇಕು. ಈ 33 ಕೋಟಿ ರೂ.ಗಳ ಬದಲಾಗಿ, you have to provide Rs. 100 crore for purchase of Seeds. ಇಲ್ಲಿ ಕ್ವಾಲಿಟಿ ಬೀಜವನ್ನು ಸಪ್ಲೈ ಮಾಡುವಂತೆ ನೀವು ಕ್ರಮವನ್ನು ಕೂಡ ತಾವು ತೆಗೆದುಕೊಂಡರೆ ರೈತರಿಗೆ ಅನುಕೂಲವಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಬಹುತೇಕ ನನ್ನ ಈ ಎರಡು ಸಲಹೆಗಳನ್ನು ಒಪ್ಪುತ್ತೀರಿ. ಏಕೆಂದರೆ it is a very small money for your, ಅದಕ್ಕಾಗಿ ತಾವು ಒಪ್ಪುತ್ತೀರಿ ಎಂದು ನಾನು ಭಾವಿಸುತ್ತೇನೆ. ಬೇಳೆ ವಿಮೆಯಲ್ಲಿ ಕೂಡ ಒಂದು ಒಳ್ಳೆಯ ಹೆಜ್ಜೆಯನ್ನು ಈ ಸರ್ಕಾರ ಇಟ್ಟಿದೆ. ಮೊದಲು ಬೆಳೆ ವಿಮೆಯನ್ನು ತಾಲ್ಲೂಕು ಮಟ್ಟದಲ್ಲಿ ಮಾಡುತ್ತಿದ್ದರು. ಅಂದರೆ ಯಾವ್ಯಾವ ತಾಲ್ಲೂಕಿನಲ್ಲಿ ಎಷ್ಟು ಪ್ರಮಾಣದ ಮಳೆ ಬಂದಿದೆ ಎಂದು, ನೋಡಿಕೊಂಡು ಮಳೆಯ ಪ್ರಮಾಣದ ಆಧಾರದ ಪ್ರತಿ ತಾಲ್ಲೂಕಿನಲ್ಲಿ ಬೆಳೆ ವಿಮೆಯನ್ನು ನಿಗದಿ ಮಾಡುತ್ತಿದ್ದರು. ಇದು ಅತ್ಯಂತ ಅವೈಜ್ಞಾನಿಕ ಕ್ರಮ, ಇವತ್ತು ಏನಾಗಿದೆ ಎಂದರೆ, ಏನು ಮಳೆಯಾಗುತ್ತದೆ ಇತ್ತೀಚಿನ ದಿನಮಾನಗಳಲ್ಲಿ ಮಳೆ ಪ್ರತಿ ಚ.ಕೀ.ಮೀ. ಗೂ ಬದಲಾವಣೆಯಾಗುತ್ತದೆ. We should take

the sicentific and geographical method. ಪ್ರತಿ ಚ.ಕಿ.ಮೀ.ಗೆ ಮಳೆಯ ಪ್ರಮಾಣ ಕೂಡ ವ್ಯತ್ಯಾಸವಿದೆ. ಹೀಗಾಗಿ ಇದನ್ನು ನೀವು ಕಡೆಗಣಿಸಿ ಪಂಚಾಯಿತಿ ಮಟ್ಟದಲ್ಲಿ ಇದನ್ನು ತಂದಿದ್ದೀರಿ ಇದು ಬಹಳ ಸಂತೋಷದ ಸಂಗತಿ. ಸಾಧ್ಯವಾದರೆ, please limit it to the village-wise. ಪ್ರತಿಯೊಂದು ಗ್ರಾಮಕ್ಕೆ ತಂದರೂ ಕೂಡ ತಪ್ಪಾಗಲಿಕ್ಕಿಲ್ಲ. ಅದಕ್ಕಾಗಿ ತಾವು ಏನು ಒಂದು ಒಳ್ಳೆಯ ಕೆಲಸವನ್ನು ಮಾಡಿದ್ದೀರಿ ಪಂಚಾಯಿತಿ ಮಟ್ಟದಲ್ಲಿ ಇದನ್ನು ಸಾಧ್ಯವಾದರೆ ಇದೆ ವರ್ಷದಲ್ಲಿ ಪ್ರತಿ ಪಂಚಾಯಿತಿ ಮಟ್ಟಕ್ಕೆ ತಂದರೆ ನಿಮ್ಮದೇನೂ ತಪ್ಪಾಗಲಿಕ್ಕಿಲ್ಲ. ಇದರಿಂದ ನಿಮಗೇನೂ ನಷ್ಟವಾಗುವುದಿಲ್ಲ. ಅದರ ಬಗ್ಗೆ ಕೂಡ ತಾವು ವಿಚಾರ ಮಾಡಬೇಕು. ಈ ಒಂದು ಬೆಳೆ ವಿಮೆಯಲ್ಲಿ ಬಹಳಷ್ಟು ಅವ್ಯವಹಾರವಾಗುತ್ತದೆ, ಅವ್ಯವಹಾರವಾಗಿದೆ. ಕಂಪನಿಗಳಲ್ಲಿ ಮತ್ತು ಇನ್ನೊಂದರಲ್ಲಿ ಅಡ್ಜಸ್ಟ್‌ಮೆಂಟ್ ಇದು ಎಲ್ಲಾ ಆಗಿದೆ. ಇವೆಲ್ಲವನ್ನೂ ತಪ್ಪಿಸಬೇಕಾದರೆ ನೀವು ಗ್ರಾಮ ಮಟ್ಟದಲ್ಲಿ ಬೆಳೆ ವಿಮೆಯನ್ನು ಜಾರಿಗೆ ತಂದರೆ ಅತ್ಯಂತ ಪಾರದರ್ಶಕವಾಗುತ್ತದೆ. ಅವ್ಯವಹಾರವನ್ನು ತಪ್ಪಿಸುವುದಕ್ಕಾಗುತ್ತದೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನೊಂದು ಒಳ್ಳೆಯ ಗಹನವಾದ ಕೆಲಸವನ್ನು ಕೃಷಿ ವಲಯಕ್ಕೆ ಮಾನ್ಯ ಉಪ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ. ಇವತ್ತು ರೈತರ ಸಹಕಾರಿ ಸಾಲಕ್ಕೆ ಈ ವರ್ಷ ಬಡ್ಡಿಯನ್ನು ಮನ್ನಾ ಮಾಡಲಿಕ್ಕೆ 450 ಕೋಟಿ ರೂ.ಗಳನ್ನು ತಾವು ಸರ್ಕಾರದಿಂದ ಈ ಬಡ್ಡಿ ಮನ್ನಾ ಮಾಡಿರುವುದಕ್ಕೆ ಸ್ವಾಗತಿಸುತ್ತೇನೆ. ಇದು ಏನೂ ಹೊಸದಲ್ಲ, ಈ ಒಂದು ವ್ಯವಸ್ಥೆಯನ್ನು 1983 ರಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರ ಕಾಲದಿಂದ ಮಾನ್ಯ ಉಪ ಮುಖ್ಯಮಂತ್ರಿಗಳೂ ಕೂಡ ಆಗ ಮಂತ್ರಿಗಳಾಗಿದ್ದರು. ಆಗ ನಾವೆಲ್ಲಾ ಶಾಸಕರಾಗಿದ್ದೆವು, ಅವತ್ತಿನಿಂದ ಈ ಒಂದು ವ್ಯವಸ್ಥೆ ಬಂದಿದೆ, ಆದರೆ ಆವತ್ತಿನಿಂದಲೂ ಕೂಡ ಒಂದು ಹೆಜ್ಜೆಯನ್ನು ತಪ್ಪಿರುತ್ತೀರಿ. ಏನಾಗಿದೆ ಎಂದರೆ, ಯಾರು ಸಹಕಾರಿ ಸಾಲವನ್ನು ತೆಗೆದುಕೊಳ್ಳುತ್ತಾರೆ, ಆ ಸಾಲ ಮತ್ತು ಬಡ್ಡಿಯನ್ನು ತುಂಬದಿದ್ದರೆ ಅವನು ಸುಸ್ತಿ ಬಡ್ಡಿದಾಗನೆಂದು ಆ ಡಿಫಾಲ್ಟರ್‌ಗಳಿಗೆ ಮಾತ್ರ ನೀವು ಅನುಕೂಲ ಮಾಡಿಕೊಡುತ್ತೀರಿ. ಈ ತರಹವಾದ ಒಂದು ವ್ಯವಸ್ಥೆ, this is encouraging the defaulters ಯಾರು ಪ್ರಾಮ್ಟ್ ಆಫಿ ತುಂಬುತ್ತಾರೆ, ಯಾರು ಕೃಷಿ ಸಾಲವನ್ನು ಬಡ್ಡಿಯನ್ನು ಪ್ರಾಮ್ಟ್ ಆಗಿ ತುಂಬುತ್ತಾರೆ ಅವರಿಗೆ ಏನೂ ಇಲ್ಲ. Prompt payer is not getting anything, defaulter is getting everything. ಅದಕ್ಕಾಗಿ ನೀವು ಇದನ್ನು ಬದಲಾವಣೆ ಮಾಡಬೇಕಾಗುತ್ತದೆ. ಯಾರು ಈ ಸಾರಿ ಪ್ರಾಮ್ಟ್ ಆಗಿ ತುಂಬಿದ್ದಾರೆ ಮಾನ್ಯ ಸಿದ್ದರಾಮಯ್ಯನವರೆ, ಅವರಿಗೆ ಮುಂದಿನ ವರ್ಷದ ಸಾಲವನ್ನು ಕೊಡುವಂಥ ಸಂದರ್ಭದಲ್ಲಿ ಅವರಿಗೆ ತಾವು 4 ಪರ್ಸೆಂಟ್ ಬಡ್ಡಿಯಲ್ಲಿ ಸಾಲವನ್ನು ಅವರಿಗೆ ಕೊಡಬೇಕು. I welcome. ಈಗ ರೈತರಿಗೆ 6 ಪರ್ಸೆಂಟ್ ಬಡ್ಡಿಯನ್ನು ಮಾಡಿದ್ದೀರಿ ಅದನ್ನು ನಾವು ಸ್ವಾಗತಿಸುತ್ತೇನೆ. ಇದೊಂದು ಐತಿಹಾಸಿಕ ಕ್ರಮ, 6 ಪರ್ಸೆಂಟ್ ಬಡ್ಡಿಯಲ್ಲಿ ಮಾಡಿದ್ದು, ಎವರ್‌ರೇಜ್ ಮಾಡುವ ಸಲುವಾಗಿ 4 ಪರ್ಸೆಂಟ್ ಮಾಡಬೇಕೆಂದು ನಾನು ಹೇಳಿರುತ್ತೇನೆ. It is welcome. ಮಾನ್ಯ ಸಿದ್ದರಾಮಯ್ಯನವರೇ, ತಾವು ಹೊರಟಿರುವುದರಿಂದ,

ನಿಮ್ಮ ಸೆಕ್ರೆಟರಿಯವರು ಹೊರಟು ಬಿಟ್ಟರು, ಹಾಗಾದರೆ ನಾನು ಯಾರಿಗೆ ಹೇಳಬೇಕು? ಮಾನ್ಯ ಸಚಿವರು ಸತ್ಯನಾರಾಯಣ ರವರು ಬರೆದುಕೊಳ್ಳುತ್ತಾರೆ, ಆದರೆ ನಿಮ್ಮ ಸೆಕ್ರೆಟರಿಯವರಾದರೂ ಕುಳಿತುಕೊಳ್ಳಬೇಕು ಅಲ್ಲವೆ? ಎಲ್ಲರೂ ಹೊರಟರೆ ನಾವು ಹೇಳಿದ್ದನ್ನು ಅವರ ಸೆಕ್ರೆಟರಿಯವರು ಬರೆದುಕೊಂಡು ನಂತರ ಅವರಿಗೆ ಬರೆದುಕೊಡಲಿ ಎಂದು ಹೇಳಿದೆ. ನಾಳೆ ಸುಬ್ರಮಣ್ಯರವರು ಕ್ವಯರಿ ಹಾಕಿಸುವುದನ್ನಾದರೂ ತಪ್ಪಿಸುತ್ತಾರೆ ಎಂದು, ಕೆಲವೊಂದು ವಿಚಾರಗಳು ಅವರ ತಲೆಯಲ್ಲಿ ಹೋಗಲಿ ಎಂದು ಹೇಳಿದೆ. ಅದಕ್ಕಾಗಿ ಮಾನ್ಯ ಉಪಾಧ್ಯಕ್ಷರೇ, ಈಗ 6 ಪರ್ಸೆಂಟ್ ಬಡ್ಡಿಯನ್ನು ಕೊಟ್ಟಿದ್ದೀರಿ, ಇದು ಬಹಳ ಸ್ವಾಗತಾರ್ಹ. ಇದರ ಬಗ್ಗೆ ನಾವೆಲ್ಲರೂ ಕೂಡ ವಿಚಾರವನ್ನು ಮಾಡಬೇಕಾಗುತ್ತದೆ. ಇವತ್ತು ಇಷ್ಟು ಕಡಿಮೆ ಬಡ್ಡಿ ದರದಲ್ಲಿ ರೈತರಿಗೆ ಯಾವ ರಾಜ್ಯದಲ್ಲಿಯೂ ಕೂಡ ಕೃಷಿ ಸಾಲಕ್ಕೆ ಬಡ್ಡಿಯನ್ನು ಕೊಟ್ಟಿಲ್ಲ. ಕರ್ನಾಟಕ ರಾಜ್ಯ ಇದು ಪ್ರಥಮ 6 ಪರ್ಸೆಂಟ್ ಬಡ್ಡಿ ದರದಲ್ಲಿ ಇದು ಐತಿಹಾಸಿಕ ಕ್ರಮ. ಡಿಫಾಲ್ಟರ್ಸ್‌ಗಳಿಗೆ ನೀವು ಏನು ಎನ್‌ಕರೇಜ್ ಮಾಡುತ್ತಿದ್ದೀರಿ ಅದರ ಬದಲಾಗಿ ಪ್ರಾಮ್ಟ್ ಪೇಯರ್ಸ್‌ಗಳಿಗೆ 4 ಪರ್ಸೆಂಟ್‌ನಲ್ಲಿ ಮುಂದಿನ ಸಕಾಲದಲ್ಲಿ ತಾವು ಸಾಲವನ್ನು ಕೊಡಲಿಕ್ಕೆ ಒಂದು ವ್ಯವಸ್ಥೆಯನ್ನು ಮಾಡಬೇಕು. ನಮ್ಮ ಸ್ನೇಹಿತರಾದ ಮಾನ್ಯ ನಾಗರಾಜ್‌ರವರು ಹೇಳುತ್ತಿದ್ದರು. ರೈತರಿಗೆ ಬಡ್ಡಿಯನ್ನು ವಾಪಸ್ಸು ಕೊಡಿ ಎಂದು ಅದು ಕರೆಕ್ಟಾಗಿದೆ. ಅವರು ಹೇಳುವುದು ಕರೆಕ್ಟ್ ಇದೆ. ಯಾರು ತುಂಬಿಲ್ಲ ಅವರಿಗೆ ಸಹಾಯ ಮಾಡಿದರೆ, ಯಾರು ಸಾಲವನ್ನು ಪ್ರಾಮ್ಟ್ ಆಗಿ ತುಂಬಿದ್ದಾರೆ ಅವರಿಗೆ ಕನಿಷ್ಟ 4 ಪರ್ಸೆಂಟ್ ಗಾದರೂ ಕೊಡಲಿ ಎಂದು ನಾನು ಬಯಸುತ್ತೇನೆ. ನಾನು ಇನ್ನೊಂದು ಮಾತನ್ನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ಉಪ ಮುಖ್ಯಮಂತ್ರಿಗಳಿಗೆ ಸಲಹೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಹಳ್ಳಿಗಾಡಿನಿಂದ ಬಂದಂಥ ರೈತರ ಮಕ್ಕಳಿಗೆ ಈ ಸಿಇಟಿಯ ಒಂದು ವ್ಯವಸ್ಥೆಯಿಂದ ಮತ್ತು ಬಡವರಿಗೆ ಎಂಬಿಬಿಎಸ್ ಮತ್ತು ಇಂಜಿನಿಯರಿಂಗ್, ಡೆಂಟಲ್ ಕಾಲೇಜ್‌ಗಳಿಲ್ಲ ಸೀಟು ಸಿಗುತ್ತದೆ. ಮೆರಿಟ್ ಇದ್ದವರಿಗೆ ಗೌರ್ನಮೆಂಟ್ ಸೀಟ್ ಸಿಗುತ್ತದೆ, ಸ್ವಲ್ಪ ಕಡಿಮೆ ಮೆರಿಟ್ ಇದ್ದವರಿಗೆ ಪೇಮೆಂಟ್ ಸೀಟ್‌ಸಿಗುತ್ತದೆ. ಅಂತಹ ಮಕ್ಕಳಿಗೆ ಫೀಸ್‌ನ್ನು ಕಟ್ಟಲಿಕ್ಕೆ ವಿದ್ಯಾರ್ಜನೆ ಮಾಡಲಿಕ್ಕೆ ಇವತ್ತು ಹಳ್ಳಿಯ ರೈತರ ಹತ್ತಿರ ಹಣವಿಲ್ಲ. ಅವರಿಗೆ ಸಾಲ ಕೊಡುವಂಥ ವ್ಯವಸ್ಥೆಯಾಗಲಿಲ್ಲ. ರೈತರ ಮಕ್ಕಳು ಯಾರು ಡೆಂಟಲ್, ಎಂಬಿಬಿಎಸ್, ಇಂಜಿನಿಯರಿಂಗ್ ಓದುತ್ತಾರೆ ಇವತ್ತು ಎಜ್ಯುಕೇಷನ್ ಸಾಲವನ್ನು ಕೊಡುತ್ತಿಲ್ಲ. ಹೀಗಾಗಿ ಬಹಳ ಜನ ಎಂಬಿಬಿಎಸ್ ಮತ್ತು ಇಂಜಿನಿಯರಿಂಗ್‌ನ್ನು ಬಡ ರೈತನ ಮಕ್ಕಳು ಮಾಡುವುದಕ್ಕೆ ಸಾಧ್ಯವಿಲ್ಲ. ಎಷ್ಟೋ ಜನರು ಹಣ ಇಲ್ಲದ್ದಕ್ಕೆ ವಿದ್ಯಾಭ್ಯಾಸ ಬಿಟ್ಟಿದ್ದನ್ನು ನೋಡಿದ್ದೇನೆ, ನಮ್ಮ ತಾಲ್ಲೂಕಿನಲ್ಲಿ ನಾನು ಎಷ್ಟೋ ಜನಕ್ಕೆ ಸಾಲವನ್ನು ಕೊಟ್ಟಿದ್ದೇನೆ. ಬಹಳ ಜನ ಶಾಸಕರೂ ಕೂಡ ಕೊಟ್ಟಿರುತ್ತಾರೆ. ಎಷ್ಟು ಜನರಿಗೆ ಕೊಡಲಿಕ್ಕೆ ಸಾಧ್ಯವಿದೆ, ಒಬ್ಬಬ್ಬರಿಗೆ ಮಾತ್ರಕೊಡಬಹುದು. ಅದಕ್ಕಾಗಿ ನಾವು ಯಾರು ರೈತನ ಮಕ್ಕಳಿದ್ದಾರೆ, ಈ ಮೆಡಿಕಲ್, ಇಂಜಿನಿಯರಿಂಗ್ ವೃತ್ತಿಪರ ಕಾಲೇಜಿನಲ್ಲಿ ಅವರಿಗೆ 6 ಪರ್ಸೆಂಟ್‌ನಲ್ಲಿ ಸಾಲವನ್ನು ಕೊಡುವಂಥ ವ್ಯವಸ್ಥೆಯಾಗಬೇಕು. ಅದನ್ನು ಸಹಕಾರಿ

ಸಂಸ್ಥೆಗಳ ಮುಖಾಂತರ ಕೃಷಿಕರ ಮಕ್ಕಳಿಗೆ ವಿದ್ಯಾರ್ಥಿ ಸಾಲವೆಂದು ಒಂದು ಕೆಲಸವನ್ನು ಈ ಸರ್ಕಾರ ಮಾಡಿಕೊಡಬೇಕೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ:- ಮುಂದು ಇನ್ನೊಂದು ಮುಖ್ಯವಾದ ಪ್ರೊಡೆಕ್ಟೀವ್ ವಲಯ ಅಂದರೆ ನೀರಾವರಿ ಇದಕ್ಕೆ ಕರ್ನಾಟಕ ಸರ್ಕಾರ ಹೆಚ್ಚಿನ ಗಮನವನ್ನು ಕೊಡಬೇಕಾಗಿದೆ. ನಾವು ಈಗಾಗಲೇ ಹೇಳಿದಂತೆ ರಾಜಸ್ಥಾನವನ್ನು ಬಿಟ್ಟರೆ ಅತಿ ಕಡಿಮೆ ನೀರಾವರಿ ಪ್ರದೇಶವನ್ನು ಹೊಂದಿದ್ದು ಕರ್ನಾಟಕವಾಗಿದೆ. ಪಕ್ಕದ ಆಂಧ್ರಪ್ರದೇಶ ನೀರಾವರಿ 62 ಪರ್ಸೆಂಟ್, ತಮಿಳುನಾಡು 65 ಪರ್ಸೆಂಟ್, ಪಂಜಾಬ್ 92 ಪರ್ಸೆಂಟ್ ಇರಿಗೇಷನ್, ಮಹಾರಾಷ್ಟ್ರ 42 ಪರ್ಸೆಂಟ್. We are just 30 0r 31% ನಮ್ಮಲ್ಲಿ ನೀರಾವರಿ ಮಾಡುವುದಕ್ಕೆ ಸಾಧ್ಯವಿದೆ. ಕೃಷ್ಣ ಹಾಗೂ ಕಾವೇರಿ ನದಿ ಪಶ್ಚಿಮವಾಹಿನಿಗಳು ಇವು ಮೂರು ಮುಖ್ಯವಾದಂತಹ ನದಿಗಳಾಗಿವೆ. ಮಾನ್ಯ ಉಪಾಧ್ಯಕ್ಷರೆ, ತಮಗೆ ಗೊತ್ತಿರುವ ಹಾಗೆ ಕೃಷ್ಣ ಮತ್ತು ಕಾವೇರಿ ನದಿಯಲ್ಲಿ ಏನು ನೀರಿನ ಇಳುವರಿ ಇದೆ, ಅದಕ್ಕಿಂತ ಹೆಚ್ಚಿನ ಇಳುವರಿ ಈ ಪಶ್ಚಿಮವಾಹಿನಿಯಲ್ಲಿದೆ, ಅದರ ಬಗ್ಗೆ ಪಶ್ಚಿಮವಾಹಿನಿ ನೀರನ್ನು ಪೂರ್ವಭಾಗಕ್ಕೆ ಆ ನೀರನ್ನು ತಿರುಗಿಸುವ ಬಗ್ಗೆ ಹೆಚ್ಚು ಗಮನವನ್ನು ಈ ಸರ್ಕಾರ ಕೊಡಬೇಕಾಗಿದೆ. ಇಲ್ಲದೇ ಇದ್ದರೆ ಮುಂಬರುವಂತಹ ದಿನಗಳಲ್ಲಿ ನೀರಿಗೆ ಬಹಳ ಸಂಕಷ್ಟವಾಗುತ್ತದೆ. ಕುಡಿಯುವ ನೀರಿಗಾಗಿ ಬಹಳ ತೊಂದರೆಯಾಗುತ್ತದೆ. "Western flowing rivers" ಬಗ್ಗೆ ಸ್ವಲ್ಪ ಗಂಭೀರವಾದಂತಹ ಚಿಂತನೆ ಈ ಸರ್ಕಾರ ಮಾಡಿದರೆ ಒಳ್ಳೆಯದು. ಅದು ಇರಲಿ, ಈಗಾಗಲೇ ನಮ್ಮ ಕೃಷ್ಣ ಜಲಾನಯನ ಪ್ರದೇಶದಲ್ಲಿ ಏನೂ ಸುಮಾರು 12 ಜಿಲ್ಲೆಗಳಲ್ಲಿ ಕೃಷ್ಣ ನದಿ ಇದೆ ಅದಕ್ಕೆ ಬರುವಂತಹ ಉಪನದಿಗಳಲ್ಲಿ ಈಗಾಗಲೇ ಏನು ಸಮಾರು 3 ಮತ್ತು 4 ದಶಕಗಳ ಹಿಂದೆಯೇ ಬಚಾವತ್ ಆಯೋಗ ನಮಗೆ ನೀಡಿರುವಂತಹ 729 ಟಿಎಂಸಿ ನೀರನ್ನು ಸದ್ಬಳಕೆಯನ್ನು ಮಾಡುವ ಸಲುವಾಗಿ ಸುಮಾರು ನಾಲ್ಕು ದಶಕಗಳಿಂದ ನಮಗೆ ಹೇಳಿದ್ದಾರೆ. ಆದರೆ 729 ಟಿಎಂಸಿ ನೀರಿನ ಸದ್ಬಳಕೆ ಅಂದರೆ ಫೀಲ್ಡ್‌ಗೆ ತಲುಪಿಸುವ ಬಗ್ಗೆ ಇನ್ನೂ ಕೂಡ ನಾವು ಕ್ರಮವನ್ನು ಕೈಗೊಳ್ಳಲಿಲ್ಲ ಇದು ಬಹಳ ದುಃಖದ ಸಂಗತಿಯಾಗಿದೆ. ನಮ್ಮ ಎಲ್ಲಾ ಪಕ್ಷದ ಸರ್ಕಾರಗಳೂ ಹೇಳುತ್ತಲೇ ಬಂದಿದ್ದಾವೆ ನಾವು ಮುಂದಿನ ವರ್ಷ ಮುಗಿಸುತ್ತೇವೆ, ಎಂದು ಹೇಳುತ್ತಲೇ ಬಂದಿವೆ. ಬಚಾವತ್ ಆಯೋಗದ ನ್ಯಾಯಾಧೀಕರಣದ ಪ್ರಕಾರ ನಾವು 729 ಟಿಎಂಸಿ ನೀರನ್ನೂ ಮೇ 2000ಕ್ಕೆ ಉಪಯೋಗ ಮಾಡಿಕೊಳ್ಳಬೇಕಾಗಿತ್ತು. ಈಗ 5 ವರ್ಷಗಳಾಯಿತು, ಇನ್ನೂ ಕೂಡ ನಾವು ಮಾಡುವುದಕ್ಕೆ ಸಾಧ್ಯತೆಗಳು ಆಗಲಿಲ್ಲ. ಅದಕ್ಕೆ ಬೇರೆ ಬೇರೆ ಕಾರಣಗಳು ಇರಬಹುದು. ಅದಕ್ಕೆ ಹಣಕಾಸು ಒಂದೇ ಅಲ್ಲ, ಹಣಕಾಸಿನ ಜೊತೆಗೆ ಕೆಲವು ಕಡೆ ಎನ್‌ವಿರುನ್‌ಮೆಂಟಲ್ ಪ್ರಾಬ್ಲಮ್ಸ್ ಇದೆ. ಅದು ಏನೇ ಇರಬಹುದು, ಆದರೆ ಮುಖ್ಯವಾಗಿರುವಂತಹ ಕಾರಣವೆಂದರೆ ಹಣಕಾಸ. ಅದಕ್ಕಾಗಿ ನಾವು ಯಾವುದೇ ಪರಿಸ್ಥಿತಿಗಳಲ್ಲಿ ಮುಂಬರುವಂತಹ ವರ್ಷಗಳಲ್ಲಿ ಈ 729 ಟಿಎಂಸಿ ನೀರನ್ನು ಬಳಸಿಕೊಳ್ಳುವ ಬಗ್ಗೆ ನಾವು ಹೆಚ್ಚಿನ ಹಣವನ್ನು ವಿನಿಯೋಗ ಮಾಡಬೇಕು. ಈ ಸಾರಿ ಅದಕ್ಕೆ ಈ ಸರ್ಕಾರ ಬಹಳ ಒತ್ತನ್ನು ಕೊಟ್ಟಿದೆ. ನಾನು ಉಪಮುಖ್ಯಮಂತ್ರಿಗಳನ್ನು ಮತ್ತು ಈ

ಸರ್ಕಾರವನ್ನು ಅಭಿನಂದಿಸುತ್ತೇನೆ. ಈ ಸಾರಿ 2004–05ನೇ ಸಾಲಿನಲ್ಲಿ ಶೇಕಡ 25 ರಷ್ಟು ಹಣವನ್ನು ನೀರಾವರಿಗಾಗಿ ಕಾದಿರಿಸಿದ್ದಾರೆ. ಆದರೆ ಈ ಸಾರಿ ಶೇಕಡ 30ಕ್ಕೆ ಏರಿಕೆಯಾಗಿದೆ, 5% more money has been given. ಈ ಸಾರಿ 3992 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಹೋದ ಸಾರಿ 3000 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು. ಈ ಸಾರಿ ಹೆಚ್ಚುಕಡಿಮೆ 1000 ಸಾವಿರ ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ನೀರಾವರಿಗೆ ಕೊಟ್ಟಿದ್ದಾರೆ. ಇದು ಸ್ವಾಗತಾರ್ಹವಾಗಿದೆ. ಆದರೆ ಹಣ ಕೊಟ್ಟರೆ ಆಗುವುದಿಲ್ಲ, ಅದು ಇಂಪ್ಲಿಮೆಂಟಾಗಬೇಕು. ಇದು ತ್ವರಿತವಾಗಿ ಆಗಬೇಕಾಗಿದೆ, ಇದು ತ್ವರಿತಗತಿಯಲ್ಲಿ ಆಗುವುದಕ್ಕೆ ನಾವು ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ. ಏತಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಇದು ಬಹಳ ಗಂಭೀರವಾದಂತಹ ಪ್ರಶ್ನೆಯಾಗಿದೆ, ಈಗಾಗಲೇ ಬಚಾವತ್ ಆಯೋಗದ ಪ್ರಕಾರ 2000 ಮೇಗೆ ಈ ಮೂರು ರಾಜ್ಯಗಳಲ್ಲಿ 2000 ಟಿಎಂಸಿ ನೀರನ್ನು ಹಂಚಿಕೆ ಮಾಡಿದರೆ ಉಳಿದಂತಹ 400 ಟಿಎಂಸಿ ನೀರನ್ನು ಹಂಚಿಕೆ ಮಾಡುವ ಬಗ್ಗೆ ಮತ್ತೊಂದು ನ್ಯಾಯಾಧೀಕರ ಮಾಡಬೇಕಾಗುತ್ತದೆ. ಇವತ್ತು ನ್ಯಾಯಾಧೀಕರಣವಾಗಿದೆ, ನಮ್ಮ ದುರ್ದೈವದ ಸಂಗತಿ ಏನೆಂದರೆ, ಈಶ್ವರಪ್ಪನವರೇ, ನಾನು ಈ ಮಾತನ್ನು ಏತಕ್ಕೆ ಹೇಳುತ್ತೇನೆಂದರೆ ದಯಮಾಡಿ ತಾವು ತಪ್ಪು ತಿಳಿದುಕೊಳ್ಳಬೇಡಿ. ನಾನು ಏನು ಕಾಂಗ್ರೆಸ್ ಪಾರ್ಟಿಯವನು ಎಂದು ಈ ಮಾತನ್ನು ಆಡುತ್ತಿಲ್ಲ. ಸನ್ಮಾನ್ಯ ವಾಜಪೇಯಿಯವರು ಪ್ರಧಾನಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ, ಮಾನ್ಯ ಜೆ. ಹೆಚ್. ಪಟೇಲ್‌ರವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಕೇಂದ್ರದಲ್ಲಿ ನನ್ನನ್ನು ಸ್ಪೆಷಲ್ ರೆಪ್ರಸೆಂಟಿಟೀವ್ ಆಫ್ ದಿ ಸ್ಟೇಟ್ ಗೌರ್ನಮೆಂಟ್ ಆಗಿನೇಮಕಮಾಡಿದ್ದರು. ಆ ಸಂದರ್ಭದಲ್ಲಿ ನಾನುಮುಖ್ಯಮಂತ್ರಿ ಪಟೇಲ್‌ರವರ ಜೊತೆಗೆ ಅವತ್ತು ಮಾನ್ಯವಾಜಪೇಯಿಯವರೇ ಪ್ರಧಾನಮಂತ್ರಿಗಳಾಗಿದ್ದರು, ಅವರನ್ನು ನಾವೆಲ್ಲರೂ ಭೇಟಿಯಾಗಿದ್ದೆವು. ಈಗ 1999ನೇ ಸಾಲು ಮುಗಿಯುತ್ತಾ ಬಂತು ಮುಂದಿನ ವರ್ಷಕ್ಕೆ ಹೊಸ ನ್ಯಾಯಾಧೀಕರಣವನ್ನು ನೇಮಕ ಮಾಡಿ ಎಂದು ಅದು ಅವತ್ತಿನಿಂದಲೇ ಪ್ರಾರಂಭವಾಯಿತು. ಆದರೆ ನ್ಯಾಯಾಧೀಕರಣವನ್ನು ವಾಜಪೇಯಿಯವರ ಸರ್ಕಾರ ಮಾಡಲೇ ಇಲ್ಲ. ಸುಮಾರು 6 ವರ್ಷಗಳ ಕಾಲ ಅವರು ಅಧಿಕಾರದಲ್ಲಿದ್ದರೂ ಕೂಡ ಮಾಡಲಿಲ್ಲ. ಇದಕ್ಕೆ ಕಾರಣ, ಅವರು ಮಾಡಬೇಕೆಂದು ಇದ್ದರೂ ಕೂಡ ಮಾಡುವುದಕ್ಕಾಗಲಿಲ್ಲ. ಇದಕ್ಕೆ ಕಾರಣವೇನು? ಕೃಷ್ಣ ನದಿ ಯಾವ ಕಡೆ ಹರಿಯುತ್ತದೆ?

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು 5–6 ವರ್ಷ ಇರಲಿ, ಅವರು ಮಾಡಲಿಲ್ಲವೆಂದರಲ್ಲಾ, ಆಂಧ್ರಪ್ರದೇಶದವರು ಯಾವಾಗ ಅರ್ಜಿಯನ್ನು ಕೊಟ್ಟಿದ್ದರು, ನಮ್ಮ ಕರ್ನಾಟಕ ಸರ್ಕಾರದವರು ಯಾವಾಗ ಅರ್ಜಿಯನ್ನು ಕೊಟ್ಟಿದ್ದರು ದಯವಿಟ್ಟು ಅದನ್ನು ಹೇಳಲಿ. ನಮ್ಮ ಕರ್ನಾಟಕ ರಾಜ್ಯ ಸರ್ಕಾರ ನ್ಯಾಯಾಧೀಕರಣವನ್ನು ಮಾಡಬೇಕೆಂದು ಇವರು ಅರ್ಜಿಯನ್ನು 2–3 ವರ್ಷಗಳ ಕಾಲ ಕೊಟ್ಟಿರಲಿಲ್ಲ. ನಮ್ಮ ರಾಜ್ಯ ಸರ್ಕಾರ, ಅದನ್ನು

ಹೇಳಲಿ ಮತ್ತೆ ಅದನ್ನು ಬಿಟ್ಟು ಸುಮ್ಮನೆ 5 ವರ್ಷ ಹಾಗೆಯೇ ಅಲ್ಲಿ ಎಂದು ಅರ್ಜಿ ಇವೆಲ್ಲವನ್ನೂ ಹೇಳುವುದಕ್ಕೆ ಹೋಗಬೇಡಿ.

ಶ್ರೀ ಬಸವರಾಜ ರಾಯರೆಡ್ಡಿ:– ನೋಡಿ ನಆನು ವಾಜಪೇಯಿಯವರು ಮೇಲೆ ಆಪಾದನೆಯನ್ನು ಮಾಡುತ್ತಿಲ್ಲ.

ಶ್ರೀ ಜಗದೀಶ್ ಶೆಟ್ಟರ್:– ಇದು ವಾಜಪೇಯಿಯವರ ಮೇಲೆ ಆಪಾದನೆಯ ಪ್ರಶ್ನೆ ಅಲ್ಲ. ನಮ್ಮ ಕರ್ನಾಟಕ ಸರ್ಕಾರದ ಜವಾಬ್ದಾರಿ ಏನಿದೆ ಅದನ್ನು ಹೇಳಿ. ಇವರು 3 ವರ್ಷಗಳಿಂದ ಅರ್ಜಿಯನ್ನು ಕೊಟ್ಟಿರುವುದಿಲ್ಲ.

ಶ್ರೀ ಬಸವರಾಜರಾಯರೆಡ್ಡಿ:– ವಾಜಪೇಯಿಯವರ ಸರ್ಕಾರದ ಮೇಲೆ ಆಪಾದನೆ ಮಾಡುತ್ತಿಲ್ಲ ದಯಮಾಡಿ ಅರ್ಥಮಾಡಿಕೊಳ್ಳಿ. Please allow me to complete my word. ನಾನು ಅವರ ಮೇಲೆ ಆಪಾದನೆಯನ್ನು ಮಾಡುತ್ತಿಲ್ಲ. ಏನಾಗಿದೆ ಎಂದು ಅದನ್ನೇ ನಾನು ಹೇಳುತ್ತಿದ್ದೇನೆ. ನಮ್ಮ ರಾಜ್ಯ ಸರ್ಕಾರ ಕೊಟ್ಟಿಲ್ಲ ಎಂದು ದಯಮಾಡಿ ಬೇಡ ಅದಕ್ಕೆ ನಾನು ಹೇಳಿರುವುದು. I am the witness ಜೆ. ಹೆಚ್. ಪಟೇಲ್ ರವರು ಈ ಮಾತನ್ನು ವಾಜಪೇಯಿಯವರಿಗೆ ಹೇಳಿದ್ದರು. ಅದು ಏತಕ್ಕಾಗಿ ಆಗಲಿಲ್ಲ. ಆಂಧ್ರದಲ್ಲಿರುವಂತಹ ಚಂದ್ರಬಾಬುನಾಯ್ಡುರವರು he was the partner of the Vajpayee Government ಪಾರ್ಟನರ್, ಅಂದರೆ ರೂಲಿಂಗ್ಸ್‌ನಲ್ಲಿ ಇಲ್ಲದೇ ಇರಬಹುದು. ಅವರು ಬಾಹ್ಯ ಬೆಂದಲವನ್ನು ಕೊಟ್ಟಿದ್ದರು. ಅವರು ಒತ್ತಡವನ್ನು ತರುತ್ತಿದ್ದರು, ಕರ್ನಾಟಕಕ್ಕೆ ಮತ್ತು ಮಹಾರಾಷ್ಟ್ರಕ್ಕೆ ನ್ಯಾಯವನ್ನು ಒದಗಿಸಿಕೊಡಬೇಕಾಗಿದ್ದರೂ ಕೂಡ ಆಂಧ್ರದ ಒತ್ತಡದಿಂದ ಅವತ್ತು ಮಾಡುವುದಕ್ಕೆ ಆಗಲಿಲ್ಲ ನನಗೆ ಗೊತ್ತು ಇದು.

ಶ್ರೀ ಜಗದೀಶ್ ಶೆಟ್ಟರ್:– ನೋ, ನೋ, ಇದನ್ನು ನೀವು ಸದನಕ್ಕೆ ತಪ್ಪು ಮಾಹಿತಿ ಕೊಡುತ್ತಿದ್ದೀರಿ. ಯಾವುದೇ ಆಂಧ್ರದ ಒತ್ತಡವಿದ್ದರೂ ಸಹಿತ ಅಟಲ್‌ಬಿಹಾರಿ ವಾಜಪೇಯಿಯವರು ಯವುದೇ ಒತ್ತಡಕ್ಕೆ ಮಣಿಯಲಿಲ್ಲ. ಇವತ್ತು ಸುಪ್ರಿಂಕೋರ್ಟಿನಲ್ಲಿ ಅಫಿಡೆವಿಟ್ ಕೊಟ್ಟರು, ಅಲ್ಲಿ ಒತ್ತಡವಿತ್ತು, ಅವರು ಸರಿಯಾದಂತಹ ಅಫಿಡೆವಿಟ್‌ನ್ನೇ ಕೊಟ್ಟರು. ಅದು ಆದ ಮೇಲೆಯೇ ಆ ಹೈಟ್ ಎಷ್ಟು ಆಗಬೇಕೆಂಬುದರ ಬಗ್ಗೆ ನಿರ್ಧಾರವಾಯಿತು. ಆಗ ಅವರು ವಾಜಪೇಯಿಯವರು ಒತ್ತಡಕ್ಕೆ ಮಣಿದಿದ್ದರೆ ಸುಪ್ರೀಂಕೋರ್ಟಿನಲ್ಲಿ ಅಫಿಡೆವಿಟ್‌ನ್ನು ಕೊಡುವುದಕ್ಕೆ ಆಗುತ್ತಿರಲಿಲ್ಲ. ಸುಮ್ಮನೆ ಈ ಸದನದಲ್ಲಿ ತಪ್ಪು ಮಾಹಿತಿಯನ್ನು ಕೊಡುವಂತಾಗಬಾರದು.

ಶ್ರೀ ಬಸವರಾಜರಾಯರೆಡ್ಡಿ:– ನಾನು ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡುತ್ತಿಲ್ಲ ನಾನು ಏನು ಹೇಳುತ್ತಿದ್ದೇನೆಂದರೆ, ಮಾಡಿ ಎಂದೂ ಒತ್ತಾಯ ಮಾಡಿದರೂ ಕೂಡ ಅವರು ಒತ್ತಡಕ್ಕೆ ಮಣಿದರು ಅಷ್ಟೆ.

ಶ್ರೀ ಜಗದೀಶ್ ಶೆಟ್ಟರ್:- ಇದು ಸರಿಯಲ್ಲ. ಮಾನ್ಯ ರಾಯರೆಡ್ಡಿಯವರೆ, ಒತ್ತಡಕ್ಕೆ ಮಣಿದರು ಎನ್ನುವ ಮಾತು ಇದೆಯಲ್ಲಾ ದಯವಿಟ್ಟು ಇದನ್ನು ತಾವು ಹಿಂದಕ್ಕೆ ತೆಗೆದುಕೊಳ್ಳಬೇಕು. ವಾಜಪೇಯಿಯವರು ಯಾವುದೇ ಒತ್ತಡಕ್ಕೆ ಮಣಿಯಲಿಲ್ಲ. ಅವರು ಇಂಪಾರ್ಷಿಯಲ್ ಆಗಿಯೇ ಅವರು ಕೆಲಸವನ್ನು ಮಾಡಿದ್ದಾರೆ.

ಶ್ರೀ ಬಸವರಾಜರಾಯರೆಡ್ಡಿ:- ನನ್ನ ಅಭಿಪ್ರಾಯವನ್ನು ನಾನು ಹೇಳಿದ್ದೇನೆ, ಅವರ ಅಭಿಪ್ರಾಯವನ್ನು ಅವರು ಹೇಳಿದ್ದಾರೆ. ನನ್ನ ಅಭಿಪ್ರಾಯ ತಪ್ಪಿದ್ದರೆ ಮುಂದೆ ನೋಡೋಣ ನಾನು ಅದರ ಬಗ್ಗೆ ವಿಚಾರ ಮಾಡಿ ಓದಿ ತಿಳಿದುಕೊಂಡು ಅದನ್ನು ಡೆಫಿನೇಟ್ ಆಗಿ ವಾಪಸ್ಸು ತೆಗೆದುಕೊಳ್ಳುತ್ತೇನೆ. ಈಗಿನ ನನ್ನ ಅಭಿಪ್ರಾಯ ಅವರು ಒತ್ತಡಕ್ಕೆ ಮಣಿದರು. ಅದರ ಅರ್ಥ ವಾಜಪೇಯಿಯವರು ಕರ್ನಾಟಕಕ್ಕೆ ಎರಡು ಟೈಪ್ ತಪ್ಪು ಮಾಡುತ್ತಾರೆ. ಒಂದು ಇಂಟೆನ್ಷೀವ್ ಆಗಿ ತಪ್ಪು ಮಾಡುವುದು, ಮತ್ತೊಂದು ಯಾರದೋ ಒತ್ತಡಕ್ಕೆ ತಪ್ಪು ಮಾಡುವುದು ಇನ್ನೊಂದು. ವಾಜಪೇಯಿಯವರು ಇಂಟೆನ್ಸೀವ್ ಆಗಿ ತಪ್ಪು ಮಾಡಿದ್ದಾರೆ ಎಂದು ನಾನು ಹೇಳಲಿಲ್ಲ, ಬೇಕಂತರೇ ಕರ್ನಾಟಕಕ್ಕೆ ಮಾಡಿದ್ದಾರೆಂದು ಹೇಳಲಿಲ್ಲ.

ಶ್ರೀ ಜಗದೀಶ್ ಶೆಟ್ಟರ್:- ಇದು ಬಹಳ ರಾಂಗ್ ಸ್ಟೇಟ್‌ಮೆಂಟಾಗುತ್ತದೆ. ನಾಳೆ ಈ ರೀತಿಯಾಗಿ ರೆಕಾರ್ಡ್ ಆಗಿ ನಾಳೆ ದಿವಸ ಪತ್ರಿಕೆಗಳಲ್ಲಿ ಬರುತ್ತದೆ, ಮಾನ್ಯ ಅಟಲ್‌ಬಿಹಾರಿ ವಾಜಪೇಯಿಯವರು ತಪ್ಪು ಮಾಡಿದ್ದಾರೆನ್ನುವಂತಹ ಮಾತು ಇದೆಯಲ್ಲಾ ಇದು ಸರಿಯಿಲ್ಲವೆಂದು ನಾನು ಹೇಳುತ್ತಿದ್ದೇನೆ. ಮಾನ್ಯ ಸದಸ್ಯರು ಪದೇಪದೇ ಅದನ್ನೇ ಹೇಳುತ್ತಿದ್ದಾರೆ.

ಶ್ರೀ ಬಸವರಾಜರಾಯರೆಡ್ಡಿ:- ಆಯಿತು ಬಿಡಿ.

ಶ್ರೀ ಜಗದೀಶ್ ಶೆಟ್ಟರ್:- ಅವರು ಯಾವ ಒತ್ತಡಕ್ಕೂ ತಪ್ಪು ಮಾಡಲಿಲ್ಲ, ಇಂಟೆನ್ಷಿವ್ ಆಗಿಯೂ ಕೂಡ ತಪ್ಪುಮಾಡಿಲ್ಲ.

ಶ್ರೀ ಬಸವರಾಜರಾಯರೆಡ್ಡಿ:- ಆಗ್ರಿಡ್ ತಪ್ಪು ಇಲ್ಲವೆಂದರೆ ಬಹಳ ಸಂತೋಷ ನೋಡೋಣ.

ಶ್ರೀ ಡಿ. ಆರ್. ಪಾಟೀಲ್:- ಮಾನ್ಯ ಉಪಾಧ್ಯಕ್ಷರೆ, ಒತ್ತಡಕ್ಕೆ ಒಳಗಾಗುತ್ತಾರೆ, ಎಲ್ಲರೂ ಆಗುತ್ತಾರೆ, ಒತ್ತಡಕ್ಕೆ ಒಳಗಾಗಿಯೇ ಆ ಹುಬ್ಬಳ್ಳಿ ಧಾರವಾಡಕ್ಕೆ ಕುಡಿಯುವ ನೀರಿನ ಸಲುವಾಗಿ ಆ ಮಹಾದಾಯಿ ತಿರುವು ಯೋಜನೆಗೆ ಪರ್ಮಿಶನ್ ಕೊಟ್ಟಿದ್ದನ್ನು ಮುಂದೆ ಸ್ಟೇ ಮಾಡಿದರು.

ಶ್ರೀ ಜಗದೀಶ್ ಶೆಟ್ಟರ್:- ಇವತ್ತು ಏನಾಗಿದೆ? ನಿಮ್ಮದೇ ಸರ್ಕಾರವಿದೆ, ಇವತ್ತು ಸಹ ಸ್ಟೇನ್ನು ವೆಕೇಟ್ ಮಾಡುವುದಕ್ಕೆ ಆಗಲಿಲ್ಲ.

ಶ್ರೀ ಡಿ. ಆರ್. ಪಾಟೀಲ್:- ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್:- ಹಾಗಾದರೆ ನೀವು ಯಾವ ಒತ್ತಡದಲ್ಲಿದ್ದೀರಿ?

(ಗೊಂದಲ)

ಕಳಸಾ ಬಂಡೂರಿ ಯೋಜನೆಯ ಸಲುವಾಗಿ ಡೆಲಿಗೇಷನ್‌ನ್ನು ತೆಗೆದುಕೊಂಡು ಹೋದರು. ಇವತ್ತು ಧರ್ಮಸಿಂಗ್‌ರವರಿಗೆ ಯಾವ ಒತ್ತಡವಿದೆ? ಗೋವಾದಲ್ಲಿ ರಾಷ್ಟ್ರಪತಿ ಆಡಳಿತವಿದೆ. ಅಲ್ಲಿ ಸರ್ಕಾರವೇ ಇಲ್ಲ. ಇವತ್ತು ಕೂಡ ಅದನ್ನು ವೆಕೇಟ್ ಮಾಡಬಹುದಲ್ಲಾ. ಏತಕ್ಕಾಗಿ ಮಾಡುತ್ತಿಲ್ಲ?

ಶ್ರೀ ಡಿ. ಆರ್. ಪಾಟೀಲ್:- ನೀವು ಪರ್ಮಿಶನ್ ಕೊಟ್ಟಿದ್ದನ್ನು ಸ್ಟೇ ಮಾಡಿಸಿದ್ದೀರಿ

ಶ್ರೀ ಜಗದೀಶ್ ಶೆಟ್ಟರ್:- ಆದರೆ ನೀವು ಇವತ್ತು ಏನು ಮಾಡುತ್ತಿದ್ದೀರಿ? ನಿಮಗೆ ಯಾವ ಒತ್ತಡವಿದೆ?

(ಗೊಂದಲ)

ಕಳಸಾ ಬಂಡೂರಿ ಯೋಜನೆಯ ಸಲುವಾಗಿ ಡೆಲಿಗೇಷನ್‌ನ್ನು ತೆಗೆದುಕೊಂಡು ಹೋದರು ಇವತ್ತು ಧರ್ಮಸಿಂಗ್‌ರವರಿಗೆ ಯಾವ ಒತ್ತಡವಿದೆ? ಗೋವಾದಲ್ಲಿ ರಾಷ್ಟ್ರಪತಿ ಆಡಳಿತವಿದೆ. ಅಲ್ಲಿ ಸರ್ಕಾರವೇ ಇಲ್ಲ. ಇವತ್ತು ಕೂಡ ಅದನ್ನು ವೆಕೇಟ್ ಮಾಡಬಹುದಲ್ಲಾ. ಏತಕ್ಕಾಗಿ ಮಾಡುತ್ತಿಲ್ಲ?

ಶ್ರೀ ಡಿ. ಆರ್. ಪಾಟೀಲ್:- ನೀವು ಪರ್ಮಿಶನ್ ಕೊಟ್ಟಿದ್ದನ್ನು ಸ್ಟೇ ಮಾಡಿಸಿದ್ದೀರಿ

ಶ್ರೀ ಜಗದೀಶ್ ಶೆಟ್ಟರ್:- ಆದರೆ ನೀವು ಇವತ್ತು ಏನು ಮಾಡುತ್ತಿದ್ದೀರಿ? ನಿಮಗೆ ಯಾವ ಒತ್ತಡವಿದೆ?

(ಗೊಂದಲ)

ಕಳಸಾಬಂಡೂರಿ ಕೆಲಸ 5 ನಿಮಿಷದ್ದು ಸ್ಟೇವೆಕೇಟ್ ಆದರೆ ಮುಗಿದುಹೋಗುತ್ತದೆ. ಇಲ್ಲಿಯೂ ನಿಮ್ಮ ಸರ್ಕಾರ ಇದೆ, ಕೇಂದ್ರದಲ್ಲಿಯೂ ನಿಮ್ಮ ಸರ್ಕಾರವೇ ಇದೆ. ಗೋವಾದಲ್ಲಿ ರಾಷ್ಟ್ರಪತಿ ಆಡಳಿತ ಇದೆ,

ಶ್ರೀ ಡಿ. ಆರ್. ಪಾಟೀಲ್:- ನಾವು ನಿಮ್ಮ ಹಾಗೆ ಅನ್ಯಾಯ ಮಾಡುವುದಿಲ್ಲ, ಅದನ್ನು ಮಾಡಿಸುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್:- ಮಾಡಿಸಿ, ಈಗಾಗಲೇ 5 ವರ್ಷಗಳಾಯಿತು. 50 ವರ್ಷ ಇದನ್ನು ಮಾಡಿದ್ದೀರಿ ನನಗೆ ಗೊತ್ತಿದೆ. ನಿಮ್ಮದು ಮೂರು ಕಡೆ ಸರ್ಕಾರ ಇದ್ದಾಗಲೂ ನೀವು ಮಾಡಲಿಲ್ಲ.

ಶ್ರೀ ವಿಶ್ವೇಶ್ವರಹೆಗಡೆ ಕಾವೇರಿ:- ವಾಜಪೇಯಿ ಸರ್ಕಾರ ಇಲ್ಲದೇ ಇದ್ದರೆ ಅದು ಈ ಹಂತಕ್ಕೆ ಬರುತ್ತಲೇ ಇರುತ್ತಿರಲಿಲ್ಲ. ಇಲ್ಲಿಯತನಕ ಅದು ಹೋಗುತ್ತಿರಲಿಲ್ಲ.

Sri Asavaraja raya reddy:- No don't What is the Meaning of Super human being? Vajayee is a super human being. ಒತ್ತಡಕ್ಕೆ ಎಲ್ಲರೂ ಮಣಿಯುತ್ತಾರೆ. ಒತ್ತಡಕ್ಕೆ ಮಣಿಯದಿದ್ದರೆ ಅವರು ದೇವಮಾನವರಾಗಿಬಿಡುತ್ತಿದ್ದರು. He is also a human being ಹೀಗಾಗಿ ಅವರು ಒತ್ತಡಕ್ಕೆ ಮಣಿದಿದ್ದಾರೆ. ಅಷ್ಟೆ ನಾವೂ

ಮಣಿಯುತ್ತೇವೆ, ನೀವು ಮಣಿಯುತ್ತೀರಿ. ಹೀಡಾಗಿ ಅದು ಹೊಸದೇನೂ ಅಲ್ಲ; ಎಂದು ನಾನು ಹೇಳಿದ್ದೇನೆ. ಅದು ಇರಲಿ ಬಜೆಟ್‌ನಲ್ಲಿ ಹಾಗೆಂದು ನಾನು ಏತಕ್ಕಾಗಿ ಹೇಳುತ್ತಿದ್ದೇನೆ. ಅಂದರೆ ಅದು ಬಜೆಟ್ ಭಾಷಣವೇ ಆಗಿದೆ. ಡಾ: ಮನಮೋಹನಸಿಂಗ್‌ರವರ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಕೃಷ್ಣ ನದಿಯ ನೀರಿನ ಉಳಿಕೆಯ ನೀರನ್ನು ಹಂಚಿಕೆ ಮಾಡಲಿಕ್ಕೆ ಸರ್ಕಾರದವರು 180 ರಿಂದ 200 ಟಿ.ಎಂ.ಸಿ. ನೀರು ಸಂಗ್ರಹಿಸಬೇಕೆಂದು ಸಾಧನೆ ಮಾಡಿದ್ದಾರೆ. ಇನ್ನು ಒಂದೆರಡು ವರ್ಷದಲ್ಲಿ 170, 180 ಅಥವಾ 200 ಟಿ.ಎಂ.ಸಿ. ನೀರನ್ನು ನ್ಯಾಯಾಧೀಕರಣಕ್ಕೆ ಕೊಡಲೇಬೇಕಾಗುತ್ತದೆ, ಅದರ ಬಗ್ಗೆ ಈ ಸರ್ಕಾರ ಚಿಂತನೆ ಮಾಡಬೇಕಾಗಿದೆ. ಇನ್ನು ಒಂದೆರಡು ವರ್ಷದಲ್ಲಿ ಏನು 180 ಟಿ.ಎಂ.ಸಿ. ನೀರು ಹೆಚ್ಚುವರಿಯಾಗಿ ಬರಬೇಕೆಂದು ನಾವು ಕಲ್ಪಿಸಿಕೊಂಡಿದ್ದೇವೆ, ಅದರ ಬಗ್ಗೆ ಈ ಸರ್ಕಾರ ಯೋಚಿಸಿ, ಅದರ ಬಗ್ಗೆ ಹಣ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇದರ ಬಗ್ಗೆ ಸರ್ಕಾರ ಗಂಭೀರವಾದ ಚಿಂತನೆಯನ್ನು ಮಾಡಲಿ, ಇದರಿಂದ ಬಾಗಲಕೋಟೆ, ಕೊಪ್ಪಳ ಮುಂತಾದ ಬರಗಾಲ ಪೀಡಿತ ಪ್ರದೇಶಗಳಲ್ಲಿ ನೀರಾವರಿ ಸೌಲಭ್ಯ ಆಗುತ್ತದೆ. ಈ 'ಬಿ' ಸ್ಕೀಮ್‌ನಲ್ಲಿ ನೀರು ಎಷ್ಟು ಬರುತ್ತದೆಂದು ತಿಳಿದುಕೊಂಡು, ಆ ಕಾಲುವೆಗಳ ಕೆಲಸ ಪ್ರಾರಂಭವಾಗಬೇಕು. ಆದ್ದರಿಂದ ಸರ್ಕಾರ ಗಂಭೀರವಾದ ಚಿಂತನೆಯನ್ನು ಮಾಡಿ ಈ 'ಬಿ' ಸ್ಕೀಮ್‌ನ ನೀರನ್ನು ಬಳಸಿಕೊಂಡು, ಅದಕ್ಕೆ ಹಣವನ್ನು ಮುಂದಿನ ವರ್ಷದಲ್ಲಿ ನೀಡಿ ಪ್ರಾರಂಭ ಮಾಡುತ್ತದೆ, ಮತ್ತು ಈ ವರ್ಷ ಕೂಡ ಕೆಲಸವನ್ನು ಪ್ರಾರಂಭ ಮಾಡುತ್ತದೆ. ಇನ್ನೊಂದು ಮುಖ್ಯವಲಯ ವಿದ್ಯುತ್, ಉತ್ಪಾದನೆ ಮತ್ತು ವಿದ್ಯುತ್‌ನ ಸರಬರಾಜು ಇವೆರಡೂ ಕೂಡ ಬಹಳ ಮುಖ್ಯ, ವಿದ್ಯುತ್ ಉತ್ಪಾದನೆ ಮಾಡುವುದು ಎಷ್ಟು ಮುಖ್ಯವೋ, ಸರಬರಾಜು ಮಾಡುವುದೂ ಕೂಡ ಅಷ್ಟೆ ಮುಖ್ಯ. ಈ ಹಿನ್ನೆಲೆಯಲ್ಲಿ ನಮ್ಮ ಸರ್ಕಾರ ವಿದ್ಯುತ್ತಿನ ಉತ್ಪಾದನೆಗೆ ಇನ್ನು ಹೆಚ್ಚಿನ ಗಮನ ಕೊಡಬೇಕು. ನಾವು ರೈತರಿಗೆ ಕೇವಲ ಪಂಪ್‌ಸೆಟ್‌ಗಳಿಗೆ ಸಬ್ಸಿಡಿಯನ್ನು ಕೊಟ್ಟರೆ ಸಾಲದು, ವಿದ್ಯುತ್ತನ್ನು ಕೊಡಬೇಕಾಗುತ್ತದೆ. ಹಾಗಾಗಿ ಈ ವಿದ್ಯುತ್ತಿನ ಉತ್ಪಾದನೆಗಾಗಿ ಹೆಚ್ಚು ಒತ್ತನ್ನು ನೀಡಬೇಕಾಗುತ್ತದೆ. ಈಗಾಗಲೇ ಹಲವಾರು ಖಾಸಗಿ ವಲಯ ಮತ್ತು ಜಾಯಿಂಟ್ ಸೆಕ್ಟರ್‌ನಲ್ಲಿ ವಿದ್ಯುತ್ತಿನ ಉತ್ಪಾದನೆಯ ಸಲುವಾಗಿ ಏನೇನು ಕ್ರಮ ತೆಗೆದುಕೊಂಡಿದ್ದಾರೆ, ಇನ್ನೂ ಹೆಚ್ಚಿನ ವಿದ್ಯುತ್ತಿನ ಉತ್ಪಾದನೆಯ ಬಗ್ಗೆ ಸರ್ಕಾರ ಚಿಂತನೆ ಮಾಡುತ್ತದೆಂದು ನನಗೆ ಆಶಯ ಇದೆ. ಇದರೊಂದಿಗೆ ಇನ್ನೊಂದು ಮುಖ್ಯವಾದ ಮಾತನ್ನು ಹೇಳಿದ್ದೇನೆ, ವಿದ್ಯುತ್ ಉತ್ಪಾದನೆ ಮಾತ್ರ ಮುಖ್ಯವಲ್ಲ, ವಿದ್ಯುತ್ತಿನ ಸರಬರಾಜು ಸರಿಯಾಗಿ ಮಾಡಿದರೆ ವಿದ್ಯುತ್‌ನ ಉತ್ಪಾದನೆ ಮಾಡಿದ ಹಾಗೆ ಆಗುತ್ತದೆ, ಏಕೆ ಈ ಮಾತನ್ನು ಹೇಳುತ್ತೇನೆಂದರೆ, ಇತ್ತೀಚಿನ ದಿನಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ತಿನ ಕಳ್ಳತನ ಹೆಚ್ಚಾಗುತ್ತದೆ, ಇದನ್ನು ಟ್ರಾನ್ಸ್‌ಮಿಷನ್ ಅಂಡ್ ಡಿಸ್ಟ್ರಿಬ್ಯೂಷನ್ ಲಾಸ್ ಎನ್ನುತ್ತೇವೆ. ಒಟ್ಟು ವಿದ್ಯುತ್ತಿನ ಉತ್ಪಾದನೆಯಲ್ಲಿ our T&D loss is 33% That mean it is too Much ಶೇಕಡ 33 ರಷ್ಟು ವಿದ್ಯುತ್ತಿನ ಸಾಗಾಣಿಕೆಯಲ್ಲಿ ಸೋರಿಕೆಯಾಗುತ್ತದೆಂದರೆ ಇದರಲ್ಲಿ ಎಲ್ಲೋ

ತಪ್ಪಿದೆ. ಒಂದು ಕಾಲಕ್ಕೆ ಹಿಂದೆ ಸಿದ್ದರಾಮಯ್ಯನವರಿಗೆ ಗೊತ್ತಿದೆ, ಹಿಂದೆ ನೀವೇ ಮಂತ್ರಿಗಳಾಗಿದ್ದಾಗ 18 to 19% was the T&D loss. ಏತಕ್ಕೆ ಇವತ್ತು 33 ಪರ್ಸೆಂಟ್ ಆಗಿದೆ, ಎಲ್ಲೋ ಇದರಲ್ಲಿ ತಪ್ಪಿದೆ. ಇದರ ಬಗ್ಗೆ ಹೆಚ್ಚಿನ ಗಮನ ಕೊಡಬೇಕಾಗುತ್ತದೆ. In other States Andhra Pradesh it is 23%; Maharashtra 25% Tamil Nadu 19% and Gujarat 18% ಏತಕ್ಕೆ ಇಲ್ಲಿ ಆಗುತ್ತಿಲ್ಲ? ಅದಕ್ಕೆ ದಯಮಾಡಿ ಈ ಟಿ. ಅಂಡ್ ಡಿ. ಲಾಸ್ ಎಂದು ತೋರಿಸುತ್ತಿದ್ದಾರೆ, ಇದರಲ್ಲಿ ಏನೋ ತೊಂದರೆ ಇದೆ, ಅದಕ್ಕೆ ಈ ಸರ್ಕಾರ ಎನರ್ಜಿ ಆಡಿಟ್‌ಅನ್ನು ಮಾಡಿಸಬೇಕಾಗುತ್ತದೆ. ಈ ಎನರ್ಜಿ ಆಡಿಟ್ ಮಾಡಿಸದಿದ್ದರೆ ಟಿ ಅಂಡ್ ಡಿ ಲಾಸ್‌ನ ಹೆಸರಿನಲ್ಲಿ ಬೇರೆಯವರು ಕೊಳ್ಳೆ ಹೊಡೆಯುತ್ತಾರೆ. ಇವತ್ತು ಮಾನ್ಯ ಈಶ್ವರಪ್ಪನವರು, ಮಾನ್ಯ ವಿರೋಧ ಪಕ್ಷದ ನಾಯಕರು, ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಅದರಲ್ಲೂ ಮುಖ್ಯವಾಗಿ ರಾಜ್ಯದ . ರೈತ ಸಂಘದ ಮುಖಂಡರು ದಯಮಾಡಿ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಇವತ್ತು ವಾಟಾಳ್ ನಾಗರಾಜ್ ಅವರಲ್ಲಿ ಕೂಡ ನಾನು ಮನವಿ ಮಾಡಿಕೊಳ್ಳುತ್ತೇನೆ; ಭಾಗ್ಯಜ್ಯೋತಿ ಸ್ಕೀಮ್‌ನಲ್ಲಿ ಕೂಡ ಟಿ ಅಂಡ್ ಡಿ ಲಾಸ್ ಎಂದರೆ ಏನು ಏಕೆ? ಯಾತಕ್ಕೆ ಈ ರೀತಿ ಆಗುತ್ತಿದೆ. ಮಾನ್ಯ ಉಪಮುಖ್ಯಮಂತ್ರಿಗಳು ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ, ಏನೆಂದರೆ ನಮ್ಮ ರಾಜ್ಯದಲ್ಲಿ ವಿದ್ಯುತ್ತಿನ ಉತ್ಪಾದನೆಯಲ್ಲಿ ಶೇಕಡ 49 ರಷ್ಟು ವಿದ್ಯುತ್ ಕೃಷಿಗೆ ಹೋಗುತ್ತದೆ. ಎಂದು It is impossible. ನಮ್ಮಲ್ಲಿ ಒಟ್ಟಾರೆ ಹದಿನೈದು ಲಕ್ಷ ಪಂಪ್‌ಸೆಟ್‌ಗಳಿವೆ, ಈ ಹದಿನೈದು ಲಕ್ಷ ಪಂಪ್‌ಸೆಟ್‌ಗಳಿಗೆ ಶೇಕಡ 49 ರಷ್ಟು ವಿದ್ಯುತ್ ಸರಬರಾಜು ಯಾವರೀತಿ ಮಾಡಲಿಕ್ಕೆ ಸಾಧ್ಯ? ವಾಣಿಜ್ಯ, ಗೃಹಬಳಕೆ, ಕೈಗಾರಿಕೆಗೆ ಕೇವಲ ಶೇಕಡ 50 ರಷ್ಟಿದೆ, ಇದರಲ್ಲಿ pilferage ಇದೆ, ಎಲ್ಲೋ ಇದರಲ್ಲಿ ಭ್ರಷ್ಟಾಚಾರ ಇದೆ, ಅದಕ್ಕಾಗಿ ಇವತ್ತು ಮೀಟರನ್ನು ಹಾಕುವುದಕ್ಕೆ ನಾನು ಸ್ವಾಗತಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮೀಟರ್ ಹಾಕಬೇಕು ಎಂದು ನೀವು ಹೇಳುತ್ತಿರುವಿರಾ?

ಶ್ರೀ ಬಸವರಾಜ ರಾಯರೆಡ್ಡಿ:- ಹೌದು, ಮೀಟರ್ ಹಾಕುವುದರಿಂದ ಯಾರಿಗೂ ಏನೂ ಸಮಸ್ಯೆಯಿಲ್ಲ, ಇದರರ್ಥ ನಾಳೆ ಮೀಟರ್ ಹಾಕಿದ ಮೇಲೆ ಇದರಿಂದ ರೈತರಿಗೆ ತೊಂದರೆ ಆಗುತ್ತದೆಂದು ತಿಳಿದುಕೊಂಡಿದ್ದರೆ ತಪ್ಪು, ನಾನು ಪತ್ರಿಕೆಯಲ್ಲಿ ಓದಿದ್ದೇನೆ, ರೈತ ಸಂಘದವರು ಮೀಟರನ್ನು ಹಾಕಿದರೆ ನಾವು ಸುಡುತ್ತೇವೆ ಎಂದಿದ್ದಾರೆ, ಇದರಿಂದ ರೈತರಿಗೆ ಲಾಸ್ ಆಗುತ್ತದೆ ದಯವಿಟ್ಟು ಅರ್ಥ ಮಾಡಿಕೊಳ್ಳಿ. ಏತಕ್ಕೆ ಈ ಮಾತನ್ನು ಹೇಳುತ್ತೇನೆಂದರೆ, ಮೀಟರ್ ಹಾಕುವುದು ಕೆ.ಪಿ.ಟಿ.ಸಿ.ಎಲ್. ನವರಿಗೆ ಬೇಕಾಗಿಲ್ಲ ಏಕೆ ಬೇಕಾಗಿಲ್ಲ ಅಂದರೆ, ರೈತರಿಗೆ ಶೇಕಡ 49 ರಷ್ಟು ವಿದ್ಯುತ್ ಕೊಡುತ್ತಿದ್ದೇವೆಂದು ಹಪಿಳಿ, 1800 ಕೋಟಿ ರೂಪಾಯಿಗಳ ಸಬ್ಸಿಡಿ ವಸೂಲು ಮಾಡುತ್ತಿದ್ದಾರೆ, ಇದಕ್ಕಾಗಿ ಮೀಟರ್ ಅಳವಡಿಸಬೇಕು, ಈಗ ಒಂದು ಹೆಚ್.ಪಿ.ಗೆ 500

ರೂಪಾಯಿಯೆಂದು ನಿಗದಿಪಡಿಸಿದ್ದಾರೆ. ನೀವು ಎಷ್ಟು ಸುಟ್ಟರೂ 500 ರೂಪಾಯಿ ಕೊಡಲೇಬೇಕು, ಮೀಟರ್ ಬರೇ ಲೆಕ್ಕಕ್ಕೆ ಮಾತ್ರ. ಅದಕ್ಕೆ ಎಷ್ಟು ಸುಡುತ್ತಾರೆಂದು ಮೊದಲು ನೋಡಬೇಕಾಗಿದೆ. ಭಾಗ್ಯಜ್ಯೋತಿ ಇದರಲ್ಲಿ ಎಷ್ಟು ಸುಡುತ್ತಾರೆ, ಅದರ ಹೆಸರಿನಲ್ಲಿ ಇಲ್ಲಿ ಟಿ ಅಂಡ್ ಡಿ ಲಾಸ್ ಅಂತ ತೋರಿಸುತ್ತಾರೆ, ಇಲ್ಲಿ ಟಿ ಅಂಡ್ ಡಿ ಲಾಸ್ ಇಲ್ಲ, ಅಲ್ಲಿ ದೊಡ್ಡ ದೊಡ್ಡ ಇಂಡಸ್ಟ್ರೀಸ್‌ಗೆ ಕರೆಂಟ್ ಕೊಡುತ್ತಾ ಇರುತ್ತಾರೆ. ಅಲ್ಲಿ ಮೇಲಿನಿಂದ ಕೆಳಗಿನವರೆಗೂ ಬರೇ ಅಡ್ಜಸ್ಟ್‌ಮೆಂಟ್. Today KPTCL, I want to call it as a "white elephant." ಮಾನ್ಯ ಮುಖ್ಯಮಂತ್ರಿಗಳು ಅದಕ್ಕೆ ಅಧ್ಯಕ್ಷರಾಗಿದ್ದಾರೆ. ಹಾಗಿಗಿ ಯಾರೂ ಅದರ ಬಗ್ಗೆ ಮಾತನಾಡುವ ಹಾಗಿಲ್ಲ, ಆದ್ದರಿಂದ ಇವತ್ತು ಈ ಎನರ್ಜಿ ಆಡಿಟ್ ಮಾಡಿಸಿ ಮೀಟರ್ ಹಾಕಿಸಿದರೆ ಬಹಳ ಒಳ್ಳೆಯದು. ಹಾಗಾಗಿ ನಾನು ಎಲ್ಲಾ ಮಾನ್ಯ ವಿರೋಧ ಪಕ್ಷದ ರೈತ ಸಂಘದ ಮುಖಂಡರನ್ನು ಮೀಟರ್ ಹಾಕುವುದನ್ನು ಸ್ವಾಗತಿಸಿ ಎಂದು ಕೇಳಿಕೊಳ್ಳುತ್ತೇನೆ. ಒಂದು ವರ್ಷದ ಮಟ್ಟಿಗೆ ನೋಡಿ, ಯಶಸ್ವಿಯಾಗದಿದ್ದರೆ ಆಮೇಲೆ ತೆಗೆದು ಹಾಕಿ, ಆಗ ನಮಗೂ ಕೂಡ ಎಷ್ಟು ಅಗ್ರಿಕಲ್ಚರ್ ಸೆಕ್ಟರ್‌ಗೆ ಖರ್ಚಾಗುತ್ತದೆಂವುದು ಗೊತ್ತಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:– ಇದುವರೆಗೆ ರೈತರೇ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರು, ಆದರೆ ಈಗ ಮೀಟರ್ ಹಾಕುವುದರಿಂದ ನೀವೇ ರೈತರ ಕತ್ತಿಗೆ ಹಗ್ಗವನ್ನು ಹಆಕಿ ನೇಣುಹಾಕಲಿಕ್ಕೆ ಹೊರಟ್ಟಿದ್ದೀರಿ, ನಿಮ್ಮ ಹಸೆಬರಹ ನೋಡಿ ಮೀಟರ್ ಹಾಕುವುದರಿಂದ ನೇರವಾಗಿ ಸರ್ಕಾರವೇ ಹಗ್ಗವನ್ನು ಅವರ ಕತ್ತಿಗೆ ಹಾಕಿಕೊಳ್ಳಲಿಕ್ಕೆ ಕೊಡುತ್ತೀರಿ, ಹಾಕಿಕೊಳ್ಳಿ ಹಗ್ಗವನ್ನು ಎಂದು.

ಶ್ರೀ ಬಸವರಾಜ ರಾಯರೆಡ್ಡಿ:– ಮೀಟರ್ ಹಾಕುವುದು ಎಂದರೆ ಏನು? ಮೀಟರ್ ಹಾಕುವುದರಿಂದ ಅವರಿಗೆ ತೊಂದರೆ ಏನಿಲ್ಲ? ಮೀಟರ್ ಹಾಕಿ ಅವರು ಕರೆಂಟ್‌ಅನ್ನು ಎಷ್ಟು ಉಪಯೋಗಿಸಿದರೂ ಅವರಿಗೆ ಈಗ ಕೇವಲ 500 ರೂಪಾಯಿ ಮಾತ್ರ ನಿಗದಿ ಮಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:– ಭಾಗ್ಯಜ್ಯೋತಿಯಲ್ಲಿ ಹಿಂದೆಯೂ ಹೀಗೆ ಮಾಡಿದರು, ಇದರಲ್ಲಿ ಪುಕ್ಕಟೆಯಾಗಿ ಕರೆಂಟ್ ಕೊಡಬಹುದೆಂದು ಹೇಳಿ ಕೊನೆಗೆ ಮೀಟರ್ ಹಾಕಿದಿರಿ, ಇವತ್ತು ಮೀಟರ್ ಹಾಕಿಸಲಿಕ್ಕೆ ನಿಮ್ಮ ಬುದ್ಧಿವಂತಿಕೆ ಬೇಕು, ಆದರೆ ಇದು ರೈತರ ಪಾಲಿಗೆ ಯಮ ಕಟಿಗೆ, ಅವರ ಪಾಲಿಗೆ ಆತ್ಮಹತ್ಯೆಯನ್ನು ನೀವು ಕೊಡುತ್ತಿದ್ದೀರಿ. ರೈತರಿಗೆ ಒಳ್ಳೆಯ ಸಂದೇಶವನ್ನು ನೀವು ಕೊಡುತ್ತಿಲ್ಲ.

ಶ್ರೀ ಡಿ. ಆರ್. ಪಾಟೀಲ್ (ಗದಗ):– ವಾಟಾಳ್ ನಾಗರಾಜ್‌ರವರೇ, ನಾನು ಸತ್ಯವಾಗಿ ಹೇಳುತ್ತೇನೆ, ನಿನ್ನೆ ಶ್ರೀರಾಮರೆಡ್ಡಿಯವರು ಒಂದು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ, ಟ್ರಾನ್ಸ್‌ಫಾರ್ಮರ್ ಮಟ್ಟದೊಳಗೆ ಮೀಟರ್ ಹಾಕಿ ಮೆಷರ್ ಮಾಡಲಿ ಅಲ್ಲಿ ಹಾಕಲಿ.

ಶ್ರೀ ಬಸವರಾಜ ರಾಯರೆಡ್ಡಿ:- ನೋಡಿ, ಇಂಡಿವಿಜ್ಯುಯಲ್ ರೈತರಿಗೆ ಮೀಟರ್ ಹಾಕಬೇಕೆಂದು ನಾನು ಹೇಳುವುದಿಲ್ಲ, ಡಿಸ್ಟ್ರಿಬ್ಯೂಷನ್ ಸಿಸ್ಟಮ್‌ನಲ್ಲಿರುವ ಟ್ರಾನ್ಸ್‌ಫಾರ್ಮರ್‌ನಲ್ಲೇ ಮೀಟರ್ ಹಾಕಲಿ. ಇದರ ಬಗ್ಗೆ ವಾಟಾಳ್ ನಾಗರಾಜ್‌ರವರೇ, ಕೆಲವು ವಿಚಾರಗಳನ್ನು ಈ ಸದನದಲ್ಲಿ ಹೇಳಲಿಕ್ಕಾಗುವುದಿಲ್ಲ, ನಂತರ ನಿಮಗೆ ವಿವರಗಳನ್ನು ನೀಡುತ್ತೇನೆ.

ಶ್ರೀ ಅವರೇಗೌಡ ಎಲ್. ಪಾಟೀಲ್ ಬಯ್ಯಾಪುರ್ (ಸಕ್ಕರೆ ಸಚಿವರು):- ವಾಟಾಳ್ ನಾಗರಾಜ್‌ರವರೇ ತಾವು ಹಿರಿಯ ಸದಸ್ಯರಾಗಿದ್ದೀರಿ, ಈ ಸಬ್ಸಿಡಿ 1800 ಕೋಟಿ ರೂಪಾಯಿಗಳನ್ನು ರೈತರಿಂದ ವಸೂಲು ಮಾಡುತ್ತಿದ್ದಾರೆಂದು ಈಶ್ವರಪ್ಪ ಹಾಗೂ ಜಗದೀಶ್ ಶೆಟ್ಟರ್ ರವರು ಹೇಳಿದರು. ಎಲ್ಲಿ ವಿದ್ಯುತ್ ಕಳವು ಆಗುತ್ತದೆ, ಎಲ್ಲಿ ಕರೆಂಟ್ ಸೋರಿಕೆಯಾಗುತ್ತದೆಂಬ ಬಗ್ಗೆ ವಿಶ್ಲೇಷಣೆ ಮಾಡುವ ಸಲುವಾಗಿ ಆ ಒಂದು ಯೋಜನೆಯನ್ನು ಜಾರಿಗೆ ತಂದರೆ ಏನು ತಪ್ಪಾಗುತ್ತದೆ?

ಶ್ರೀ ಕೆ. ಎಸ್. .ಈಶ್ವರಪ್ಪ (ಶಿವಮೊಗ್ಗ):- ಈಗ ನೀವು ಆ ಪ್ರಕಾರವೇ ಹೇಳುವುದು, ಇದರಲ್ಲಿ ಏನೂ ಅನುಮಾನವಿಲ್ಲ, ಆದರೆ ನಾಳೆ ಬೆಳಿಗ್ಗೆ ಮೀಟರ್ ಹಾಕಿದ ನಂತರ ತುಂಬಾ ಸ್ಪಷ್ಟವಾಗಿ ಒಂದು ಯೂನಿಟ್‌ಗೆ 5.00 ರೂಪಾಯಿ ಎಂದು ಹೇಳುತ್ತಿರಿ ನಾವು ಹೇಳುವುದನ್ನು ಪೂರ್ತಿ ಕೇಳಿ, ನಾವು ಅನುಭವಿಸುತ್ತಿದ್ದುದನ್ನು ನಿಮಗೆ ಹೇಳುತ್ತೇವೆ, ವಾಟಾಳ್ ನಾಗರಾಜ್ ಅವರು ಹೇಳಿದ ಹಾಗೆ ಭಾಗ್ಯಜ್ಯೋತಿ ಸ್ಕೀಮ್‌ನಲ್ಲಿ ಮೊದಲು ಫ್ರೀ ಎಂದು ಹಾಕಿದ್ದರು ಹಾಗೆಯೇ ಈಗ ಶೇಕಡ 5 ರಷ್ಟು ಪಾವತಿಸಬೇಕಾಗುವುದು; ನಂತರ ಅವನಿಗೆ ನೇಣು ಹಾಕುವುದು, ಮನಸ್ಸಿಗೆ ಬಂದಂತೆ ರೇಟ್ ಹಾಕುತ್ತಾ ಹೋಗುತ್ತಾರೆ, ಇದಕ್ಕೆ ನೀವು ದಾರಿ ಮಾಡಿಕೊಟ್ಟ ಹಾಗೆ ಆಗುತ್ತದೆ. ಈಗ ನೀವೇನಾದರೂ ಮೀಟರ್ ಹಾಕಿಸಿದರೆ ಕರ್ನಾಟಕ ರಾಜ್ಯದಲ್ಲಿ ಕ್ರಾಂತಿ ಆಗುತ್ತದೆ, ಅದನ್ನು ತಾವು ದಯವಿಟ್ಟು ನೆನಪಿಟ್ಟುಕೊಳ್ಳಬೇಕು.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು):- ನಾವು ರೈತರಿಗೆ ಪಂಪುಸೆಟ್ಟುಗಳಿಗೆ ಮೀಟರ್ ಹಾಕಿ, ಅದಕ್ಕೆ ಎಷ್ಟು ಖರ್ಚು ಮಾಡುತ್ತೇವೆ, ಅಷ್ಟು ಹಣವನ್ನು ರೈತರಿಂದ ವಸೂಲ್ಮಾಡಬೇಕೆಂಬುದು ಸರ್ಕಾರದ ಉದ್ದೇಶ ಅಲ್ಲ. ಕೆ.ಇ.ಆರ್.ಸಿ. ಅವರಿಗೆ ಕಡಿಮೆ ದರದಲ್ಲಿ ಎಷ್ಟು ನಿಗದಿ ಮಾಡುತ್ತದೆ, ಅವರು ಅಷ್ಟೇ ಕೊಡಬೇಕು. ಈಗೆಷ್ಟು ಕೊಡುತ್ತಾರೆ, ಅದೇ ತರಹ ಈಗಿರುವ ಪದ್ಧತಿಯೇ ಮುಂದುವರಿಯುತ್ತದೆ. ಏಕೆ ಮೀಟರು ಹಾಕಬೇಕೆಂದು ಪ್ರತಿಪಾದನೆ ಮಾಡುತ್ತಿದ್ದಾರೆಂದರೆ, ಈಗಾಗಲೇ ಪ್ರಸ್ತಾಪ ಮಾಡಿದಂತೆ, ಒಟ್ಟು ಬಾಕಿಯಲ್ಲಿ ಕೃಷಿ ವಲಯಕ್ಕೆ 49 ಪರ್ಸೆಂಟ್ ಹೋಗುತ್ತದೆ. ಈ ಟಿ. ಅಂಡ್ ಡಿ ಲಾಸ್ ಇವೆಲ್ಲಾ ಜಾಸ್ತಿಯಾಗಿವೆ. ಈಗ ಎನರ್ಜಿ ಆಡಿಟ್ ಆಗಬೇಕು. ಯಾವಯಾವುದಕ್ಕೆ ಎಷ್ಟೆಷ್ಟು ಹೋಗುತ್ತದೆ, ಪಂಪುಸೆಟ್ಟುಗಳಿಗೆ ಎಷ್ಟು ಹೋಗುತ್ತದೆ, ಗೃಹ ಬಳಕೆಗೆ ಎಷ್ಟು ಹೋಗುತ್ತದೆ, ಕೈಗಾರಿಕೆಗಳಿಗೆ ಎಷ್ಟು ಹೋಗುತ್ತದೆ, ವಾಣಿಜ್ಯ ಉದ್ದೇಶಕ್ಕೆ ಎಷ್ಟು ಹೋಗುತ್ತದೆ, ಇವೇನೂ ಗೊತ್ತಿಲ್ಲದೆ ಹೋದರೆ, ಎಲ್ಲೆಲ್ಲಿ ಎಷ್ಟೆಷ್ಟು ಸೋರಿ ಹೋಗುತ್ತದೆ ಎಂಬುದನ್ನು ಪತ್ತೆ ಹಚ್ಚುವುದು ಹೇಗೆ? ಮಾನ್ಯ ಮಾಧುಸ್ವಾಮಿಯವರು ಸಲಹೆ

ಕೊಟ್ಟರು. ಟ್ರಾನ್ಸ್‌ಫಾರ್ಮರ್ ಮಟ್ಟದಲ್ಲೇ ಆದರೆ, ಲೆಕ್ಕ ಹಾಕಬಹುದು ಎಂದರು. ಆ ರೀತಿ ಮಾಡುವುದಕ್ಕೆ ಆಗುವುದಿಲ್ಲ. ಆ ಕಾರಣದಿಂದ ಮೀಟರ್ ಹಾಕುವುದಕ್ಕೆ ಹೇಳುತ್ತಿದ್ದೇವೆಯೇ ಹೊರತು ರೈತರಿಗೆ ಯಾವ ಕಾರಣಕ್ಕೂ ಕೂಡ ಭಾರ ಮಾಡಬೇಕೆಂಬ ಉದ್ದೇಶದಿಂದ ಅಲ್ಲ. ಇದು ಎಲ್ಲಿ ಸೋರಿ ಹೋಗುತ್ತದೆಂಬುದನ್ನು ಪತ್ತೆ ಹಚ್ಚಿ, ಆ ರೀತಿ ಸೋರಿ ಹೋಗುವುದನ್ನು ತಡೆಗಟ್ಟಿ ಮತ್ತು ಅಲ್ಲಿ ಬಿಗಿ ಮಾಡಬೇಕು. ಈಗ ಟ್ರಾನ್ಸ್‌ಮಿಷನ್ ಲಾಸ್, ಡಿಸ್ಟಿಬ್ಯೂಷನ್ ಲಾಸ್ ಮತ್ತು ಡೆಫ್ಟ್ ಕಳ್ಳತನ ಎಷ್ಟಾಗುತ್ತದೆಂದು ಯಾರಿಗೂ ಗೊತ್ತಾಗುವುದಿಲ್ಲ. Because energy audit has not been done ಎಲ್ಲವೂ ಮೀಟರ್ ಆಗಿಲ್ಲ. ಲೆಕ್ಕ ಸಿಕ್ಕುತ್ತಾ ಇಲ್ಲ. ಟಿ ಅಂಡ್ ಡಿ ಲಾಸ್ ಎಷ್ಟು ಎಂದು ಗೊತ್ತಾಗುತ್ತಾ ಇಲ್ಲ. ಪಂಪುಸೆಟ್ಟುಗಳಿಗೆ ಎಷ್ಟು ಹೋಗುತ್ತದೆಂಬುದು ಗೊತ್ತಿಲ್ಲ. ಇಷ್ಟಾಗುತ್ತದೆಂದು ನಾವು ಒಂದು ಅಂದಾಜನ್ನು ಇಟ್ಟುಕೊಂಡಿದ್ದೇವೆ. ಲೆಕ್ಕ ಮಾಡಲಿಕ್ಕೋಸ್ಕರವೇ ಹೊರತು, ರೈತರಿಗೆ ಕಿರುಕುಳ ಕೊಡುವುದಕ್ಕಾಗಲೀ ಅಥವಾ ತೊಂದರೆ ಕೊಡುವುದಕ್ಕಾಗಲೀ ಅಲ್ಲ. ಈ ಭರವಸೆಯನ್ನು ಬಹಳ ಸ್ಪಷ್ಟವಾಗಿ, ಸಂಪೂರ್ಣವಾಗಿ ನಾವು ರೈತರಿಗೆ ಕೊಡುತ್ತೇವೆ. ಭಾಗ್ಯಜ್ಯೋತಿ ಮತ್ತು ಕುಟೀರಜ್ಯೋತಿ ಮನೆಗಳಿಗೆ ಮೀಟರ್ ಹಾಕುವ ವಿಷಯ ಹೇಳಿದರು. ಸಮ್ಮಿಶ್ರ ಸರ್ಕಾರ ಬಂದಮೇಲೆ 18 ಯೂನಿಟ್‌ವರೆಗೆ ಏನೂ ಕೊಡಬೇಕಾಗಿಲ್ಲ. 18 ಯೂನಿಟ್‌ಗಿಂತ ಜಾಸ್ತಿ ಉರಿಸಿದರೆ ಕೊಡಿ ಎಂದು ಹೇಳುತ್ತಿದ್ದೇವೆ. ಮೊದಲು ಈ ಮನೆಗಳಿಗೆ ಒಂದು ಬಲ್ಬ್ ಅಥವಾ ಒಂದು ಲೈಟ್‌ಗೆ ಮಾತ್ರ ಪುಕ್ಕಟೆ ಎಂದು ಹೇಳಿದ್ದೆವು. ಈ ಕಾರ್ಯಕ್ರಮದ ಉದ್ದೇಶ ಮತ್ತು ಕಾರ್ಯಕ್ರಮದಲ್ಲಿರುವುದನ್ನು ಹೇಳಿರುವುದು. ಬಡವರಿಗೆ ಒಂದು ಲೈಟ್ ಹಾಕಿ, ಆ ಲೈಟ್‌ಗೆ ಆಗತಕ್ಕ ವಿದ್ಯುತ್ ಖರ್ಚನ್ನು ನಾವು ಕೊಡಬೇಕು ಎಂದು ಹೇಳಿರುವುದು. ಅದಕ್ಕೆ ನಾವು ಈಗ ಒಂದು ಬಲ್ಬ್ ಎಷ್ಟು ಉರಿಯುಬಹುದು ಎನ್ನುವುದನ್ನು ಲೆಕ್ಕಮಾಡಿ, 18 ಯೂನಿಟ್‌ಗಿಂತ ಜಾಸ್ತಿಯಾಗುವುದಿಲ್ಲವೆಂದು ತಿಳಿದು, ಅದಕ್ಕಿಂತ ಜಾಸ್ತಿ ಉರಿಸಿದರೆ ಕೊಡಿ ಎಂದು ಹೇಳಿದ್ದೇವೆ.

ಶ್ರೀ ಕೆ. ಎಸ್. ಈಶ್ವರಪ್ಪ:– ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳುತ್ತಿರುವುದು ಸರಿ ಇದೆ. ಒಂದು ಬಲ್ಬ್‌ಗೆ ಉಚಿತ ಎಂದು ತಾವೇನು ಹೇಳುತ್ತಿದ್ದೀರಿ, ಇದನ್ನು ಖಂಡಿತ ನಾವು ಸ್ವಾಗತ ಮಾಡುತ್ತೇವೆ. ಈಗೇನಾಗಿದೆ, ಕಳೆದ ಮೂರು ವರ್ಷಗಳಿಂದ ಒಂದು ಬಲ್ಬ್ ಇದ್ದವರಿಗೂ ಕೂಡ ಬಿಲ್ಲೇ ಕೊಡಲಿಲ್ಲ. ಮೂರು ವರ್ಷದ ಬಿಲ್ಲುಗಳನ್ನೂ ಒಟ್ಟಿಗೇ ತಂದುಕೊಡುತ್ತಿದ್ದಾರೆ. ಇದರಿಂದ, ಅವನು ಕಟ್ಟುವ ಶಕ್ತಿ ಇಲ್ಲ. ಸಂಪರ್ಕ ಕಡಿದು ಹಾಕುತ್ತಿದ್ದಾರೆ. ದಯವಿಟ್ಟು ಆ ಕಡೆ ಗಮನ ಕೊಡಿ. ಮಾನ್ಯ ರಾಯರೆಡ್ಡಿಯವರು ಹೇಳುತ್ತಿರುವ ಅಂಶಗಳ ಬಗ್ಗೆ ಮತ್ತೊಮ್ಮೆ ಸರ್ವಪಕ್ಷಗಳ ಸಭೆ ಕರೆದು ಚರ್ಚೆ ಮಾಡಿಕೊಂಡು, ಸಾಧಕ ಬಾಧಕಗಳನ್ನು ತಿಳಿದುಕೊಂಡು ತೀರ್ಮಾನ ಮಾಡುವುದಕ್ಕೆ ಯೋಚನೆ ಮಾಡಿ. ಧಡಾರ್ ಎಂದು ತಾವು ತೀರ್ಮಾನ ಮಾಡಿದರೆ, ಇಡೀ ರಾಜ್ಯದಲ್ಲಿ ಒಂದು ರೀತಿಯಲ್ಲಿ ರೈತರ ಆಕ್ರೋಶಕ್ಕೆ ಈ ಸರ್ಕಾರ ಒಳಗಾಗತಕ್ಕ ಸ್ಥಿತಿ ಬಂದು ಹೋಗುತ್ತೆ. ದಯವಿಟ್ಟು ಚರ್ಚೆ ಮಾಡಿ. ನಾವು ಇದರ ಬಗ್ಗೆ ಹಠ ಮಾಡುವ ಪ್ರಶ್ನೆ ಇಲ್ಲ, ನೀವೂ ಹಠ ಮಾಡಬೇಡಿ.

ಶ್ರೀ ಸಿದ್ಧರಾಮಯ್ಯ:- ಹಠ ಮಾಡುವ ಪ್ರಶ್ನೆಯೇ ಇಲ್ಲ. This Government is totally committed to causes of the farmers. ಅದರಲ್ಲಿ ಎರಡನೇ ಮಾತು ಇಲ್ಲ. ರೈತರ ಸಮಸ್ಯೆಗಳಿಗೆ ಸ್ಪಂದಿಸಬೇಕೆಂಬುದೇ ಈ ಸರ್ಕಾರದ ಮೊದಲನೇ ಉದ್ದೇಶ. ಅಂದಮೇಲೆ, ನೀವು ಸಲಹೆ ಕೊಡಿ. ಎನರ್ಜಿ ಅಡಿಟ್ ಆಗಬೇಕು, ಯಾವರೀತಿ ಹೇಳಿ ನೋಡೋಣ. ಹೇಗೆ ತಪ್ಪಿಸುವುದು ಹೇಳಿ.

ಶ್ರೀ ವಾಟಾಳ್ ನಾಗರಾಜ್:- ನೀವು ಮೀಟರ್ ಹಾಕುವುದಕ್ಕೆ ಮುಂಚೆ ಸಾಧಕ ಬಾಧಕಗಳ ಬಗ್ಗೆ ರೈತ ಮುಖಂಡರುಗಳು ಮತ್ತು ವಿರೋಧ ಪಕ್ಷದ ಮುಖಂಡರುಗಳನ್ನು ಕರೆದು ಚರ್ಚೆ ಮಾಡಿ, ಅದಾದ ಮೇಲೆ ಒಂದು ತೀರ್ಮಾನಕ್ಕೆ ಬನ್ನಿ. ಅದಕ್ಕೂ ಮುಂಚೆ ದಯವಿಟ್ಟು ನೀವು ಆ ತೀರ್ಮಾನಕ್ಕೆ ಬರುವುದು ಬೇಡ.

ಶ್ರೀ ಸಿದ್ಧರಾಮಯ್ಯ:- ಅವರ ಸಲಹೆಗಳನ್ನು ನಾವು ಗಮನದಲ್ಲಿಟ್ಟುಕೊಂಡು ಮಾಡುತ್ತೇವೆ.

ಶ್ರೀ ಕೆ. ಎಸ್. ಈಶ್ವರಪ್ಪ:- ಭಾಗ್ಯಜ್ಯೋತಿ, ಕುಟೀರಜ್ಯೋತಿ ಮನೆಗಳ ಬಿಲ್ಲುಗಳನ್ನು ಮೂರು ವರ್ಷಗಳಿಂದ ಕೊಡಲೇ ಇಲ್ಲ. ಮಾನ್ಯ ಉಪ ಮುಖ್ಯಮಂತ್ರಿಗಳನ್ನು ನಾನು ಪ್ರಾರ್ಥನೆ ಮಾಡುತ್ತೇನೆ. ಇಡೀ ರಾಜ್ಯದಲ್ಲಿ ಭಾಗ್ಯಜ್ಯೋತಿ ಕೊಟ್ಟಿದ್ದೀರಿ. ಕುಟೀರಜ್ಯೋತಿಗೆ ಅನುಕೂಲ ಮಾಡಿಕೊಡುತ್ತಿದ್ದೀರಿ. ನಿಜಕ್ಕೂ ನಿಮಗೆ ನಾನು ಅಭಿನಂದನೆ ಸಲ್ಲಿಸುತ್ತಿದ್ದೇನೆ. ಇದರಲ್ಲೇನೂ ಅನುಮಾನ ಇಲ್ಲ. ಹಿಂದಿನ ಸರ್ಕಾರ ಮಾಡಿದ ತಪ್ಪಿನಿಂದ, ಭಾಗ್ಯಜ್ಯೋತಿಯ ಒಂದೊಂದು ಬಲ್ಪ್ ಇಟ್ಟುಕೊಂಡಿರತಕ್ಕ ಆ ಬಡವರಿಗೆ ಬಾಕಿ ಇದೆಯೆಂದು ಸಂಪೂರ್ಣವಾಗಿ ಸಂಪರ್ಕ ಕಡಿದು ಹಾಕುತ್ತಿದ್ದಾರೆ. ದಯವಿಟ್ಟು ಅದರ ಬಗ್ಗೆ ಗಮನ ಕೊಡಿ.

ಶ್ರೀ ಸಿದ್ಧರಾಮಯ್ಯ:- ಸಂಪರ್ಕ ಕಡಿದು ಹಾಕಬೇಡಿ ಎಂದು ಹೇಳಿದ್ದೇವೆ.

ಶ್ರೀ ಬಸವರಾಜ ರಾಯರೆಡ್ಡಿ:- ಅಧ್ಯಕ್ಷರೇ, ಈಗಾಗಲೇ ಆ ವಿಚಾರದಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳು ಎನರ್ಜಿ ಆಡಿಟ್‌ನ್ನು ಮಾಡಲಿಕ್ಕೆ ಮಾತ್ರ, ಈ ಸರ್ಕಾರ ರೈತರ ವಿರೋಧಿ ಅಲ್ಲ ಎಂದು ಹೇಳಿದ್ದಾರೆ. ತಮ್ಮ ಜೊತೆಗೆ ನಾನೂ ಸ್ಪಷ್ಟಪಡಿಸುತ್ತೇನೆ ರೈತರಿಂದ ಏನಾದರೂ ಹೆಚ್ಚು ಹಣವನ್ನು ತೆಗೆದುಕೊಂಡರೆ, ನಾನೂ ನಿಮ್ಮ ಜೊತೆಗೆ ಇರುತ್ತೇನೆ. ಅದರ ಬಗ್ಗೆ ಅನುಮಾನ ಬೇಡ, ಆದರೆ, ಹೆಚ್ಚು ತೆಗೆದುಕೊಳ್ಳುವ ಪ್ರಶ್ನೆಯೇ ಇಲ್ಲ.

Sri Siddaramaiah is committed for the farmers. This Government is committed for the farmers.

ಶ್ರೀ ಕೆ. ಎಸ್. ಈಶ್ವರಪ್ಪ:- ನೀವು ಹೇಳುವುದನ್ನು ತೆಗೆದುಕೊಂಡು ನಾವೇನು ಮಾಡೋಣ ಈಗ ಅವರು ಅನುಭವಿಸುತ್ತಾ ಇದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ:– ನನಗೆ ಸಂಬಂಧಪಟ್ಟಂತೆ ಹನ್ನೊಂದು ಪಂಪುಸೆಟ್ಟುಗಳಿವೆ.

ಶ್ರೀ ಹೆಚ್. ಎಸ್. ಮಹದೇವಪ್ರಸಾದ್:– ಚುನಾವಣೆಗೆ ಮುಂಚೆ ಬಹಳ ಜನಗಳ ಅಭಿಪ್ರಾಯ ತೆಗೆದುಕೊಂಡಿರಿ, ಈಗ ಇವರ ಅಭಿಪ್ರಾಯ ತೆಗೆದುಕೊಂಡು ಏನು ಮಾಡೋಣ ಎನ್ನುತ್ತೀರಿ.

ಶ್ರೀ ಕೆ. ಎಸ್. ಈಶ್ವರಪ್ಪ:– ಅದಕ್ಕೇ ನಾವು 79 ಅದೆವು, ನೀವು ಅನೇಕರದ್ದು ತೆಗೆದುಕೊಂಡಿರಿ ನಲವತ್ತಾರಕ್ಕೆ ಇಳಿದಿರಿ.

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್:– ನಮ್ಮ ಕಡೆಯವರ ಬೆಂಬಲ ತೆಗೆದುಕೊಂಡಿದ್ದಕ್ಕೇ ನೀವು ಅಷ್ಟು ಬಂದಿದ್ದು.

ಶ್ರೀ ಕೆ. ಎಸ್. ಈಶ್ವರಪ್ಪ:– ಅದಕ್ಕೇ ನೀವು ಕೆಳಗೆ ಇಳಿದಿರಿ.

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್:– ನಮ್ಮವರದ್ದು ತೆಗೆದುಕೊಳ್ಳದೇ ಇದ್ದರೆ, ನಿಮಗೆ ತೊಂದರೆಯಾಗುತ್ತಿತ್ತು.

ಶ್ರೀ ಬಸವರಾಜ ರಾಯರೆಡ್ಡಿ:– ನನ್ನ ಹೆಸರಿನಲ್ಲಿ 11 ಪಂಪುಸೆಟ್ಸ್ ಇವೆ. ಮೊದಲು ಉರುಲು ಹಾಕಿಕೊಳ್ಳಬೇಕಾದರೆ ನಾನೇ ಹಾಕಿಕೊಳ್ಳಬೇಕಾಗುತ್ತೆ, ಅದಕ್ಕಾಗಿ ನಾನು ಇದಕ್ಕೆ ಪ್ರಚೋದನೆ ಕೊಡುವುದಿಲ್ಲ. 11 pumpsets are in my name. ಪ್ರತಿ ವರ್ಷ ಹಣ ತುಂಬಿ ನಾನು ಎನ್.ಓ.ಸಿ. ತೆಗೆದುಕೊಳ್ಳುತ್ತೇನೆ. ಅದಕ್ಕಾಗಿ, ಏನು ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ಎನರ್ಜಿ ಆಡಿಟ್ ಮಾಡಲಿಕ್ಕೆ ನಾನು ಸ್ವಾಗತ ಮಾಡಿದ್ದು.

ಉಪಾಧ್ಯಕ್ಷರು:– ಮಾನ್ಯ ರಾಯರೆಡ್ಡಿಯವರೇ, ನಿಮಗೆ ಇನ್ನೂ ಎಷ್ಟು ಹೊತ್ತು ಬೇಕಾಗುತ್ತದೆ. ಇನ್ನೂ ಬಹಳ ಜನ ಮಾತನಾಡುವವರಿದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ:– ನನಗೆ ಇನ್ನೂ ಒಂದು ಗಂಟೆಯಾದರೂ ಬೇಕಾಗುತ್ತದೆ. ವಾಟಾಳ್ ನಾಗರಾಜ್‌ರವರು ಮೂರು ತಾಸು ಮಾತನಾಡಿದ್ದಾರೆ. ನಾನು ಒಂದೂವರೆ ಗಂಟೆಯಾದರೂ ಮಾತನಾಡುವುದು ಬೇಡವೇ? ವಾಟಾಳರಿಗೆ ಕೊಟ್ಟಿದ್ದು ತಪ್ಪು ಎಂದು ಹೇಳುವುದಿಲ್ಲ. ಅವರು ಒಳ್ಳೆಯ ವಾಕ್‌ಪಟುಗಳು. ಅವರ ಬಗ್ಗೆ ನನಗೆ ಅಭಿಮಾನ ಇದೆ.

ಉಪಾಧ್ಯಕ್ಷರು:– ಇನ್ನೂ ಇಬ್ಬರು ಮೂವರು ಮಾತನಾಡುವವರಿದ್ದಾರೆ, ಈಗ ಟೈಮ್ ಆಗುತ್ತೆ.

ಶ್ರೀ ಬಸವರಾಜ ರಾಯರೆಡ್ಡಿ:– ಹಾಗಾದರೆ, ನಾನು ನಾಳೆ ಮುಂದುವರಿಸುತ್ತೇನೆ.

ಉಪಾಧ್ಯಕ್ಷರು:– ಇನ್ನು ಐದು ನಿಮಿಷದಲ್ಲಿ ನೀವು ಕನ್‌ಕ್ಲೂಡ ಮಾಡಿ. ಸದನವನ್ನು ಗಂಟೆಯವರೆಗೂ ಮುಂದುವರಿಸುತ್ತೇವೆ.

ಶ್ರೀ ಬಸವರಾಜ ರಾಯರೆಡ್ಡಿ:– ದಯಮಾಡಿ ಕೇಳಿ. ಈಗಾಗಲೇ ವಿರೋಧ ಪಕ್ಷಗಳಲ್ಲಿ ನಾಲ್ಕೈದು ಪಕ್ಷಗಳಿಗೆ ಅವಕಾಶ ಕೊಟ್ಟಿದ್ದೀರಿ. ಸುಮಾರು 3–4 ದಿವಸದಿಂದ ಆ ಕಡೆಯವರು ಮಾತನಾಡಿದ್ದಾರೆ. I am the first man from the treasury bench. ದಯಮಾಡಿ, ನಮಗೆ ಅವಕಾಶ ಮಾಡಿಕೊಡಬೇಕೆಂಬುದು ಮನವಿ.

ಶ್ರೀ ಕೆ. ಎಸ್. ಈಶ್ವರಪ್ಪ:– ತಮ್ಮ ಪಕ್ಷದ ಸಭೆಗಳಲ್ಲಿ ಚರ್ಚೆ ಮಾಡಿಯೇ ಬಜೆಟ್ ಮಂಡಿಸಿರುವುದು. ನಿಮಗಿಂತ ಜಾಸ್ತಿ ವಿರೋಧ ಪಕ್ಷದವರು ಇರುವುದು.

ಉಪಾಧ್ಯಕ್ಷರು:– ಇನ್ನು ಹದಿನೈದು ನಿಮಿಷದಲ್ಲಿ ಮುಗಿಸಿಬಿಡಿ. ಇನ್ನೂ ಇಬ್ಬರು ಮಾತನಾಡುವವರು ಇದ್ದಾರೆ, 7 ಗಂಟೆಯವರೆಗೂ ಸದನವನ್ನು ಮುಂದುವರಿಸೋ. ನೀವು 6–15ಕ್ಕೆ ಮುಗಿಸಿಬಿಡಿ.

ಶ್ರೀ ಬಸವರಾಜ ರಾಯರೆಡ್ಡಿ:– ಪ್ರಯತ್ನ ಮಾಡುತ್ತೇನೆ. ಅರುಕಾಲು ಗಂಟೆಗೆ ಆಗುವುದಿಲ್ಲ. ನಾವು ಎಂದೋ ಅಪರೂಪಕ್ಕೆ ಮಾತನಾಡುತ್ತೇವೆ. ನೀವು ನಮ್ಮ ಪರವಾಗಿ ನಿಲ್ಲಬೇಕು. ತಾವು ಅಧ್ಯಕ್ಷಸ್ಥಾನದಿಂದ ಹೇಳಬೇಕಾದುದು ತಮ್ಮ ಕರ್ತವ್ಯ. ಕೇಳಬೇಕಾದದ್ದೂ ನಮ್ಮ ಕರ್ತವ್ಯ. ಆದರೆ, ನಮ್ಮ ಮನವಿಯನ್ನೂ ಪರಿಶೀಲಿಸಬೇಕು. ಈಗಾಗಲೇ ನಾನು ಹೇಳಿದಂತೆ, ಇವತ್ತೇನು 1800 ಕೋಟಿ ರೂಪಾಯಿಗಳ ಸಬ್ಸಿಡಿ ಕೊಡುತ್ತಿದ್ದಾರೆ, ಇಡೀ ರಾಷ್ಟ್ರದಲ್ಲಿ ಇದು ಅತಿ ಹೆಚ್ಚು. ಬೇರೆ ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ, ಆಂಧ್ರಪ್ರದೇಶ ಎಷ್ಟು ಕೊಡುತ್ತದೆ, What is the subsidy of Andhra Pradesh? Rs.600 crores. Maharashtra - Rs.400 crores. Gujarat-Nil ಮಹಾರಾಷ್ಟ್ರ 300 ಕೋಟಿ, ರೂ. ಗುಜರಾತ್‌ಗೆ ಸಬ್ಸಿಡಿ ಕೊಡುವುದಿಲ್ಲ ಅಲ್ಲಿ, ತಮಿಳುನಾಡು ನಿಲ್, ಸಬ್ಸಿಡಿ ನಿಲ್, ಕಾರಣವೇನೆಂದರೆ ಅಲ್ಲಿ ಮೀಟರ್ ಹಾಕಿಸಿದ್ದಾರೆ. ಇಲ್ಲಿ ಏನಾಗಿದೆ ರೈತರಿಗೆ 49 ಪರ್ಸೆಂಟ್ ಕೊಟ್ಟುಬಿಟ್ಟಿದ್ದೇವೆ. ವಸೂಲಿ ಮಾಡಿ ತೆಗೆದುಕೊಂಡು ಬಂದು ತೋರಿಸಿ, ಸರ್ಕಾರಕ್ಕೆ, ಇದರಿಂದ ನಮ್ಮ ಬೇರೆ ಕಾರ್ಯಕ್ರಮಗಳಿಗೆ ಹೊಡೆತ ಬೀಳುತ್ತಿದೆ. ಅದಕ್ಕೇ ನಾನು ಅಡಿಟ್ ಏನರ್ಜಿ, ಏನು ಮೀಟರ್ ಹಾಕುತ್ತೇವೆಂದು ಸರ್ಕಾರ ಹೇಳಿದೆ, ನಾನು ಸಲಹೆ ಕೊಡುತ್ತಿಲ್ಲ ಇದನ್ನು ಸರ್ಕಾರ ಹೇಳಿದ್ದನ್ನು ನಾನು ಇದು ಒಳ್ಳೆಯದು ಎಂದು ಹೇಳುತ್ತಿದ್ದೇನೆ ಅದಕ್ಕಾಗಿ ಮಾತ್ರ. ಮತ್ತು ಅದರ ಜೊತೆಗೆ ವಿದ್ಯುತ್ ಉತ್ಪಾದನೆ ಬಹಳ ಮುಖ್ಯ ವಿದ್ಯುತ್ ಉತ್ಪಾದನೆಯಲ್ಲಿ ಜಲ ವಿದ್ಯುತ್, ಜಲ ವಿದ್ಯುತ್‌ಗೆ ಅತೀ ಕಡಿಮೆ ಹಣ ಹೋಗುತ್ತಿದೆ.

ಉಪಾಧ್ಯಕ್ಷರು:– ತಾವು ಎಷ್ಟು ಹೊತ್ತಿಗೆ ಮುಗಿಸುತ್ತೀರಿ?

ಶ್ರೀ ಬಸವರಾಜ ರಾಯರೆಡ್ಡಿ:– ಸಾರ್ ನಾನು 7 ಗಂಟೆಗೆ ಖಂಡಿತ ಮುಗಿಸುತ್ತೇನೆ.

ಉಪಾಧ್ಯಕ್ಷರು:– 7 ಗಂಟೆ ಬೇಡ. ಇನ್ನೊಂದು ಇಬ್ಬರು ಮಾತನಾಡಲಿಕ್ಕೆ, ಇದ್ದಾರೆ ತಾವು 6.30 ಗಂಟೆಗೆ ಕರೆಕ್ಟ್ ಆಗಿ ಮುಗಿಸಿ, ಅದರ ಮೇಲೆ ಒಂದು ನಿಮಿಷ ಕೂಡ ಇಲ್ಲ.

ಶ್ರೀ ಬಸವರಾಜ ರಾಯರೆಡ್ಡಿ:– 6.45ಕ್ಕೆ ಮುಗಿಸುತ್ತೇನೆ.

ಉಪಾಧ್ಯಕ್ಷರು:– 6.30 ಬೆಲ್ ಹೊಡೆಯುತ್ತೇನೆ, ಕರೆಕ್ಟ್ ಆಗಿ ಮುಗಿಸಿ.

ಶ್ರೀ ಬಸವರಾಜ ರಾಯರೆಡ್ಡಿ:– 6.45ಕ್ಕೆ ಮುಗಿಸುತ್ತೇನೆ ಮಾನ್ಯ ಅಧ್ಯಕ್ಷರೇ, ಇವತ್ತು ವಿದ್ಯುತ್ ಉತ್ಪಾದನೆ ಕಡೆ ಸ್ವಲ್ಪ ಮಾನ್ಯ ಉಪ ಮುಖ್ಯಮಂತ್ರಿಗಳು ಗಮನ ಕೊಟ್ಟರೆ

ಸರಿಯೋಗುತ್ತದೆ. ಏಕೆ ಅಂದರೆ, ನೀವು ಗಮನ ಕೊಟ್ಟಿಲ್ಲ ಎಂದು ನಾನು ಹೇಳುತ್ತಿಲ್ಲ. ಇವತ್ತು ಹೈಡ್ರೋ ಪ್ರಾಜೆಕ್ಟ್ಸ್ ಏನಿದೆ ನಮ್ಮ ರಾಜ್ಯದಲ್ಲಿ ಕೃಷ್ಣ ಇರಬಹುದು, ಕಾವೇರಿ ನದಿ ಇರಬಹುದು, ಮತ್ತು ವೆಸ್ಟ್ರಸ್ ಫ್ಲೋಯಿಂಗ್ ರಿವರ್ಸ್ ಇರಬಹುದು ಈ ಮೂರೂ ನದಿಗಳಲ್ಲಿ ನಾವಿನ್ನು 4000 ಮೆಗಾವ್ಯಾಟ್ಸ್ ವಿದ್ಯುತ್‌ನ್ನು ಉತ್ಪಾದನೆ ಮಾಡಲಿಕ್ಕೆ ಸಾಧ್ಯತೆ ಇದೆ. ನಮಗೆ ನಾಲ್ಕೂವರೆ ಸಾವಿರ ಮೆಗಾವ್ಯಾಟ್ಸ್ ವಿದ್ಯುತ್ ಆದರೆ ಸಾಕು ಆದರೆ ಈ ಮೂರೂ ನದಿಗಳಲ್ಲಿ ಏಕೆ ಮಾಡುವುದಕ್ಕೆ ಆಗುತ್ತಿಲ್ಲ? ನಮಗೆ, ಏಕೆಂದರೆ ಕೃಷ್ಣಾ ನದಿ ಮತ್ತು ಕಾವೇರಿಯಲ್ಲಿ ಡಿಸ್‌ಪ್ಯೂಟ್ ಇದೆ. ಇವತ್ತು ನಾನು 'ಉಪ ಮುಖ್ಯಮಂತ್ರಿಗಳನ್ನು ಇಷ್ಟೇ ಕೇಳುತ್ತೇನೆ, ದಯವಿಟ್ಟು ತಾವು ಕಾವೇರಿ ನದಿ ಜಲಾನಯನ ಪ್ರದೇಶದಿಂದ ಬಂದಂತಹವರು, ಕಾವೇರಿ ನದಿಯಲ್ಲಿ ಹುಟ್ಟಿದವರು ನೀವು, ಈ ಕಾವೇರಿ ನದಿಯಲ್ಲಿ ಶಿವನ ಸಮುದ್ರ. ಮಾನ್ಯ ವಾಟಾಳ್ ಸಾಹೇಬರೇ ತಮಗೂ ಗೊತ್ತಿದೆ. ಶಿವನ ಸಮುದ್ರದಲ್ಲಿ 210 ಮೆಗಾವ್ಯಾಟ್ಸ್ ವಿದ್ಯುತ್ ಉತ್ಪಾದನೆಯಾಗಬೇಕು ಅಂತ ಕಳೆದ 10 ವರ್ಷಗಳಿಂದ ಕೇಂದ್ರ ಸರ್ಕಾರದ ಮುಂದೆ ಪ್ರತಿ ಸರ್ಕಾರಗಳೂ ಅರ್ಜಿಸಲ್ಲಿಸುತ್ತಾ ಇವೆ. ಕ್ಲಿಯರ್ ಆಗುತ್ತಿಲ್ಲ ಇದಕ್ಕೆ ಕಾರಣ, ತಮಿಳುನಾಡಿನವರು ಹೇಳುತ್ತಾರೆ ನೀವು ಅಲ್ಲಿ ವಿದ್ಯುತ್ ಉತ್ಪಾದನೆಗೆ ಕೊಟ್ಟರೆ ನಮಗೆ ನೀರು ಕಡಿಮೆಯಾಗುತ್ತದೆ. ಒಂದು ಸಣ್ಣ ತಪ್ಪನ್ನು ಸಹ ನಮ್ಮ ಕೆಪಿಸಿ ಯವರು ಅಲ್ಲಿ ಮಾಡಿದರು ಈ ಡಿಟೇಲ್ಡ್ ಪ್ರಾಜೆಕ್ಟ್ ರಿಪೋರ್ಟ್ ಇರುತ್ತದೆಯಲ್ಲಾ, ಆ ಡಿಟೇಲ್ಡ್ ಪ್ರಾಜೆಕ್ಟ್ ರಿಪೋರ್ಟ್‌ನಲ್ಲಿ ರಿವರ್ಸ್‌ಬಲ್ ಹಾಕುತ್ತೇವೆಂದು ಹೇಳಿದರು, ಆ ರಿವರ್ಸ್‌ಬಲ್ ಟರ್ಬೈನ್‌ನಿಂದ ನೀರನ್ನು ವಾಪಸ್ಸು ತೆಗೆದುಕೊಂಡು ಹೋಗುತ್ತಾರೆ ಅಂತ ತಮಿಳುನಾಡಿನವರು ನಿಲ್ಲಿಸಿದ್ದರು, ಈಗ ಅದೆಲ್ಲಾ ಕ್ಲಾರಿಫೈ ಆಗಿದೆ. ಅದಾದ ಮೇಲೆ ಹೊಗೆನಕಲ್‌ನಲ್ಲಿ ಮೇಕೆಧಾಟುವಿನಲ್ಲಿ ನಾವು ಜಲ ವಿದ್ಯುತ್ತ್ ಉತ್ಪಾದನೆ ಮಾಡುತ್ತೇವೆ ನಮಗೆ ಪರವಾನಿಗೆ ಕೊಡಿ ಅಂತ ಹೇಳಿ, ಕೇಂದ್ರ ಸರ್ಕಾರದ ಮುಂದೆ ನಾವು ಅರ್ಜಿ ಹಾಕಿದ್ದೇವೆ ಸುಮಾರು 15 ವರ್ಷವಾಯಿತು. ಅವರು ತಮಿಳುನಾಡುನವರು ರಸಿಮನಲ್ ಮತ್ತು ಹೊಗೇನ್‌ಕಲ್‌ನಲ್ಲಿ ನಾವೂ ಕೂಡ ವಿದ್ಯುತ್ತ್ ಉತ್ಪಾದನೆ ಮಾಡುತ್ತೇವೆಂದು ಜಗಳ ತೆಗೆದು ಎರಡೂ ರಾಜ್ಯಕ್ಕೆ ವಿದ್ಯುತ್ ಇಲ್ಲ. ಇಬ್ಬರು ಅಣ್ಣತಮ್ಮಂದಿರ ಜಗಳದಲ್ಲಿ ಇಲ್ಲವೇ ಇಲ್ಲ. ಅದಕ್ಕೆ ನಾನು ಒಂದು ಸಲಹೆಯನ್ನು ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಕೊಡುತ್ತೇನೆ, ತಾವೂ ಉತ್ಪಾದನೆ ಮಾಡುವುದು ಬೇಡ, ಅವರೂ ಉತ್ಪಾದನೆ ಮಾಡುವುದು ಬೇಡ, ಎನ್‌ಹೆಚ್‌ಪಿಸಿ ಏನಿದೆ ನೋಡಿ ಈಗಾಗಲೇ ಒಪ್ಪಂದಕ್ಕೆ ಮುಂದೆ ಬಂದಿದ್ದೀರಿ, ಈಗಾಗಲೇ ಬಂದಿದ್ದಾರೆ, ಜೆ. ಹೆಚ್. ಪಟೇಲ್ ಸರ್ಕಾರವಿದ್ದಾಗ ಒಪ್ಪಂದಕ್ಕೆ ಬಂತು, ಈಗ ಎನ್‌ಹೆಚ್‌ಪಿಸಿ ಮುಖಾಂತರ ತಾವು ಮಾಡಿದರೆ ತಮಿಳುನಾಡಿಗೆ ಎಷ್ಟು ಹೋಗಬೇಕು, ಕರ್ನಾಟಕಕ್ಕೆ ಎಷ್ಟು ಹೋಗಬೇಕೆನ್ನುವುದನ್ನು ನಿಗದಿಪಡಿಸಿ ಸ್ವಲ್ಪ ರಾಜೀ ಪಂಚಾಯತಿ ಮಾಡಿಕೊಂಡು ಕೊನೆಪಕ್ಷ ನಮಗೆ 450 ರಿಂದ 500 ಮೆಗಾವ್ಯಾಟ್ಸ್ ನಷ್ಟು ವಿದ್ಯುತ್ ಬರುತ್ತದೆ. ವಾಟಾಳ್‌ರವರೇ, 500 ಮೆಗಾ ವ್ಯಾಟ್ಸ್‌ನಷ್ಟು ವಿದ್ಯುತ್ ಅದರೂ ಬರುತ್ತದೆ ರಾಜೀ ಪಂಚಾಯತಿ ಮಾಡಿದರೆ, ಇಲ್ಲದಿದ್ದರೆ ಈಗ 15 ವರ್ಷವಾಯಿತು ಒಂದು ಯುನಿಟ್ ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಆಗುತ್ತಿಲ್ಲ. ಅದಕ್ಕೆ ಈ

ರೀತಿ ಮಾಡಿದರೆ ಅನುಕೂಲವಾಗುತ್ತದೆ. ಮತ್ತೆ ಅದರ ಜೊತೆಗೆ ಜುರಾಲಾ ಪ್ರಾಜೆಕ್ಟ್, ಕೃಷ್ಣಾ ನದಿಯಲ್ಲಿ, ರಾಯಚೂರಿನ ಗಡಿ ಭಾಗದಲ್ಲಿದೆ. ನೀವು ನೋಡಬೇಕು ಅದನ್ನು ದೇವರಾಜ ಅರಸ್‌ರವರ ಕಾಲದಲ್ಲಿ 1978ರಲ್ಲಿ ಅದಂತಹ ಒಪ್ಪಂದ, ಜುರಾಲ ಪ್ರಾಜೆಕ್ಟ್, 220 ಮೆಗಾವಾಟ್ಸ್ ವಿದ್ಯುತ್ ಉತ್ಪಾದನೆಯಾಗಬೇಕು, ಆ ಜುರಾಲ ಪ್ರಾಜೆಕ್ಟ್‌ನಲ್ಲಿ ಏನು ಒಪ್ಪಂದ ಆಯಿತು, ಜುರಾಲ ಪ್ರಾಜೆಕ್ಟ್‌ನ್ನು ಕಟ್ಟುವಂತಹ ಸಂದರ್ಭದಲ್ಲಿ ಆ ಕಟ್ಟಡ ಆಂಧ್ರಪ್ರದೇಶದಲ್ಲಿದೆ. ನೀರು ಕರ್ನಾಟಕದ್ದು, ಮುಳುಗಡೆಯಾಗುವಂತಹ ಪ್ರದೇಶ ನಮ್ಮದು, ಮುಳುಗಿ ಹೋಗುತ್ತಿರುವುದರಿಂದ ಅವತ್ತಿನ ಸರ್ಕಾರ ಒಂದು ಒಪ್ಪಂದ ಮಾಡಿಕೊಂಡಿತ್ತು, ನಾವು ಭೂಮಿ ಕಳೆದುಕೊಳ್ಳುತ್ತಿದ್ದೇವೆಯಪ್ಪ ಅದಕ್ಕೆ ನೀವು ಏನು ವಿದ್ಯುತ್ ಉತ್ಪಾದನೆ ಮಾಡುತ್ತೀರೋ ಅದರಲ್ಲಿ 50:50 ಮಾಡಿಕೊಳ್ಳೋಣ ಅಂತ. ಅದಕ್ಕೆ ಅಗ್ರಿಮೆಂಟ್ ಆಯಿತು, ಆದರೆ ಇವತ್ತಿನವರೆಗೂ ನಮಗೆ 110 ಮೆಗಾವಾಟ್ ವಿದ್ಯುತ್‌ನ್ನು ಜುರಾಲ ಪ್ರಾಜೆಕ್ಟ್‌ನಿಂದ ತೆಗೆದುಕೊಳ್ಳುವಂತಹ ಪ್ರಾಮಾಣಿಕ ಪ್ರಯತ್ನವಾಗಬೇಕು, ಇವತ್ತು ಇದಕ್ಕೆ ಸಾಧ್ಯತೆ ಇದೆ, ಏಕೆ ಅಂದರೆ ಅಲ್ಲಿ ಕೂಡ ಶ್ರೀ ರಾಜಶೇಖರರೆಡ್ಡಿಯವರು ಕಾಂಗ್ರೆಸ್ಸಿನ ಪಕ್ಷದವರೇ, ಮುಖ್ಯಮಂತ್ರಿ ಇದ್ದಾರೆ, ಧರ್ಮಸಿಂಗ್‌ರವರು ಹೆಚ್ಚು ಕಡಿಮೆ ಅರ್ಧ ಹೆಚ್ಚು ಕಡಿಮೆ ಹೈದರಾಬಾದ್‌ನಲ್ಲಿಯೇ ಇರುತ್ತದೆ. ಅವರು ಹಾಗೂ ಅವರ ಗೆಳೆಯರು ಅಲ್ಲೇ ಇದ್ದಾರೆ ನಮ್ಮ ಉಪ ಮುಖ್ಯಮಂತ್ರಿಗಳು ತಾವು ಆಂಧ್ರಪ್ರದೇಶದ ಮನವನ್ನು ಓಲಿಸಿ ಏನು ಆ 50:50 ಅಗ್ರಿಮೆಂಟ್ ಇದೆ, ಅದನ್ನು ಮಾಡಿದರೆ 110 ಮೆಗಾವಾಟ್ಸ್ ವಿದ್ಯುತ್ ಬರಲಿಕ್ಕೆ ಸಾಧ್ಯತೆ ಇದೆ. ಅವಕಾಶ ಇದೆ, ಇಂತಹ ಒಂದು ಒಳ್ಳೆಯ ಅವಕಾಶವನ್ನು ತಾವು ಬಳಸಿಕೊಳ್ಳಿ, ಇನ್ನು ವೆಸ್ಟನ್ ಫ್ಲೋಯಿಂಗ್ ರಿವರ್‌ನಲ್ಲಿ ಏನು ಅಗಿನಾಶಿನಿ ಕೆಲವು ನದಿಗಳಲ್ಲಿ ವಿದ್ಯುತ್ ಉತ್ಪಾಧನೆ ಇದೆ, ಅಲ್ಲಿ ಕಾಟ, ಯಾರದ್ದು ಪರಿಸರವಾದಿಗಳದ್ದು, ಅದಕ್ಕೆ ತಾವು ಕೇಂದ್ರ ಸರ್ಕಾರದ ಜೊತೆ ಕುಳಿತು ಚರ್ಚೆಮಾಡಿ ಈ ವೆಸ್ಟನ್ ಫ್ಲೋಯಿಂಗ್ ರಿವರ್ಸ್‌ನಲ್ಲಿರುವಂತಹ ಎಲ್ಲಾ ನದಿಗಳಲ್ಲಿ ಜಲವಿದ್ಯುತ್ ಉತ್ಪಾದನೆ ಮಾಡಬೇಕು, ಜಲ ವಿದ್ಯುತ್ ಅತೀ ಕಡಿಮೆ ದರದಲ್ಲಿ ಉತ್ಪಾದನೆಯಾಗುತ್ತದೆ. ಏಕೆಂದರೆ ರಿಕರಿಂಗ್ ಎಕ್ಸ್‌ಪೆಂಡೀಚರ್ ಇಲ್ಲ. ಬರೇ ನೀವು ಟರ್ಬೈನ್ ಹಾಕಿಬಿಟ್ಟರೆ ಸಾಕು, ವಿದ್ಯುತ್ ಉತ್ಪಾದನೆಯಾಗುತ್ತದೆ. ಬೇರೆ ತರಹ ಕಲ್ಲಿದ್ದಲು, ನಾಫ್ತಾ ಅಥವಾ ಗ್ಯಾಸ್ ಇದೆಲ್ಲಾ ಬೇಕಾಗಿಲ್ಲ. ಉಚಿತವಾಗಿ ಸಿಗುತ್ತದೆ ಇದು, ಹೀಗಾಗಿ ಅದರ ಬಗ್ಗೆ ಒಂದು ಪ್ರಯತ್ನವನ್ನು ಮಾಡಬೇಕಾಗುತ್ತದೆ, ವಿದ್ಯುತ್ ವಲಯದಲ್ಲಿ, ಅದಕ್ಕೆ ಮುಂಬರುವಂತಹ ವರ್ಷಗಳಲ್ಲಿ ಇದರ ಬಗ್ಗೆ ಹೆಚ್ಚು ಒತ್ತನ್ನು ಈ ಸರ್ಕಾರ ಕೊಡುತ್ತದೆ ಎನ್ನುವಂತಹ ಭರವಸೆ ನನಗೆ ಇದೆ. ಮತ್ತೆ ಇದು ಆದ ಮೇಲೆ ಮಾನ್ಯ ಅಧ್ಯಕ್ಷರೇ, ನಾವು ಶಿಕ್ಷಣಕ್ಕೆ ಹೆಚ್ಚು ಮಹತ್ವವನ್ನು ಕೊಡಬೇಕು. ಏಕೆಂದರೆ ನಮ್ಮ ದೇಶದಲ್ಲಿ ಇನ್ನೂ ಕೂಡ ಶೇಕಡ 60 ರಷ್ಟು ಜನ ಅನಕ್ಷರಸ್ಥರು, ಅಕ್ಷರ, ಓದು ಬರಹ ಬರುವುದಿಲ್ಲ. ನಮ್ಮಲ್ಲಿ ಅಕ್ಷರಸ್ಥರು ಯಾರು ಅಂತ ಪರಿಗಣಿಸುತ್ತೇವೆ. ಕೇಂದ್ರಿಯ ಸರಾಸರಿ ಅಕ್ಷರತೆಯ ಪ್ರಮಾಣ ಎಷ್ಟು ಅಂದರೆ 62 ಪರ್ಸೆಂಟ್ ಅಂತ ಹೇಳುತ್ತಾರೆ. ಯಾರು ಅವರು ಅಂದರೆ ಕಲಪ್ಪ ಎಂದು ಹೆಸರು ಬರೆದು ಅವನು ಸಹಿ ಮಾಡಿದರೆ ಅವನು ಲಿಟರೇಟ್, ನೋ ಅವನು ಲಿಟರೇಟ್ ಇಲ್ಲ.

ಈ ಲಿಟರೇಟ್ ಮಿಷನ್‌ಗಳು ಇವೆಯಲ್ಲಾ ರಾತ್ರಿ ಹಗಲು ಹೊತ್ತು ಕಲಿಸಿ ಮಾಡುತ್ತಾರಲ್ಲಾ, ಅಲ್ಲಿ ಲಿಟರೇಸಿ ಪ್ರೋಗ್ರಾಂ ಸಕ್ಸಸ್ ಆಗಿಲ್ಲ. ಆಗುವುದೂ ಇಲ್ಲ. ಎರಡು ಹೆಸರು ಬರೆದ ಕೂಡಲೇ ಅವನ ಓದು ಬರಹ ಕಂಪ್ಲೀಟ್ ಅದಂತ್ ಅಲ್ಲ. ಅದಕ್ಕೆ ನಾವು ಶಿಕ್ಷಣಕ್ಕೆ ಹೆಚ್ಚು ಮಹತ್ವವನ್ನು ಕೊಡಲೇಬೇಕಾಗುತ್ತದೆ. ಆ ದಿಸೆಯಲ್ಲಿ ಇವತ್ತು ನಮ್ಮ ಸರ್ಕಾರ ಈಗಾಗಲೇ ಮಾನ್ಯ ಉಪ ಮುಖ್ಯಮಂತ್ರಿಗಳು ಈ ಸಾರಿ ಹೆಚ್ಚು ಮಹತ್ವವನ್ನು ತಾವು ಕೊಟ್ಟಿದ್ದೀರಿ, ಕಳೆದ ವರ್ಷ ಶಿಕ್ಷಕ್ಕೆ 848 ಕೋಟಿ ರೂಯನ್ನು ಕೊಟ್ಟಿದ್ದರೆ ಈ ವರ್ಷ 1012 ಕೋಟಿ ರೂಪಾಯಿಗಳನ್ನು ತಾವು ಶಿಕ್ಷಣಕ್ಕೆ ನಿಗದಿಪಡಿಸಿದ್ದೀರಿ. ಅಂದರೆ ಸುಮಾರು ಹೆಚ್ಚುಕಡಿಮೆ 200 ಕೋಟಿ ರೂಪಾಯಿಗಳ ಹೆಚ್ಚು ಹಣವನ್ನು ಶಿಕ್ಷಣಕ್ಕೆ ನಿಗದಿಪಡಿಸಿರುವುದು ಒಂದು ಒಳ್ಳೆಯ ವಿಚಾರ. ಮತ್ತು ಅದರ ಜೊತೆಗೆ ಇನ್ನೂ ಒಂದು ಮಾತನ್ನು ಹೇಳಿದ್ದೀರಿ, ಶಿಕ್ಷಣ ವಲಯದಲ್ಲಿ ಶಿಕ್ಷಕರ ನೇಮಕಾತಿಗೆ ತಾವು ನಿರ್ಬಂಧವನ್ನು ಮಾಡುವುದಿಲ್ಲ, ಈ ಮಾತು ಬಹಳ ಸ್ವಾಗತಾರ್ಹ. ಯಾವ ಶಿಕ್ಷಣ ಇದೆ, ಅದು ಕನ್ನಡ ಶಾಲೆ ಶಿಕ್ಷಣ ಇರಬಹುದು, ಹೈಸ್ಕೂಲ್ ಟೀಚರ್ ಇರಬಹುದು, ಪದವಿ ಕಾಲೇಜುಗಳ ಟೀಚರ್‌ಗಳ ನೇಮಕಾತಿಗಾಗಿ ನಿರ್ಬಂಧವನ್ನು ಹಾಕುವುದಿಲ್ಲ ಎಂದು ಸ್ಪಷ್ಟವಾಗಿ ತಾವು ಮೊನ್ನೆ ಉತ್ತರ ಹೇಳಿದ್ದೀರಿ ಅದಕ್ಕಾಗಿ ನನಗೆ ಬಹಳ ಸಂತೋಷವಾಗಿದೆ. ತಾವು ಹೆಚ್ಚು ಹೆಚ್ಚು ಶಿಕ್ಷಕರ ನೇಮಕಾತಿಯನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳುತ್ತೇನೆ. ಮತ್ತು ಅದರ ಜೊತೆಗೆ ಈ ಸಾರಿ 114 ಹೊಸ ಪ್ರೌಢಶಾಲೆಗಳನ್ನು 2005–06ನೇ ಸಾಲಿನಲ್ಲಿ ತಾವು ಸರ್ಕಾರಿ ಪ್ರೌಢಶಾಲೆಗಳನ್ನು ತೆರೆಯುತ್ತೇವೆಂದು ಹೇಳಿರುವುದು ಸ್ವಾಗತಾರ್ಹ. ಕಳೆದ ಎರಡು ವರ್ಷದಲ್ಲಿ ಹೈಸ್ಕೂಲ್‌ಗಳು ಆಗಿರಲಿಲ್ಲ. ಈಗ 114 ಹೈಸ್ಕೂಲ್‌ಗಳನ್ನು ತೆರೆಯುತ್ತಿರುವುದು ಸ್ವಾಗತಾರ್ಹ. ನಾನು ಒಂದು ಸಲಹೆಯನ್ನು ಕೊಡಲಿಕ್ಕೆ ಇಚ್ಛೆಪಡುತ್ತೇನೆ. ನಮ್ಮ ಜನಸಂಖ್ಯೆ ಪ್ರಮಾಣ ಬೆಳೆಯುತ್ತಾ ಹೋಗುತ್ತಿದೆ. ಶಾಲೆಗೆ ಹೋಗುವ ಮಕ್ಕಳ ಸಂಖ್ಯೆ ಬೆಳೆಯುತ್ತಿದೆ. ಈ 114 ಶಾಲೆಗಳನ್ನು ತಾವು ಏನೂ ಕೊಟ್ಟಿದ್ದೀರಿ ಇದು ಬಹಳ ಅತಿ ಕಡಿಮೆ. ಸಿದ್ದರಾಮಯ್ಯನವರೇ, ಹಿಂದೆ ತಾವು ಮಂತ್ರಿಗಳಿದ್ದಿರಿ. ರಾಚಯ್ಯನವರು ಶಿಕ್ಷಣ ಮಂತ್ರಿಗಳು, 1985ರಲ್ಲಿ 500 ಪ್ರೌಢಶಾಲೆಗಳನ್ನು ಒಂದೇ ವರ್ಷದಲ್ಲಿ ಕೊಟ್ಟರು. you were also the part of the govt at that time. ನಿಮಗೆ ನೆನಪು ಇರಬಹುದು. ಒಂದೇ ವರ್ಷ 500 ಸರ್ಕಾರೀ ಪ್ರೌಢ ಶಾಲೆಗಳು. ಅಂದರೆ ಸುಮಾರು 20 ವರ್ಷಗಳ ಹಿಂದೆಯೇ ಒಂದು ವರ್ಷಕ್ಕೆ 500 ಪ್ರೌಢಶಾಲೆಗಳನ್ನು ಕೊಟ್ಟಿದ್ದಾರೆಂದರೆ ಅಂದಿನ ನಮ್ಮ ಜನಸಂಖ್ಯೆ 4 ಕೋಟಿ ಇವತ್ತಿನ ಜನಸಂಖ್ಯೆ ಐದೂವರೆ ಕೋಟಿ. ಈ ಅನುಪಾತದಲ್ಲಿ 114 ಪ್ರೌಢ ಶಾಲೆಗಳು ಸಾಕಾಗುವುದಿಲ್ಲ. ಕನಿಷ್ಟ 800 ಪ್ರೌಢ ಶಾಲೆಗಳನ್ನಾದರೂ ಮಾಡಬೇಕು. ಕಷ್ಟ ಇದೆ ನಾನು ಒಪ್ಪುತ್ತೇನೆ.

ಸಿದ್ದರಾಮಯ್ಯ :- ಅವತ್ತು ಹೈಸ್ಕೂಲ್‌ಗಳ ಸಂಖ್ಯೆ ಕಡಿಮೆ ಇತ್ತು. ಹಳ್ಳಿಗಳಲ್ಲಿ ಈ ಕಡೆ, ಉತ್ತರ ಕರ್ನಾಟಕದ ಕಡೆ ಹೈಸೂಲ್‌ಗಳೇ ಇರಲಿಲ್ಲ. ಹಾಗಾಗಿ ಹೆಚ್ಚು ಹೈಸ್ಕೂಲ್‌ಳನ್ನು ಒಂದೇ ಸಾರಿ ಮಾಡಬೇಕಾಗಿತ್ತು. ಈಗ ಅಗತ್ಯಕ್ಕೆ ತಕ್ಕಂತೆ ಮಾಡಬೇಕಾಗುತ್ತದೆ.

ಶ್ರೀ. ಬಸವರಾಯರೆಡ್ಡಿ : ಅಗತ್ಯವಿಲ್ಲದ ಕಡೆ ಹೈಸ್ಕೂಲ್ ತೆಗೆದರೆ ಹೈಸ್ಕೂಲ್ ಕಿಲಿ ಹಾಕುವುದಕ್ಕಾಗುವುದಿಲ್ಲ. ನಾನು ಎತಕ್ಕೆ ಈ ಮಾತನ್ನು ಹೇಳಿದೆ ಎಂದರೆ, ಕಳೆದ ಎರಡು ವರ್ಷಗಳಿಂದ ಹೈಸ್ಕೂಲ್ ಕೊಡಲಿಲ್ಲ, ಹೀಗಾಗಿ ಒತ್ತಡ ಜಾಸ್ತಿ ಇದೆ. ಈ ವರ್ಷ ಇನ್ನೂ ಸ್ವಲ್ಪ ಜಾಸ್ತಿ ಮಾಡಿ. ನಾನು 800 ಮಾಡಿ ಎಂದು ಹೇಳಲಿಲ್ಲ ಆವತ್ತಿನ ಉದಾಹರಣೆ ಕೊಟ್ಟೆ. ಕೊನೆಯಪಕ್ಷ 200, ಅಥವಾ 250 ಮಾಡಿ ಇದರಿಂದ ಅನೂಕೂಲವಾಗುತ್ತದೆಂದು ನನ್ನ ಸಲಹೆಯನ್ನು ಕೊಟ್ಟಿದ್ದೇನೆ. ಆರ್ಥಿಕ ಪರಿಸ್ಥಿ ಉತ್ತಮವಾಗುತ್ತಿರುವುದರಿಂದ ಬಹುಶ : ಜುಲೈ ತಿಂಗಳಲ್ಲಿ ನೀವು ಮಾಡಬಹುದೆಂದು ನಾನು ಆಸೆ ಇಟ್ಟುಕೊಂಡಿದ್ದೇನೆ, ನೋಡೋಣ. ಆದಾಗ್ಯಾ ಈ ವಿಚಾರವನ್ನು ಸ್ವಾಗತ ಮಡುತ್ತೇನೆ. ಹಿಂದಿನ ಎಸ್.ಎಂ. ಕೃಷ್ಣ ಸರ್ಕಾರ ಅಕ್ಷರದಾಸೋಹ ಎನ್ನುವ ಒಳ್ಳೆಯ ಕಾರ್ಯಕ್ರಮವನ್ನು ತಂದಿದೆ. ಇದು ಒಳ್ಳೆಯ ಕಾರ್ಯಕ್ರಮ, ಸಿದ್ದರಾಮಯ್ಯನವರೆ, ತಾವು ಹಿಂದೆ ಉಪಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ, ಬೇರೆ ಹೆಸರಿನಲ್ಲಿ ಜೆ.ಹೆಚ್. ಪಟೇಲ್ ಸರ್ಕಾರ ಕಾರ್ಯಕ್ರಮಮಾಡುತ್ತಿತ್ತು.: ಮಕ್ಕಳಿಗೆ ಅಕ್ಕಿಯನ್ನು ಕೊಡುತ್ತಿದ್ದೀರಿ, ಪ್ರಾರಂಭ ಮಾಡಿದವರು ನೀವೇ. ಒಂದೊಂದು ಸಾರಿ ಯೋಚನೆ ಮಾಡಿದರೆ, ಅದೇ ಒಳ್ಳೆಯದಿತ್ತು ಎನಿಸುತ್ತದೆ. ಏಕೆಂದರೆ ಬಹಳ ಹಳ್ಳಿಗಳ ಕಡೆ ನಾನು ಹೋಗುತ್ತಿರುವಾಗ, ಎನು ಮಾಡುವುದು ಬಡಿ ಹುಡುಗರಿಗೆ ಅಡಿಗೆ ಮಾಡುದಾಗಿದೆ ಎನ್ನುವ ಭಾವನೆ ಬಂದಿದೆ, ಆಲ್ಲಿ ಎಸ್‌ಡಿಎಂಸಿ ಎಂದು ಮಾಡಿದ್ದಾರೆ, ಹಳ್ಳಿಗಳಲ್ಲಿ ಬರೀ ಜಗಳ, ನಾನು ಎಸ್‌ಡಿಎಂಸಿ ಆಗಬೇಕು, ಅಡಿಗೆಯನ್ನು ನೇಮಕ ಮಾಡಿ, ಅಡಿಗೆ ಕೂಣೆ ಕಟ್ಟಿರಿ, ಹೀಗೆ ರಿಕರಿಂಗ್ ವೆಚ್ಚ ಜಾಸ್ತಿಯಾಗುತ್ತಿದೆ. ಈ ಕಡೆ ಗಮನಹರಿಸಿ, ಒಂದು ಕಡೆ ಸುಪ್ರೀಂಕೋರ್ಟ್ ಬೇರೆ ಅಕ್ಷರದಾಸೋಹ ಕಾರ್ಯಕ್ರಮವನ್ನು ಶಾಲ ಮಟ್ಟದಲ್ಲಿ ಜಾರಿಗೆತರಬೇಕೆಂದು ಹೇಳಿದೆ. ಪರ್ಯಯವಾಗಿ ಶಿಕ್ಷಣಕ್ಕೆ ತೊಂದರೆಯಾಗದಂತೆ ಮತ್ತು ಶಾಲ ಶಿಕ್ಷಕರು ಅಡಿಗೆ ಕೆಲಸಕ್ಕೆ ಹೋಗದಂತೆ, ಏನಾದರೂ ಪರ್ಯಾಯ ವ್ಯವಸ್ಥೆಯನ್ನು ತಂದರೆ ಒಳ್ಳೆಯದು ಏಕೆಂದರೆ ಇದೊಂದು ಒಳ್ಳೆಯ ಕಾರ್ಯಕ್ರಮ. ಅದಕ್ಕೆ ಆ ಒಂದು ಪರ್ಯಾಯ ವ್ಯವಸ್ಥೆಯ ಬಗ್ಗೆ ನಮ್ಮ ಸರ್ಕಾರ ಚಿಂತನೆ ಮಾಡುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಚೆಪಡುತ್ತೇನೆ. ನಾನು ಒಂದು ಮಾತನ್ನು ತೀರಾ ರಾಜ್ಯಕ್ಕೆ ಸಂಬಂಧಪಡದೆ ಇದ್ದರೂ ಕೂಡ ಹೇಳುವುದಕ್ಕೆ ಇಷ್ಟಪಡುತ್ತೇನೆ, ದಿ: ಹೆಚ್ ನರಸಿಂಹಯ್ಯನವರ ಸ್ಮರಣಾರ್ಥವಾಗಿ, ಬಹಳ ಶಿಕ್ಷಣತಜ್ಞ, ಬಹಳ ಪ್ರಮಾಣಿಕ ವ್ಯಕ್ತಿ, ಗಾಂಧಿವಾದಿಗಳು, ಇವತ್ತು 21ನೇ ಶತಮಾನದಲ್ಲಿ ಅಂತಹ ಪ್ರಮಾಣಿಕ ವ್ಯಕ್ತಿಗಳು ಸಿಗುವುದು ಕಡಿಮೆ. ಅವರ ಸ್ಮರಣಾರ್ಥ ಗೌರಿಬಿದನೂರಿನಲ್ಲಿ ಒಂದು ಕಮ್ಯುನಿಟಿ ಹಾಲ್ ಕಟ್ಟಿಸಲಾಗುತ್ತದೆಂದು

ಹೇಳಲಾಗಿದೆ. ಅದರ ಅವಶ್ಯಕತೆ ಇಲ್ಲ. ದಯಮಾಡಿ ಆದನ್ನು ಬೆಂಗಳೂರಿನಲ್ಲಿ ಮಾಡಿ, ಅವರ ವಿಚಾರದಲ್ಲೊಂದು ಶಿಕ್ಷಣ ಅಧ್ಯಯನ ಕೇಂದ್ರವನ್ನು ತೆರೆಯಿರಿ. ನಾಳೆ ಬಿಲ್ಡಿಂಗ್ ಕಟ್ಟುತ್ತೀರಿ ಅದರ ನಿರ್ವಹಣೆಯಾಗುವುದಿಲ್ಲ. ಐದು ವರ್ಷದಲ್ಲಿ ಆ ಕಟ್ಟಡ ಹಾಳಗುತ್ತದೆ, ಒಬ್ಬ ವ್ಯಕ್ತಿಯ ಹೆಸರನ್ನು ಬಿಲ್ಡಿಂಗ್‌ನಿಂದ ಸ್ಮರಣೆ ಮಾಡಲು ಸಾಧ್ಯವಿಲ್ಲ. ಅವರ ಹೆಸರಿನಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಾಗಲಿ ಅಥವಾ ಬೇರೆ ವಿಶ್ವವಿದ್ಯಾಲಯದಲ್ಲಿ ಒಂದು ಅದ್ಯಯನ ಪೀಠವನ್ನು ಅದೇ ಹಣದಲ್ಲಿ ಮಾಡಿದರಂ ಉತ್ತಮ ಎನ್ನುವ ಮಾತನ್ನು ಹೇಳುತ್ತೇನೆ. ಇವತ್ತು ಶಿಕ್ಷಣ ಬಿಟ್ಟರೆ ಇನ್ನೊಂದು ವಲಯ ಗ್ರಮೀಣಾಭಿವೃದ್ಧಿ, ಇದು ಬಹಳ ಅತ್ಯಂತ ಮುಖ್ಯವಾದುದು, ಎಕೆಂದರೆ ನಮ್ಮ ದೇಶದಲ್ಲಿ ಮತ್ತು ನಮ್ಮ ರಾಜ್ಯದಲ್ಲಿ 100ಕ್ಕೆ 71 ರಷ್ಟು ಜನ ನಮ್ಮ ರಾಜ್ಯದಲ್ಲಿ ಗ್ರಾಮಾಂತರಪ್ರದೇಶದಲ್ಲಿ ಬದುಕುತ್ತಿದ್ದಾರೆ. ಇವತ್ತು ಗ್ರಾಮಾಂತರ ಪ್ರದೇಶಕ್ಕೆ ಹೆಚ್ಚು ಹಣವನ್ನು ತಾವು ಕೊಡಬೇಕಾಗುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ ರಸ್ತೆ, ಕುಡಿಯುವ ನೀರು ಇನ್ನಿತರ ಮೂಲಭೂತ ಸೌಕರ್ಯಗಳಿಗೆ ಈಗಾಗಲೇ ರಾಜ್ಯ ಹಾಗೂ ಕೇಂದ್ರ ಸರ್ಕಾರ ವಿವಿಧ ಇಲಾಖೆಗಳಿಂದ ಹಣವನ್ನು ಕೊಡುತ್ತಿವೆ. ಆದರೆ ಕುಡಿಯುವ ನೀರಿನ ವಿಚಾರದಲ್ಲಿ, ಸ್ವಲ್ಪ ಹೆಚ್ಚಿನ ಹಣವನ್ನು ಕೊಡಬೇಕಾಗುತ್ತದೆ, ಎಕೆಂದರೆ, ಈಗಾಗಲೇ ಈ ಬಗ್ಗೆ ಸುಧೀರ್ಘವಾದ ಚರ್ಚೆ ಕೂಡ ಆಯಿತು ಮತ್ತು ಆ ಬಗ್ಗೆ ಹೆಚ್ಚು ಹಣ ಕೂಡುತ್ತೇವೆಂದು ತಾವು ಉತ್ತರವನ್ನು ಕೊಟ್ಟಿದ್ದೀರಿ. ಆದರೆ ಬಜೆಟಿನಲ್ಲಿ ಕೇವಲ 132 ಕೋಟಿ ರೂಪಾಯಿಗಳನ್ನು ಮಾತ್ರ ಕುಡಿಯುವ ನೀರಿಗೆ ನಿಗದಿಪಡಿಸಿದ್ದೀರಿ, ಸ್ವಲ್ಪ ಇದು ಕಡಿಮೆ ಆಗಬಹುದು, ಅದನ್ನು ತಾವು ಹೆಚ್ಚು ಹಣವನ್ನು ಕೊಟ್ಟರೆ ಒಳ್ಳೆಯದಾಗುತ್ತದೆ. ಈಗಾಗಲೇ ತಾವು ಭರವಸೆಯನ್ನು ಕೊಟ್ಟಿದ್ದಕ್ಕೆ ನಾನು ತಮಗೆ ಅಭಿನಂದನೆಯನ್ನು ಕೂಡ ಈ ಸಂದರ್ಭದಲ್ಲಿ ಸಲ್ಲಿಸುತ್ತೇನೆ. ಅದರ ಜೊತೆಗೆ ಪ್ರತಿದಿವಸ 'ಎನು ಜಲಮಟ್ಟ ಕಡಿಮೆಯಾಗುತ್ತಿದೆ, ಅದಕ್ಕಾಗಿ ಜಲಾಯನಪ್ರದೇಶಗಳನ್ನು, ಬಂದಾರಗಳನ್ನು, ನಮ್ಮ ಊರಿನಲ್ಲೇನು ನೀರು ಹರಿದು ಹೋಗುತ್ತದೆ, ಅದು ನಮ್ಮ ಊರಿನಲ್ಲೇ ನಿಂತುಕೊಳ್ಳಬೇಕು. ಆ ಬಗ್ಗೆ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಪ್ರತಿಯೊಂದು ಊರಿಗೆ ವಾಟರ್ ಚೆಕ್ ಡ್ಯಾರ್ಮ್ಸ್ ಮಾಡಲೇಬೇಕಾದ ಸಂದರ್ಭ ಇವತ್ತು ಬಂದಿದೆ. ಈ ಮಾತನ್ನು ಎತಕ್ಕೆ ಹೇಳುತ್ತಿದ್ದೇನೆಂದರೆ, ನೀರಿಗಾಗಿ ಭಾರತದಲ್ಲಿ ಯುದವನ್ನು ವೇಳೆ ಬರಬಹುದು. ಇವತ್ತು ಜನಸಂಖ್ಯೆಯನ್ನು ನುಯಂತ್ರಂಣ ಮಾಡುವುದಕ್ಕೆ ಭಾರತದಲ್ಲಿ ಕಾನೂನು ಇಲ್ಲ. 1980 ರಲ್ಲೆ ಚೈನಾ ದೇಶದಲ್ಲಿ ಒಂದು ಕುಟುಂಬಕ್ಕೆ ಒಂದು ಮಗು ಎನ್ನುವ ಕಾನೂನನ್ನು ತಂದಿದ್ದಾರೆ. ನಮ್ಮಲ್ಲಿ ಇಲ್ಲ. ಕುಟುಂಬ ಯೋಜನೆಯನ್ನು ಮಾಡಿ ಎರಡು ಮಕ್ಕಳು ಮಾಡಿ ಎಂದು ಮನವಿ ಮಾಡುತ್ತೇವೆ. ಇವತ್ತು ಒಂದು ಕುಟುಂಬಕ್ಕೆ ಒಂದೇ ಮಗು ಎಂದು ಕಾನೂನು ತರುವ ಅವಶ್ಯಕತೆ ಇದೆ. ಆ ಕಾನೂನು ಮಾಡುವುದಕ್ಕೆ ನಮ್ಮ ಸದನಕ್ಕೆ ಸಧಿಕಾರವಿಲ್ಲ, ಆ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ

ಹೋಗುವುದಿಲ್ಲ. ಆದರೆ ಬೆಳೆಯುತ್ತಿರುವ ಈ ಜನಸಂಖ್ಯೆ ವುಚಾರದಲ್ಲಿ ಕುಡಿಯುವ ನೀರಿಗೆ ಬಹಳಷ್ಟು ತೊಂದರೆಯಾಗುತ್ತಿದೆ, ನೀರಿಗಾಗಿ ಯುದ್ಧವಾಗುವ ದಿನಗಳು ಬಹಳ ದೂರವಿಲ್ಲ. ಅದಕ್ಕಾಗಿ ನಾವು ಜಲಸಂಗ್ರಹಣೆಯ ಬಗ್ಗೆ ವಿಚಾರ ಮಾಡಬೇಕಾಗಿದೆ, ನಮ್ಮ ನೀರನ್ನು ನಾವು ಬಳಕೆ ಮಾಡುವುದಕ್ಕೆ ರೈನ್ ಹಾರ್ವೆಸ್ಟಿಂಗ್ ತರಬೇಕು, ಅದಕ್ಕೆ ಹೆಚ್ಚಿನ ಮಹತ್ವವನ್ನು ಮುಂಬರುವ ದಿವಸಗಳಲ್ಲಿ ನಮ್ಮ ಸರ್ಕಾರ ಕೊಡುತ್ತದೆಂದು ನಾನು ಆಶಿಸುತ್ತೇನೆ. ಇನ್ನು ಸ್ವಚ್ಛಗ್ರಾಮ ಒಂದು ಒಳ್ಳೆಯ ಕಾರ್ಯಕ್ರಮ, ಹಿಂದಿನ ಸರ್ಕಾರ ಇದೂಂದು ಒಳ್ಳೆಯ ಕೆಲಸವನ್ನು ಮಾಡಿದೆ. ಈ ಸಾರಿ ಸ್ವಚ್ಛಗ್ರಾಮಕ್ಕೂ ಕೂಡ ಈ ಸಾರಿ ಹೆಚ್ಚು ಮಹತ್ವವನ್ನು ಕೊಟ್ಟಿದ್ದೀರಿ, ಅದಕ್ಕೆ ಪಂಚಸೂತ್ರಗಳನ್ನು ತರುತ್ತೇವೆನ್ನುವ ಮಾತನ್ನು ಹೇಳಿದ್ದೀರಿ, ದಯಮಾಡಿ ಮುಂಬರುವ 3–4 ವರ್ಷಗಳಲ್ಲಿ ಎಲ್ಲಾ ಗ್ರಾಮಗಳಿಗೆ ಈ ಸ್ವಚ್ಛಗ್ರಾಮವನ್ನು ಜಾರಿಗೆ ತಂದು ಆ ಪಂಚಸೂತ್ರಗಳ ಮೂಲಕ ಮಾಡಿಸಿ ಎಂದು ಹೆಳುತ್ತೇನೆ. ಇನ್ನು ಮುಖ್ಯಮಂತ್ರಿಗಳ ರಸ್ತೆನಿಧಿಗೆ 75 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ,. ಇದು ಸಾಕಾಗುವುದಿಲ್ಲ, ಇದನ್ನು 300 ಕೋಟಿ ರೂಪಾಯಿಗಳಿಗೆ ಹೆಚ್ಚಿಸಬೇಕಾಗಿದೆ, ಬಹಳಷ್ಟು ಹಳ್ಳಿಗಳ ರಸ್ತೆಗಳು ಕೆಟ್ಟುಹೋಗಿವೆ, ಇದನ್ನು ಕೊಡುವುದಕ್ಕೆ ಸಾಧ್ಯವಿದೆ, ಮುಂದಿನ ಜೂನ್, ಜುಲೈ ತಿಂಗಳಲ್ಲಿ ತಾವು ಕೊಡುತ್ತೀರೆನ್ನುವ ಗ್ಯಾರಂಟಿಯೂ ಇದೆ, ಎಕೆಂದರೆ you are a Pro-rurel man ಅದಕ್ಕೆ ನಾನು ಈಗಲೇ ತಮ್ಮ ಗಮನಕ್ಕೆ ತಂದೆ, ತಾವು 300 ಕೋಟಿ ರೂಪಾಯಿಗಳನ್ನು ಕೊಟ್ಟರೆ, ಎಲ್ಲಾ ಹಳ್ಳಿಗಳಲ್ಲಿ ಪಕ್ಕಾ ರಸ್ತೆಗಳನ್ನು ಮಾಡುವುದಕ್ಕೆ ಸಾಧ್ಯವಿದೆ. ಇನ್ನು ಈ ಪ್ರದೇಶಾಭಿವೃದ್ಧಿ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ನಾನು ಈ ಸರ್ಕಾರವನ್ನು ಅಭಿನಂದಿಸುತ್ತೇನೆ. ಕಳೆದ ಕೆಲವು ವರ್ಷಗಳಿಂದ ಪ್ರದೇಶಾಭಿವೃದ್ಧಿ ಕಾರ್ಯಕ್ರಮಕ್ಕೆ ಕೊಡುತ್ತಿರುವ ಹಣ ಕಡಿಮೆಯಾಗಿತ್ತು. 1980 ರಲ್ಲಿ ನಮ್ಮ ಮುಖ್ಯಮಂತ್ರಿಗಳಾದ ಧರ್ಮಸಿಂಗ್‌ರವರ ನೇತೃತ್ವದಲ್ಲಿ ಪ್ರದೇಶಾಭಿವೃದ್ಧಿ ಕಾರ್ಯಕ್ರಮಗಳಿಗೆ, ಅದರಲ್ಲೂ ವಿಶೇಷವಾಗಿ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿಗಾಗಿ ಅವರ ಅಧ್ಯಕತೆಯಲ್ಲಿ ಒಂದು ಸಲಹಾ ಮಂಡಳಿಯನ್ನು ಮಾಡಲಾಗಿತ್ತು. ಅದರ ಪ್ರಕಾರ ಈಗ ಹೈದರಾ–ಬಾದ್ ಕರ್ನಾಟಕಕ್ಕೆ ದಿ: ವಿರೇಂದ್ರಪಾಟೀಲರಿದ್ದಂತಹ ಸಂರ್ಭದಲ್ಲಿ 1991ರಲ್ಲಿ 50 ಕೋಟಿ ರೂಪಾಯಿಗಳನ್ನು ಕೊಡುವುದರ ಮೂಲಕ ಇದನ್ನು ಪ್ರಾರಂಭ ಮಾಡಿದರು. ಈಗ 60 ಕೋಟಿ ರೂ ಕೊಡುತ್ತಿದ್ದೀರಿ, 1991ಕ್ಕೂ 2005ಕ್ಕೂ ಹಣದುಬ್ಬರದ ಬೆಲೆ ಎನು ಅವತ್ತಿನ ಮತ್ತು ಇವತ್ತಿನ ದರ ಪಟ್ಟಿಯ ಬಗ್ಗೆ ನಾವು ಗಮನಕೂಡಬೇಕಾಗಿದೆ. ಕಳೆದ ಎರೆಡು ವರ್ಷದಿಂದ ಒಂದು ರೂಪಾಯಿಯನ್ನೂ ಕೊಟ್ಟಿರಲಿಲ್ಲ, ಈ 60 ಕೋಟಿ ರೂಪಾಯಿಯನ್ನು ಕೊಟ್ಟಿರುವುದಕ್ಕೆ ನಾನು ಸ್ವಾಗತ ಮಾಡುತ್ತೇನೆ, ಇದನ್ನು 100 ಕೋಟಿ ರೂಪಾಯಿಗಳಿಗೆ ಎರಿಸಿದರೆ ಬಹಳ ಒಳ್ಳೆಯದು, ಆ ಚಿಂತನೆಯನ್ನು ತಾವು ಮಾಡುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ. ಪ್ರದೇಶಾಭಿವೃದ್ಧಿ ಕಾರ್ಯಕ್ರಮಕ್ಕೆ ಹೈದರಾಬಾದ್ ಕರ್ನಾಟಕ

ಪ್ರದೇಶಕ್ಕಿಂತ ಸ್ವಲ್ಪ ಹೆಚ್ಚು ಹಣ ಬಯಲುಸೀಮೆಗೆ ಕೊಡಿ, ಎಕೆಂದರೆ ಬಯಲು ಸೀಮೆ ಸ್ವಲ್ಪ ಜಾಸ್ತಿ ಇದೆ. ಇದಾದ ಮೇಲೆ ಒಳ್ಳೆಯ ಕೆಲಸವನ್ನು ಮಾನ್ಯ ಉಪಮುಖ್ಯಮಂತ್ರಿಗಳು ಮಾಡಿದ್ದಾರೆ, ಶಾಸಕರ ನಿಧಿಗೆ 50 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದು ಸ್ವಾಗತಾರ್ಹ. ಕಳೆದ ಸರ್ಕಾರ 40 ಲಕ್ಷರೂ ಕೊಡುತ್ತೇನೆಂದು ಹೇಳಿತ್ತು ಕೊಡಲಿಲ್ಲ, ಬರಗಾಲ ಬಂದಿದ್ದರಿಂದ ಅಡ್ಜೆಸ್ಟ್ ಮಾಡಿಬಿಟ್ಟರು. ಅದಕ್ಕೆ 50 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದು ಸ್ವಾಗತಾರ್ಹ, ಮುಂದಿನ ವರ್ಷದಿಂದ ಒಂದು ಕೋಟಿರೂ ಮಾಡಿ. ಎಕೆಂದರೆ 50 ಲಕ್ಷರೂ ನಲ್ಲಿ ರೇಟ್ ಆಫ್ ಇನ್‌ಫ್ಲೇಶನ್ ಎಲ್ಲಾ ನೋಡಿದರೆ ನಾವು ಎನು ಮಾಡಬಹುದು? 6 ಕಿಮಿೀ ಡಾಂಬರು ರಸ್ತೆ ಮಾಡಬಹುದು, ಅಥವಾ ಎರಡು ಹೈಸ್ಕೂಲ್ ಕಟ್ಟಡ ಕಟ್ಟಬಹುದು. ಸಾಧ್ಯವಾದರೆ ಅದಕ್ಕೆ ಕಂಡೀಷಶನ್ಸ್ ಹಾಕಿ, ಯಾವ್ಯಾವುದಕ್ಕೆ ಕೊಡಬೇಕು ಯಾವ್ಯಾವುದು ಪ್ರಿಯಾರಿಟಿ ಎಂದು ಇವೆಲ್ಲಾ ಮಾಡಿದರೆ ಶಾಸಕರಿಗೆ ಅನುಕೂಲವಾಗುತ್ತದೆ. ಎಕೆಂದರೆ ಬೇಲೂರು ಘೋಷಣೆ ಬಂದಿದ್ದರಿಂದ ಎಲ್ಲಾ ನಮ್ಮ ಸ್ಕೀಮ್‌ಗಳು ಗ್ರಾಮ ಪಂಚಾಯ್ತಿಗೆ ಹೋಗಿ ವರ್ಗ ಆಗುತ್ತದೆ. ಒಳ್ಳೆಯ ಸೂಚನೆ ಅದು, ಏಕೆಂದರೆ ನಮ್ಮ ಎಲ್ಲಾ ಕೆಲಸಗಳು ಪಂಚಾಯ್ತಿಗೆ ಪಂಚಾಯ್ತಿ ಮೂಲಕ ಆಗಬೇಕು. ಆ ಸಿಸ್ಟಮನ್ನೂ ನಾವು ಬೆಂಬಲಿಸಬೇಕು. ಆದರೆ ಶಾಸಕರಿಗೆ ಕೂಡ ಆಗಬೇಕು. ಎಕೆಂದರೆ ಸಂಸದರು ಎರಡು ಕೋಟಿರೂ ಪಡೆಯುತ್ತಿದ್ದಾರೆ. ಎಂಎಲ್‌ಎಗಳಿಗೆ ಸ್ಕೀಂ ಇದೆಯಲ್ಲಾ, ದೆಹಲಿಯಲ್ಲಿ ಎಂಎಲ್‌ಎಗಳಿಗೆ ಮೂರು ಕೋಟಿರೂ ಕೊಡುತ್ತಾರೆ. ತಮಿಳುನಾಡಿನಲ್ಲಿ ಕೊಡುತ್ತಾ ಇದ್ದಾರೆ. ಹೀಗಾಗಿ ಇದನ್ನು ಒಂದು ಕೋಟಿ ರೂ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳುತ್ತೇನೆ. ಇದಾದಮೇಲೆ ಲೋಕೋಪಯೋಗಿ ಇಲಾಖೆಗೂ ತಾವು ಈ ಸಾಲಿನಲ್ಲಿ ಹೆಚ್ಚು ಹಣವನ್ನು ಕೊಟ್ಟಿದ್ದೀರಿ. ಅದರ ಜೊತೆಗೆ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಪ್ರಮುಖ ರಸ್ತೆಗಳಿಗೆ ಒಂದು ರಸ್ತೆ ನಿಧಿ ಅಂತ ಮಾಡಿ ಅದಕ್ಕೆ ಹೆಚ್ಚು ಹಣ ಕೊಟ್ಟು ಅಭಿವೃದ್ಧಿ ಮಾಡುತ್ತಿರುವುದು ಬಹಳ ಸಂತೋಷದ ಸಂಗತಿ. ಆದರ ಜೋತೆಗೆ ಕೆಲವು ಗ್ರಾಮೀಣ ರಸ್ತೆಗಳನ್ನು ಅಪ್‌ಗ್ರೇಡ್ ಮಾಡಬೇಕು. ಅಪ್‌ಗ್ರೇಡ್ ಮಾಡುವ ಸಲುವಾಗಿ ಪ್ರತಿಯೋಂದು ತಾಲ್ಲೂಕಿನಲ್ಲಿ ಒಂದು ನೂರು ಕಿಮೀ ಅಪ್‌ಗ್ರೇಡ್ ಮಾಡಲು ಈ ಸಲ ಸಾಧ್ಯತೆ ಇದೆ. ತಾವು ಅದಕ್ಕೆ ಕೊಟ್ಟಿರುವ ಹಣ ಜಾಸ್ತಿ ಇದೆ. ಅದು ಸದ್ಬಳಕೆಯಾಗಬೇಕಾದರೆ ಗ್ರಾಮೀಣ ರಸ್ತೆಗಳ ಅಪ್‌ಗ್ರೇಡೇಶನ್ ಆಗಬೇಕು. ತಾವು ಕೊಟ್ಟಿರುವ ಹಣದಲ್ಲಿ ಈ ಕೆಲಸವನ್ನು ಸರ್ಕಾರ ಮಾಡುತ್ತದೆ ಎಂದು ಹೇಳುತ್ತೇನೆ. ಅಧ್ಯಕ್ಷರೇ ವೇಳೆ ಕಡಿಮೆ ಇರುವುದರಿಂದ ಕಡಿಮೆ ಮಾಡುತ್ತಾ ಹೋಗುತ್ತೇನೆ. ಇನ್ನು ಆರೋಗ್ಯ ವಲಯ. ಇದೂ ಕೂಡ ಬಹಳ ಮುಖ್ಯ. ಇವತ್ತು ಕೇಂದ್ರ ಸರ್ಕಾರ ಈಗಾಗಲೇ ನಿರೂಪಣೆ ಮಾಡಿದಂತಹ ಕಾನೂನಿನ ಪ್ರಕಾರ ಒಂದೂ ಪ್ರೈಮರಿ ಹೇಲ್ತ್ ಸೆಂಟರ್ ತೆರೆಯಲು ಕರ್ನಾಟಕದಲ್ಲಿ ಸಾಧ್ಯವಿಲ್ಲ. ಎಕೆಂದರೆ ಪ್ರತಿ 30 ಸಾವಿರ ಜನಸಂಖೆ ಹೊಂದಿರುವ ಪ್ರದೇಶಕ್ಕೆ ಮಾತ್ರ ಕೇಂದ್ರ ಸರ್ಕಾರ ಸಹಾಯಧನ ಕೊಡುತ್ತದೆ. ಇಲ್ಲದಿದ್ದರೆ ಪ್ರೈಮರಿ ಹೆಲ್ತ್ ಸೆಂಟರ್ ಇಲ್ಲ.

ಅದ್ದರಿಂದ ನೀವು ಕೇಂದ್ರ ಸರ್ಕಾರಕ್ಕೆ ಒತ್ತಾಯಮಾಡಿ ಇದನ್ನು 15 ಸಾವಿರಕ್ಕೆ ಇಳಿಸಬೇಕು. ಇಲ್ಲದೇ ಇದ್ದರೆ ಡಾಕ್ಟರ್ಸ್ ಸಂಖ್ಯೆ ಕಡಿಮೆ ಆಗಬತ್ತದೆ. 30 ಸಾವಿರ ಜನಸಂಖ್ಯೆಗೆ ಒಂದು ಪ್ರಾಥಮಿಕ ಹೆಲ್ತ್ ಸೆಂಟರ್ ಅಂದರೆ ಜನ 10 ರಿಂದ 15 ಕಿಮಿೂ ಇವತ್ತು ಹೋಗುವುದಕ್ಕಾಗುವುದಿಲ್ಲ. ಒಬ್ಬ ರೈತನಾಗಿ ಒಬ್ಬ ಬಡವನಾಗಿ ಆಸ್ಪತ್ರೆಗೆ ಹೋಗಬೇಕೆಂದರೆ 20 ಕಿಮಿೂ ದೂರ ಹೋಗಲಿಕ್ಕೆ ಸಾಧ್ಯವಿಲ್ಲ. ಅದಕ್ಕೆ ಕೇಂದ್ರ ಸರ್ಕಾರದ ಮನವೂಲಿಸಿ 30 ಸಾವಿರ ಜನಸಂಖ್ಯೆ ಪ್ರದೇಶವನ್ನು 15 ಸಾವಿರಕ್ಕೆ ತಂದು ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಾಡಬೇಕು. ಇಲ್ಲದೇ ಇದ್ದರೆ ಅದಕ್ಕೆ ಪರ್ಯಾಯವಾದಂಥ ವ್ಯವಸ್ಥೆಯನ್ನು ತಾವು ಮಾಡಬೇಕು ಎಂದು ಈ ಸಂರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಅದರ ಜೂತೆಗೆ ಉಪಾಧ್ಯಕ್ಷರೇ ತಾವು ಚಿತ್ರದುರ್ಗ ಜಿಲ್ಲೆಯಿಂದ ಬಂದವರು. ಬಹುತೇಕ ನಮ್ಮ ಉತ್ತರ ಕರ್ನಾಟಕದ 150ಕ್ಕಿಂತ ಹೆಚ್ಚು ಶಾಸಕರು ತುಮಕೂರು ಕಡೆಯಿಂದ ಬರುತ್ತಾರೆ. ಎನ್‌ಎಚ್ 4 ಮತ್ತು ಎನ್‌ಎಚ್ 13 ಎನಿದೆ ಈ ಎರಡೂ ರಸ್ತೆಗಳು ಟ್ರಾಫಿಕ್ ಜಾಸ್ತಿ ಇರುವುದರಿಂದ ಇವು ಡೆತ್ ಸೆಂಟರ್ ಆಗಿವೆ. ಯಾರಾದರೂ ಆ ಎನ್‌ಎಚ್ 4 ಎನ್‌ಎಚ್ 13 ರಲ್ಲಿ ಸಾಯುವುದಕ್ಕೇ ಹೋಹಬೇಕು. ಉಪಾಧ್ಯಕ್ಷರೇ, ನಮ್ಮ ಎಸ್‌ಎಸ್ ಪಾಟೀಲರು ಉಳಿದಿದ್ದೇ ಹೆಚ್ಚು. ಹೋಗಿ ಗಾಡಿಗೆ ಡಿಕ್ಕೆ ಹೊಡೆದಿದ್ದಾರೆ ತಾವೇ ಗಾಡಿ ಒಡಿಸುವುದಕ್ಕೆ ಹೋಗಿ. ಆ ಹೈವೇಗಳಲ್ಲಿ ತುರ್ತು ಆಸ್ಪತ್ರೆಗಳಿಲ್ಲಿ. ಅಲ್ಲಿ ದಯಮಾಡಿ ಪ್ರತಿ 50 ಕಿಮಿೂಗೆ ಒಂದು ತುರ್ತು ಆಸ್ಪತ್ರೆ, 5,–6 ಬೆಡ್ಡೋ, ಒಂದು ಆಂಬುಲಿನ್ಸ್ ಎನು ಕೊಡುತ್ತೇನೆ ಎಂದಿದ್ದೀರಿ, ಆ ರೀತಿ ಎನ್‌ಎಚ್ 4, ಎನ್‌ಎಚ್ 13ನ ಪ್ರತಿ 50 ಕಿಮಿೂಗೆ ಒಂದು ತುರ್ತು ಆಸ್ಪತ್ರೆಯನ್ನು ಎಲ್ಲಾ ಆಧುನಿಕ ತುರ್ತು ಉಪಕರಣಗಳು ಹಾಗು ಔಷಧಿಗಳುಳ್ಳ ಆಸ್ಪತ್ರೆ ಮಾಡಬೇಕು. ಇಲ್ಲದೇ ಇದ್ದರೆ ಕಷ್ಟವಾಗುತ್ತದೆ. ನಾನಂತು ಬೈ ರೋಡ್ ಹೋಗುವುದೇ ಇಲ್ಲ. ಮತ್ತೆ ಅಧ್ಯಕ್ಷರೇ, ಇನ್ನೊಂದು ನಾನು ನಿಮ್ಮನ್ನು ಅಭಿನಂದಿಸಬೇಕಾಗಿದೆ. ಈ ಸರ್ಕಾರವನ್ನು ನಾವು ಅಭಿನಂದಿಸಬೇಕು, ಈಶ್ವರಪ್ಪನವರೇ, ನೀವು ಅಭಿನಂದಿಬೇಕು. ಯಡಿಯೂರಪ್ಪನವರೂ ಅಭಿನಂದಿಸಬೇಕು. ಕಳೆದ ನಾಲ್ಕು ದಶಕದಲ್ಲಿ ಆಗದೇ ಇರುವ ಕೆಲಸ ಈ ಸರ್ಕಾರ ಮಾಡಿದೆ. 6 ಹೊಸ ಸರ್ಕಾರಿ ಮೆಡಿಕಲ್ ಕಾಲೇಜ್ ತೆರೆದಿದೆ. ಇದು ಸಣ್ಣ ಸಾಧನೆಯಲ್ಲ, ಶಿವಮೊಗ್ಗ ಮೊದಲು ಇರಲಿಲ್ಲ, ಯಡಿಯೂರಪ್ಪ, ಈಶ್ವರಪ್ಪನವರ ಸಲುವಾಗಿ ಕೊಟ್ಟರು, ನಾವು ರೂಲಿಂಗ್ ಪಾರ್ಟಿ ನಮಗೆ ಕೊಡಲಿಲ್ಲ. ನಾನೂ ಸಿದ್ದರಾನಯ್ಯ ಕೂಡೇ ಎಮ್‌ಎಲ್‌ಎ ಆದ್ವಿ; 83ರಲ್ಲಿ ನಮ್ಮ ಕೊಪ್ಪಳಕ್ಕೆ ಕೊಡ್ರಿ ಅಂದರೆ ಇಲ್ಲ ಅನ್ನತ್ತಾರೆ. ನಿಮ್ಮ ಮಾತು ಕೆಳುತ್ತಾರೆ. ಅದಕ್ಕೆ ನೀವು ವಂದನೆ ಹೇಳಿ ಅವರಿಗೆ. ಅದಕ್ಕೆ ನಾವೆಲ್ಲರೂ ಕೂಡಿ ಈ ಆರು ಹೊಸ ಮೆಡಿಕಲ್ ಕಾಲೇಜ್ ಕೊಟ್ಟಿದ್ದಕ್ಕೆ ಸರ್ಕಾರವನ್ನು ಅಭಿನಂದಿಸುತ್ತೇವೆ. ಇವತ್ತು ಜನಸಂಖ್ಯೆಗನುಗುಣವಾಗಿ ಮೆಡಿಕಲ್ ಕಾಲೇಜ್ ಆಗಬೇಕಾಗಿದ್ದರೆ ಯಾವ್ಯಾವ ಜಿಲ್ಲೆಯಲ್ಲಿ ಮೆಡಿಕಲ್ ಕಾಲೇಜ್ ಇಲ್ಲ ಅಲ್ಲಿ ಕೊಡಿ. ಸ್ಟಾರ್ಟ್ ಮಾಡಿ, ಕೊಪ್ಪಳಕ್ಕೂಂದಾಗಬೇಕು.

ಗದಗಿಗೂಂದಾಗಬೇಕು, ಚಿತ್ರದುರ್ಗಕ್ಕೆ ಒಂದಾಗಬೇಕು. ವಾಟಾಳ್ ನಾಗರಾಜ್ ಕ್ಷೇತ್ರ ಚಾಮರಾಜನಗರಕ್ಕೆ ಒಂದು ಮೆಡಿಕಲ್ ಕಾಲೇಜ್ ಆಗಬೇಕು. ಇನ್ನು ಎಳು ಎಂಟು ಜಿಲ್ಲೆಗಳಲ್ಲಿ ಮೆಡಿಕಲ್ ಕಾಲೇಜ್ ಮಾಡಿಬಿಟ್ಟರೆ ರಾಜ್ಯದ ಎಲ್ಲಾ 28 ಜಿಲ್ಲೆಗಳಲ್ಲೂ ಮೆಡಿಕಲ್ ಕಾಲೇಜ್ ಆದಂತಾಗುತ್ತದೆ. ಮುಂಬರುವ ವರ್ಷಗಳಲ್ಲಿ ಅಥವಾ ಸಾಧ್ಯವಿದ್ದರೆ ಇದೇ ವರ್ಷ, ನನಗೆ ಗೊತ್ತಿದೆ ನಿಮ್ಮ ಜುಲೈ ಬಜೆಟ್ ಅತ್ಯುತ್ತಮ ಬಜೆಟ್ ಕೊಡಲಿದ್ದೀರಿ ಆಗ ಈ ಎಳೆಂಟು ಮೆಡಿಕಲ್ ಕಾಲೇಜು ತೆರೆಯಲಿಕ್ಕೆ ತಾವು ಪ್ರಯತ್ನ ಮಾಡುತ್ತೀರಿ. ಮತ್ತು ಅನೌನ್ಸ್ ಮಾಡುತ್ತೀರಿ ಅಂತ ಹೇಳಲಿಕ್ಕೆ ಇಷ್ಟಪಡುತ್ತೇನೆ. ಮತ್ತೆ ಅಧ್ಯಕ್ಷರೇ ಇನ್ನೊಂದು ಮಾತು, ಇವತ್ತು ಕ್ಯಾನ್ಸರ್ ರೋಗಿಗಳು ಜಾಸ್ತಿ ಆಗಿದ್ದಾರೆ. ಬಹಳ ಜನರಿಗೆ ಕ್ಯಾನ್ಸರ್ ಇದೆ. ಇವತ್ತು ಮುಖ್ಯಮಂತ್ರಿಗಳ ಕಚೇರಿಗೆ ಹೋಗಿ ಒಬ್ಬೊಬ್ಬ ಎಂಎಲ್ಎ ಪ್ರತಿ ವಾರಕ್ಕೆ ಎರಡೆರಡು ಲಿಟರ್ ಕೊಡುತ್ತಾರೆ. ಕ್ಯಾನ್ಸರ್‌ಗಾಗಿ. ಕ್ಯಾನ್ಸರ್ ಆಸ್ಪತ್ರೆ ಇರುವುದು ಕರ್ನಾಟಕದಲ್ಲಿ ಎರಡೇ, ಒಂದು ಬೆಂಗಳೂರು, ಒಂದು ಹುಬ್ಬಳ್ಳಿ. ಇದು ಸಾಲುವುದಿಲ್ಲ. ಸಿದ್ದರಾಮಯ್ಯನವರೇ, ಕ್ಯಾನ್ಸರ್ ಆಸ್ಪತ್ರೆ ಬಗ್ಗೆ ತಾವು ಹೆಚ್ಚು ಗಮನ ಕೊಟ್ಟು ಇನ್ನೂ ನಾಲ್ಕೈದು ಕ್ಯಾನ್ಸರ್ ಆಸ್ಪತ್ರೆಗಳನ್ನು ದಯಮಾಡಿ ತೆರೆಯಿರಿ. ನಮ್ಮ ಕೊಪ್ಪಳದಲ್ಲಿ ಒಂದು ತೆರೆಯಿರಿ; ಅಲ್ಲಿ ಬಹಳ ಮಂದಿ ಕ್ಯಾನ್ಸರ್ ರೋಗಿಗಳಿದ್ದಾರೆ. ಇದು ತಮಾಷೆಯಲ್ಲ. ಈ ಸದನದಲ್ಲಿ ಕಳೆದ ಎಳೆಂಟು ವರ್ಷದಿಂದ ನಾನು ಇದ್ದಿಲ್ಲ. ಅವಾಗ ಇಷ್ಟು ಕ್ಯಾನ್ಸರ್ ಇರಲಿಲ್ಲ, ಈಗ ಪ್ರತಿ ವಾರಕ್ಕೊಂದು ಕ್ಯಾನ್ಸರ್ ಪೇಷೆಂಟ್ ಬರುತ್ತದೆ ನನ್ನ ಬಳಿಗೆ. ಅದಕ್ಕೇ ನನ್ನ ಭಾಗದಲ್ಲಿ ಕೂಡ ಒಂದು ಕ್ಯಾನ್ಸರ್ ಆಸ್ಪತ್ರೆ ಸಾಧ್ಯವಾದರೆ ಯಲುಬುರ್ಗಾದಲ್ಲಿ ತೆರೆಯಿರಿ; ಇಲ್ಲದಿದ್ದರೆ ಕೊಪ್ಪಳದಲ್ಲಾದರೂ ತೆರೆಯಿರಿ. ಆದ್ದರಿಂದ ಈ ಆರೋಗ್ಯ ವಲಯದಲ್ಲಿ ಇವತ್ತು ಹೆಚ್ಚು ಆಸ್ಪತ್ರೆಗಳನ್ನು ಮೆಡಿಕಲ್ ಕಾಲೇಜುಗಳನ್ನು ತೆರೆಯಲು ತಾವು ಎನು ಈಗಾಗಲೇ ಪ್ರಯತ್ನ ಮಾಡಿದ್ದೀರಿ ಇನ್ನೂ ಪ್ರಯತ್ನ ತಾವು ಮಾಡುತ್ತೀರಿ ಅಂತ ನಾನು ಆಶಿಸುತ್ತೇನೆ. ಇನ್ನು ವಸತಿ ಮತ್ತು ನಗರಾಭಿವೃದ್ಧಿ ವಿಚಾರದಲ್ಲಿ ಎರಡು ಮಾತು ಹೇಳಬೇಕಾಗುತ್ತದೆ. ಅಧ್ಯಕ್ಷರೆ, ಇವತ್ತು ನಮ್ಮ ರಾಜ್ಯದಲ್ಲಿ ವಸತಿ ಇಲಾಖೆಯಲ್ಲಿ ಸುಮಾರು 11 ಲಕ್ಷ ಮನೆಗಳನ್ನು ಎಸ್ ಎಂ ಕೃಷ್ಣ, ಜೆ ಎಚ್ ಪಟೇಲ್ ಮತ್ತು ದೇವೇಗೌಡರ ಸರ್ಕಾರಗಳು 11 ಲಕ್ಷದ ಟಾರ್ಗೆಟ್ ಪ್ರಕಾರ ಕಟ್ಟಿದ್ದಾರೆ. ಅಧ್ಯಕ್ಷರೇ, ನಾನು ಆ ಖಾತೆ ಮಂತ್ರಿಯಾಗಿದ್ದೆ. ಕರ್ನಾಟಕ ರಾಜ್ಯದಲ್ಲಿ ಮೊಟ್ಟಮೊದಲ ಬಾರಿಗೆ ವಸತಿ ರಹಿತ ಜನರ ಸರ್ವೆ ಮಾಡಿಸಲಾಯಿತು. ಇಡೀ ದೇಶದಲ್ಲಿ ಸಮಗ್ರ ವಸತಿ ನೀತಿ Comprehensive housing powers ಬಂದದ್ದು ನಮ್ಮ ಕಾಲದಲ್ಲಿ, ಆಗ ನಾನು ವಸತಿ ಮಂತ್ರಿಯಾಗಿದ್ದೆ. ಅವತ್ತೇನಾಗಿದೆ ಅಧ್ಯಕ್ಷರೇ, ಒಂದು ತಪ್ಪು ಕಲ್ಪನೆ ಇದೆ. 11 ಲಕ್ಷ ಜನರಿಗೆ ಮಾತ್ರವಲ್ಲ ಇವತ್ತು ನಮ್ಮ ಕರ್ನಾಟಕದಲ್ಲಿ ಮನೆ ಇಲ್ಲದಂತಹವರು 20 ಲಕ್ಷ. ಆದರೆ ಯಾರೂ ತಿದ್ದುಪಡಿ ಮಾಡಿಕೊಳ್ಳಲಿಲ್ಲ. ನಿವೇಶನ ಇಲ್ಲದವರ ಸಂಖ್ಯೆ 9 ಲಕ್ಷ ಮನೆ ಇಲ್ಲದವರ ಸಂಖ್ಯೆ 11 ಲಕ್ಷ ಅಂತ ಇದದ್ದು. ಒಟ್ಟು 20

ಲಕ್ಷ, ಆದರೆ ಮನೆ ಇಲ್ಲದವರು 11 ಲಕ್ಷ ಮಾತ್ರ ಅಂತತಿಳಿದು ಕೊಂಡುಬಿಟ್ಟಿದ್ದಾರೆ. ಇವತ್ತು 20 ಲಕ್ಷ ಜನಕ್ಕಿಂತ ಹೆಚ್ಚು ಜನರಿಗೆ ಮನೆ ಇಲ್ಲ. ಆದ್ದರಿಂದ ಈ ವರ್ಷ 100 ಕೋಟಿರೂಗಳನ್ನು ಆಶ್ರಯ ಮನೆಗಳಿಗಾಗಿ ಕೊಟ್ಟಿದ್ದೀರಿ. ಅದಕ್ಕಾಗಿ ನಿಮ್ಮನ್ನು ಅಭಿನಂದಿಸುತ್ತೇನೆ. ಇವತ್ತು ನೂರು ಕೋಟಿರೂನಲ್ಲಿ ಒಂದು ಲಕ್ಷ ಮನೆಗಳನ್ನು ಕಟ್ಟಿಸುವ ಸಾಧ್ಯತೆ ಇದೆ. ಏಕೆಂದರೆ ಸಬ್ಸಿಡಿ 10 ಸಾವಿರರೂ, ನಿಮ್ಮನ್ನು ಅಭಿನಂದಿಸುತ್ತೇನೆ. ಇದರ ಬಗ್ಗೆ ಹೆಚ್ಚು ಗಮನ ಕೊಟ್ಟಿದ್ದೀರಿ, ನನಗೆ ಬಹಳ ಸಂತೋಷವಾಗಿದೆ. ಆದರೆ ಇನ್ನೊಂದು ಮಾತು ತಮಗೆ ಹೇಳುತ್ತೇನೆ. ತಲಾ ಮನೆಗೆ 20 ಸಾವಿರ ರೂ ಕೊಡುತ್ತಾರೆ 20 ಸಾವಿರರೂಗೆ ಎರಿಸಿದ್ದು ನಾನು ವಸತಿ ಸಚಿವನಿದ್ದಾಗ. ಮೊದಲು 10 ಸಾವಿರರೂ ಇತ್ತು, 1994ರಲ್ಲಿ ಜನತಾ ಮನೆಗಳನ್ನು ಕಟ್ಟಲಿಕ್ಕೆ ಆಶ್ರಯ ಮನೆಗಳನ್ನು ಕಟ್ಟಲಿಕ್ಕೆ ಕೇವಲ 10 ಸಾವಿರರೂ ಇತ್ತು. ಅದನ್ನು 20 ಸಾವಿರರೂಗೆ ಎರಿಸಿದೆವು ನಾನು 10 ವರ್ಷದ ಹಿಂದೆ 20 ಸಾವಿರರೂ ಇವತ್ತೂ 20· ಸಾವಿರ ಅಂದರೆ ಮನೆ ಕಟ್ಟುವುದು ಹೇಗೆ? ಅಸಾಧ್ಯ, ಆಗುವುದಿಲ್ಲ. ಇವತ್ತು ಕೂಲಿ ರೇಟ್ ಎರಿದೆ ಸಿಮೆಂಟ್ ರೇಟ್ ಏರಿದೆ ಆದ್ದರಿಂದ ಇವತ್ತು 30 ಸಾವಿರರೂಗೆ ಎರಿಸಬೇಕು. ಮತ್ತು ಸಬ್ಸಿಡಿಯನ್ನು 15 ಸಾವಿರರೂಗೆ ಮಾಡಬೇಕು ಅಂತ ಈ ಸಂದರ್ಭದಲ್ಲಿ ನಾನು ಉಪ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ: ಏಕೆಂದರೆ ನೂರು ಕೋಟಿ ರೂಗಳನ್ನು ಇದಕ್ಕಾಗಿ ಕಾದಿರಿಸಿದ್ದೀರಿ: ಅದರ ಜೊತೆಗೆ ಇಂದಿರಾ ಆವಾಸ್‌ಗೂ ಹೆಚ್ಚು ಹಣ ಕೊಟ್ಟಿದ್ದೀರಿ. ಅದಕ್ಕೆ ನಿಮ್ಮನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಇನ್ನೊಂದು, ಬಡ್ಡಿ ದರ. Rate of Interest Ragiv Gandhi housing corporation collect ಮಾಡುತ್ತಿರುವುದು ಒಂಬತ್ತು ಪರ್ಸೆಂಟ್. ಅದೇ ಹೊರಗಡೆ ಎಳು ಪರ್‌ಸೆಂಟಿಗೆ ಕೊಡುತ್ತಾರೆ. ಇವತ್ತು ಒಂಭತ್ತು ಪರ್‌ಸೆಂಟ್ ಎಂದು ಹೆಳುತ್ತಾರೆ ಎಳು ಪರ್‌ಸೆಂಟ್ ತೆಗೆದುಕೊಳ್ಳಲಿ. ಇವರು ಒಂಭತ್ತು ಪರ್‌ಸೆಂಟದ ಚಾರ್ಜ್‌ಮಾಡುತ್ತಾರೆ. ಇದನ್ನು ನೀವು ಐದು ಪರ್‌ಸೆಂಟಿಗೆ ಇಳಿಸಿ. ಎಲ್ಲರೂ ತುಂಬುತ್ತಾರೆ. ಐದು ಪರ್‌ಸೆಂಟಿಗೆ ನಿಮ್ಮ ಹತ್ತು ಸಾವಿರ ರೂಪಾಯಿಗಳನ್ನು ಎಲ್ಲರೂ ತುಂಬುತ್ತಾರೆ. ಇದನ್ನು ತಾವು ರಾಜೀವ್ ಗಾಂಧಿ ಹೌಸಿಂಗ್ ಕಾರ್ಪೊರೇಷನ್‌ಗೆ ಹೇಳಬೇಕಾಗುತ್ತದೆ. Rate of interest has to be brought down to 5% or 7%

ಈಗ ಬೆಂಗಳೂರಿನಲ್ಲಿ ಮೆಟ್ರೋ ರೈಲನ್ನು ಸ್ಥಾಪನೆ ಮಾಡುವ ಸಲುವಾಗಿ ಈ ಸರ್ಕಾರ ಸುಮಾರು 110 ಕೋಟಿ ರೂಪಾಯಿಗಳನ್ನು ಕೊಟ್ಟಿರುವುದು ಸ್ವಾಗತಾರ್ಹ. ಬಹಳ ಸ್ವಾಗತಾರ್ಹ. ಬೆಂಗಳೂರು ಇವತ್ತೇನು ಬೆಳೆಯುತ್ತಿದೆ, ಏಷ್ಯಾ ಖಂಡದಲ್ಲಿ ಅತ್ಯಂತ ಹೆಚ್ಚಿನ ಬೆಳವಣಿಗೆಯನ್ನು ಕಳೆದ ಎರಡು ದಶಕಗಳಲ್ಲಿ ಕಂಡಿದೆ. Growth rate of Bangalore is more than 10% ಅದಕ್ಕೆ ಇವತ್ತು ಮೆಟ್ರೋ ರೈಲಿನ ಅವಶ್ಯಕತೆ ಬಹಳ ಇದೆ. Pollution is too much.

ನಿಮಗೆ ಒಂದು ಮಾತನ್ನು ನಾನು ಜ್ಞಾಪಕಮಾಡಿಕೊಡುವುದಕ್ಕೆ ಇಚ್ಛೆಪಡುತ್ತೇನೆ, ಇದಕ್ಕೆ ತಾವು ಮುಗಿಸುತ್ತೇನೆ ಅಧ್ಯಕ್ಷರೇ, oI will close exactly at 6.45 p.m., please. ಅದಕ್ಕೆ ಇದನ್ನು ನಾನು ಸ್ವಾಗತ ಮಾಡುತ್ತೇನೆ, ಇದಕ್ಕೆ ತಾವು ಪೆಟ್ರೋಲ್, ಡೀಸಲ್ ಮತ್ತು ಇನ್ನಿತರ ವಸ್ತುಗಳಿಗೆ ತಾವು ತೆರಿಗೆಯನ್ನು ಹಿಂದೆ ಹಾಕಿದ್ದೀರಿ: ಆದರೆ ಹಣ ಎಷ್ಟು ಆಗಿದೆ, ಅದನ್ನು ಏತಕ್ಕೆ ಬಳಸಿಕೋಂಡಿದ್ದೀರಿ ಎಂಬುದು ಗೊತ್ತಿಲ್ಲ. ದಯಮಾಡಿ ತಾವು ಅದನ್ನು ಈ ಸದನಕ್ಕೆ ಹೇಳಬೇಕಾಗುತ್ತದೆ ಮತ್ತು ಸಾಧ್ಯವಾದರೆ ಬೆಂಗಳೂರಿನಲ್ಲಿ ಟ್ರಾನ್ಸ್‌ಪೋರ್ಟೇಷನ್ ಸಲುವಾಗಿ ಇನ್ನು ಹೆಚ್ಚಿಗೆ ಟ್ಯಾಕ್ಸನ್ನು ಹಾಕಿದರೆ ತಪ್ಪಿಲ್ಲ. ಏಕೆಂದರೆ ಇವತ್ತು ಏನಾಗಿದೆ ಟ್ರಾಫಿಕ್ ಕನ್‌ಜೆಷನ್, ಪಲ್ಯೂಷನ್, ಜನವನಾಗಿದೆ ಎಂದರೆ ಹೆಚ್ಚು ಹಣವನ್ನು ಅವರು ಡಾಕ್ಟರ್‌ಗೆ ಕೊಡುತ್ತಾರೆ. ಇಲ್ಲಿ ಎರಡು ರೀತಿಯ ಪಲ್ಯೂಷನ್ ಇದೆ. ಒಂದು ಸೌಂಡ್ ಪಲ್ಯೂಷನ್. ಹೊಗೆಯಿಂದ ಬರುವ ಪಲ್ಯೂಷನ್. ನೀವು ಟಿವಿ ಯಲ್ಲಿ ನೋಡಿ, ಗೊತ್ತಾಗುತ್ತದೆ. we are reaching almost 90 Decibels, in Bangalore. ಕಿವಿ ಹರಿದುಹೋಗುತ್ತದೆ. ಶಬ್ದ ಮಾಲಿನ್ಯ, ಹೊಗೆ ಮಾಲಿನ್ಯ ಸಲ್ಫರ್ ಪ್ರಮಾಣ ಅತಿ ಜಾಸ್ತಿಯಾಗಿದೆ. ಅದಕ್ಕೆ ನಾವು ಡಾಕ್ಟರಿಗೆ ಹೆಚ್ಚು ಹಣವನ್ನು ಕೊಡುತ್ತೇವೆ ಪ್ರತಿಯೊಬ್ಬರೂ ಪ್ರತಿ ತಿಂಗಳೂ ಕೊಡುತ್ತಾರೆ. ಬೆಂಗಳೂರಿನಲ್ಲಿ ನಿಮಗೆ ಗೊತ್ತಿರಬಹುದು, ಬೆಂಗಳೂರಿನಲ್ಲಿ ಖಾಯಿಲೆಗಳು ಜಾಸ್ತಿ ಬರುತ್ತದೆ. ಆಗಿಂದಾಗ್ಗೆ ಮೈಕೈ ನೋವು, ಎಲ್ಲಾ ಇಲ್ಲಿ ಜಾಸ್ತಿ. ನೆಗಡಿ ಜಾಸ್ತಿ. ಹೀಗಾಗಿ ಇವೆಲ್ಲಾ ಪಲ್ಯೂಷನ್ ಕಾರಣದಿಂದ. ಅಲರ್ಜಿ ಕಾರಣದಿಂದ. ಅದಕ್ಕೆ ಹಣವನ್ನು ನಾವು ಡಾಕ್ಟರಿಗೆ ಕೊಡುತ್ತೇವೆ. ಆ ಡಾಕ್ಟರಿಗೆ ಕೊಡುವ ಬದಲಾಗಿ ಹೆಚ್ಚು ಹಣವನ್ನು ಇಲ್ಲಿ ಟ್ಯಾಕ್ಸ್ ಮುಖಾಂತರ ಇದಕ್ಕೆ ಕೊಟ್ಟರೆ ಮೆಟ್ರೋ ರೈಲು ಆಗುವುದಕ್ಕೆ ಸಾಧ್ಯತೆ ಇದೆ. ಸಾಧ್ಯವಾದರೆ ಸೆಸ್‌ನ್ನುಕಲೆಕ್ಟ್ ಮಾಡಿ ಎನ್ನುವ ಸಲಹೆಯನ್ನು ಕೊಡುತ್ತೇನೆ. ಇನ್ನೊಂದು ಮುಖ್ಯವಾದ ವಿಚಾರವೆಂದರೆ ರೈಲ್ವೆ ಪ್ರಜೆಕ್ಟ್‌ಗಳಿಗೆ ಕರ್ನಾಟಕ ಸರ್ಕಾರ ತನ್ನ ಸಹಾಯಧನವನ್ನು ಕೊಟ್ಟಿದೆ. ಅದರಲ್ಲೂ ಕೂಡ ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಬಹಳ ಅನ್ಯಾಯವಾಗಿದೆ. ಸ್ವಲ್ಪ ನಮಗಿಂತ ಮಾನ್ಯ ಡಿ. ಆರ್. ಪಾಟೀಲರು ಮುಂದಿದ್ದಾರೆ. ಅವರು ಮುಂಬೈ-ಕರ್ನಾಟಕ ಪ್ರದೇಶದವರು. ಅವರು ಬಾಯಿ ಇದ್ದವರು. ಬ್ರಿಟೀಷರ ಕಾಲಕ್ಕೆ ತಯಾರಾಗಿಬಿಟ್ಟಿದ್ದಾರೆ. ಅಲ್ಲಿ ಎರಡು ಪ್ರಜೆಕ್ಟ್. ಬಿಜಾಪುರ-ಗದಗ ಮತ್ತು ಹುಬ್ಬಳ್ಳಿ-ಅಂಕೋಲಾ ಪ್ರಾಜೆಕ್ಟ್‌ಗೆ ಗೌರ್ನಮೆಂಟ್ ಆಫ್ ಕರ್ನಾಟಕ 50 ಪರ್‌ಸೆಂಟ್ ಅಸಿಸ್ಟನ್ಸ್‌ನ್ನು ಕೊಡುತ್ತದೆ. ಹಳೆಯ ಮೈಸೂರಿನಲ್ಲಿ ಕೊಡುತ್ತಾರೆ. ಬಳ್ಳಾರಿ ನಮ್ಮ ಉತ್ತರ ಕರ್ನಾಟಕಕ್ಕೆ ಸಂಬಂಧವಿಲ್ಲ. ಅದು ಮದ್ರಾಸ್ ಕರ್ನಾಟಕ. ಆ ಮದ್ರಾಸ್ ಕರ್ನಾಟಕ ಮುಂಬೈ ಕರ್ನಾಟಕ ಹಳೆಯ ಮೈಸೂರಿಗೆ ಕೊಡುತ್ತಿರಿ. ನಾವೇನು ಹೈದರಾಬಾದ್-ಕರ್ನಾಟಕದವರಿಗೆ ಗುಲ್ಬರ್ಗ ಬೀದರ್ ಇಲ್ಲಿ ಎರಡು ರೈಲ್ವೆಲೈನ್ ಇದೆ. ಒಂದು ಬೀದರ್-ಗುಲ್ಬರ್ಗ, ಮತ್ತು ಮುನಿರಾಬಾದ್-ಮೆಹಬೂಬ್ ನಗರ. ಮುನಿರಾಬಾದ್ ಮೆಹಬೂಬ್‌ನಗರ ಎಂದರೆ ಯಾರಿಗೂ ಗೊತ್ತಾಗುವುದಿಲ್ಲ ಎಲ್ಲಿಂದ ಎಲ್ಲಿಗೆ ಎಂದು ಹೇಳಿ. ಬಹಳ ಮುಖ್ಯವಾದ ರೈಲ್ವೆಲೈನ್ ಉತ್ತರಕರ್ನಾಟಕದಲ್ಲಿ ಇದು. ನಾನು ಪಾರ್ಲಿಮೆಂಟ್ ಮೆಂಬರ್ ಇದ್ದಾಗ ಆ ರೈಲ್ವೆಲೈನನ್ನು

ಕ್ಲಿಯರ್ ಮಾಡಿಸಿದೆ. ಅಂದರೆ ಮುನಿರಾಬಾದ್ ಎಂದರೆ ಕೊಪ್ಪಳ. ಕೊಪ್ಪಳ, ಗಂಗಾವತಿ, ಸಿಂಧನೂರು, ಮಾನ್ವಿ, ರಾಯಚೂರು ಥರ್ಮಲೆ ಪವರ್ ಪ್ರೊಡಕ್ಷನ್‌ನಿಂದ ಅದು ಹೈದರಾಬಾದ್‌ಗೆ ಹೋಗುತ್ತಿದೆ. ಇದು ಬಹಳ ಪ್ರಮುಖವಾದುದು. ಮತ್ತು ಹೈದರಾನಾದ್-ಕರ್ನಾಟಕ ಬಾಂಬೆ-ಕರ್ನಾಟಕಕ್ಕೆ ಲಿಂಕೆ ಆಗುತ್ತದೆ. ಮತ್ತು ಗೋವಾದಿಂದ ಡೈರೆಕ್ಟ್ ನಮಗೆ ರಾಯಚೂರು ಥರ್ಮಲೆ ಪವರ್‌ಗೆ ಕೋಲ್ ಸಪ್ಲೈ ಆಗುತ್ತದೆ. ಮತ್ತು ಹೈದರಾಬಾದ್ ಟು ಗೋವಾ ಡೈರೆಕ್ಟ್ ರೋಡ್ ಆಗುತ್ತದೆ. ಮತ್ತು ನೀರಾವರಿಗೆ ಗಂಗಾವತಿ ಸೊಧನೂರೂ, ಮಾನ್ವಿ ಆ ಪ್ರದೇಶಗಳಿಗೆ ಅನುಕೂಲವಗುತ್ತದೆ. ಫುಡ್ ಟ್ರಾನ್ಸ್‌ಪೋರ್ಟೇಷನ್ ಮತ್ತು ಕಲ್ಲಿದ್ದಲು ಟ್ರಾನ್ಸ್‌ಪೋರ್ಟೇಷನ್‌ಗೆ ಅದನ್ನು ನೀವು ಗಮನಕ್ಕೆ ತೆಗೆದುಕೊಳ್ಳುತ್ತಿಲ್ಲ. ಅದಕ್ಕೆ ಇವೆರಡಕ್ಕೂ ತಾವು ಬೀದರ್, ಗುಲ್ಬರ್ಗ ಮತ್ತು ಮುನಿರಾಬಾದ್-ಮೆಹಬೂಬ್ ನಗರಕ್ಕೂ ರೈಲ್ವೆ ಅಸಿಸ್ಟೆನ್ಸ್‌ನ್ನು ಕೊಡಬೇಕೆಂದು ಕೇಳಿಕೊಳ್ಳತ್ತೇನೆ. ಮಾನ್ಯ ಮುಖ್ಯಮಂತ್ರಿಗಳಾದ ಧರ್ಮಸಿಂಗ್‌ರವರು ಹೈದರಾಬಾದ್ ಕರ್ನಾಟಕದವರು ಖರ್ಗೆಯವರು, all heavywights are here.

ಅದಕ್ಕೆ ತಾವು ಮತ್ತು ನಮ್ಮ ಸಿದ್ದರಾಮಯ್ಯನವರು, ನೀವು ಹೈದರಾಬಾದ್-ಕರ್ನಾಟಕದವರು. ಮೈಸೂರಿನವರಲ್ಲ. ಗೊತ್ತು ತಾನೇ.? ಕೊಪ್ಪಳದಿಂದ ನೀವು ಎಂಪಿ ಗೆ ನಿಂತದ್ದಿರಿ, ಸ್ವಲ್ಪೇ ಅಂತರದಿಂದ ಮೋಸದಿಂದ ಸೋತುಹೋದಿರಿ. ಅದೇ ಕೌಂಟಿಂಗ್‌ನಲ್ಲಿ ಮೋಸವಾಯಿತು. ಇಲ್ಲದಿದ್ದರೆ hr wiould have won. ನಾವೆಲ್ಲಾ ಲೀಡ್ ಕೊಟ್ಟದ್ದೇವೆ. 900 ಲೀಡ್ ಆಗಿದೆ.

ನಮ್ಮ ಕ್ಷೇತ್ರದಲೆಲ್ಲ. ನಾನು 89 ರಲ್ಲಿ ಎಂಎಲ್‌ಎ ಆಗಿದ್ದೆ. ಅದಕ್ಕೆ ನೀವುಕೂಡ ಹೈದರಾಬಾದ್-ಕರ್ನಾಟಕದವರೇ: ಅದಕ್ಕೆ ಇವೆರೆಡಕ್ಕೆ ಕೊಡಿ. ನಾಳೆ ಅನುಕೂಲವಾಗುತ್ತದೆ. ದಯವಿಟ್ಟು ಹೈದರಾಬಾದ್-ಕರ್ನಾಟಕಕ್ಕೂ ಕೂಡ ತಾವು ಮಾಡಿಕೊಡಬೇಕೆನ್ನುವ ಮಾತನ್ನು ಹೇಳಿ ಚಿತ್ರದುರ್ಗದ್ದು ಎನು ಮಾಡಿಸಿದ್ದೀರಲ್ಲಾ. ನಿಮಗೆ ಡಾಕ್ಯುಮೆಂಟನ್ನು ಕೊಡುತ್ತೇನೆ. ಲಾಲುಪ್ರಸಾದ್‌ಗೆ ಹೇಳಿ ಅಲ್ಲಿ ನಾನು ಪೇಪರ್‌ನಲ್ಲಿ ನೋಡಿದೆ. ಇದು ಯಾರೂ ಹೇಳಿಲ್ಲ, ಮಾಡಿಲ್ಲ. ನಾನು ಹೇಳಿದ್ದೇನೆ. ನಾನು ಎಂಪಿ ಇದ್ದಾಗ ಗೊತ್ತಲ್ಲಾ, ಮೊನ್ನೆ ಲಾಲುಪ್ರಸಾದ್ ಯಾದವ್‌ಗೆ ಹೇಳಿ ಆ Kottur-Harithar is a dead line. I don't want. ಉಪಯೋಗ ಇಲ್ಲ, ಚಿತ್ರದುರ್ಗ ಟು ಗದಗ್ ವಯಾ ಕೊಟ್ಟೂರು ಮಾಡಿ ರೈಲ್ವೆ ಮಾಡಿಸುವುದಕ್ಕೆ ಲಾಲುಪ್ರಸಾದ್‌ಗೆ ನಾನು ಕೊಟ್ಟಿದ್ದು. ವಿಜಯ ಕರ್ನಾಟಕದಲ್ಲಿ ಯಾರೂ ಕೇಳಿಲ್ಲ, ಕೊಟ್ಟಿದ್ದಾರೆಂದು ಹೇಳಿ ನಾನು ಕೊಟ್ಟಿದ್ದೇನೆ. ಅದು ಆದರೆ ಸೊಲ್ಲಾಪುರದಿಂದ ವಯಾ ಬಿಜಾಪುರ, ಬಾಗಲಕೋಟೆ. ಬೆಂಗಳೂರು, ಗದಗ್ ಅವರು ಬರುವುದಕ್ಕೆ ಅನುಕೂಲವಾಗುತ್ತದೆ. ಅದಕ್ಕೆ ಅದರ ಬಗ್ಗೆ ಹೆಚ್ಚಿನ ಮಹತ್ವವನ್ನು ಕೊಡಬೇಕು. ಇನ್ನೊಂದು ಎರಡು-ಮೂರು ವಿಷಯಗಳಿದ್ದವು. ನಾನು ಮಾತು ಕೊಟ್ಟಂತೆ ನನ್ನ ಮಾತನ್ನು ಇನ್ನೂಂದು ನಿಮಿಷದಲ್ಲಿ ಮುಗಿಸುತ್ತೇನೆ. ಇವತ್ತು ಈ ಸಮ್ಮಿಶ್ರ ಸರ್ಕಾರ ಧರ್ಮಸಿಗ್‌ರವರ ನಾಯಕತ್ವದಲ್ಲಿ ನಮ್ಮ ಗ್ರಾಮದ ಜನರ ಪರವಾಗಿ, ರೈತರ ಪರವಾಗಿ

ವಿಚಾರವಂತ ಸಿದ್ದರಾಮಯ್ಯನವರು ಇದ್ದಾರೆ. ಇವತ್ತು ತಾವು ಆರ್ಥಿಕ ಶಿಸ್ತನ್ನು ತಂದಿದ್ದೀರಿ. ಆರ್ಥಿಕ ಶಿಸ್ತು, discipline in the Finance Department, ಅನ್ನು ತಾವು ತಂದಿದ್ದೀರಿ. ಅದಕ್ಕಾಗಿ ನಾನು ತಮ್ಮನ್ನು ಅಭಿನಂದಿಸುತ್ತೇನೆ. ಮಾನ್ಯ ಸಿದ್ದರಾಮಯ್ಯನವರೇ, ನನ್ನ ಕಡೆಗೆ ಸ್ವಲ್ಪ ಗಮನವನ್ನು ಕೊಡಿ. I am concluding my speech. ನಾನು ನಿಮಗೆ ಬಹಳ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಆರ್ಥಿಕ ಶಿಸ್ತನ್ನು ತಾವು ತಂದಿದ್ದೀರಿ. ತೋರಿಸಿಕೊಟ್ಟಿದ್ದೀರಿ. ಇವತ್ತು ಬುದ್ಧಿ ಎಂಬುದು ಕೇವಲ ಜನಕ್ಕೆ ಮಾತ್ರ ಸೀಮಿತವಾಗಿಲ್ಲ. ಎಲ್ಲರಿಗೂ ಕೂಡ ಅದು ಇರುತ್ತದೆ. ಅದನ್ನು ನೀವು ತೋರಿಸಿಕೊಟ್ಟಿದ್ದೀರಿ. ಅದಕ್ಕೆ ನಾನು ನಿಮಗೆ ಅಭಿನಂದನೆಯನ್ನು ಸಲ್ಲಿಸುವುದರ ಜೊತೆಗೆ ಇನ್ನೊಂದು ಸಲಹೆಯನ್ನುಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ. ಆಡಳಿತ ಶಿಸ್ತನ್ನು ತಾವು ದಯಮಾಡಿ ತರಬೇಕು. ಅಡ್ಮಿನಿಸ್ಟ್ರೇಟಿವ್ ಡಿಸಿಪ್ಲಿನ್. ಬರೀ ಆರ್ಥಿಕ ಶಿಸ್ತನ್ನು ತರುವುದರ ಜೊತೆಗೆ ಅಡ್ಮಿನಿಸ್ಟ್ರೇಟಿವ್ ಡಿಸಿಪ್ಲಿನ್‌ನ್ನು ತರಬೇಕಾಗಿದೆ. ಏನಾಗಿದೆ ಎಂದರೆ ಯಾವುದೇ ಕಛೇರಿಗೆ ಹೋಗಿ, ಯಾರೂಬ್ಬರೂ ಸರಿಯಾಗಿ ಕೆಲಸ ಮಾಡುವುದಿಲ್ಲ. ಎಲ್ಲಾ ತಪ್ಪು ತಪ್ಪು ಕೆಲಸ. ಎಷ್ಟು ನಮ್ಮಲ್ಲಿ ಅಶಿಸ್ತು ಇದೆ ಎಂದರೆ ನಮ್ಮ ಬಜೆಟ್ ಬುಕ್‌ನಲ್ಲಿ ಒಂದು ಸಾವಿರ ಕೋಟಿ ರೂ ವಾದ ತಪ್ಪಾಗಿ ಪ್ರಿಂಟ್ ಮಾಡಿಬಿಟ್ಟಿದ್ದಾರೆ. ಅದಕ್ಕೇ ನಾನು ಅವತ್ತು ಹೇಳಿದ್ದು. ನೀವು ಕೊರತೆ ಬಜೆಟ್‌ಅನ್ನು ಮಂಡನೆ ಮಾಡುತ್ತಿದ್ದೀರಿ ಎಂದು ಹೇಳಿದ್ದು. ಅದು ಪ್ರಿಟಿಂಗ್ ಮಿಸ್ಟೇಕ್. ಅಷ್ಟೇ ಅಲ್ಲ, ಇನ್ನೂ ನಾಲ್ಕೈದು ಮಿಸ್ಟೀಕ್ ಇವೆ. ಇನ್ನು ಇವತ್ತು ನನಗೆ ಬಂದ ಉತ್ತರವನ್ನು ಕೊಟ್ಟಿದ್ದಾರೆ. ಆ ಉತ್ತರದಲ್ಲೂ ತಪ್ಪು. ಈ ಕ್ಲೆರಿಕಲ್ ಲೆವೆಲ್‌ನಲ್ಲಿ ಯಾರೂ ನೋಡುವುದಿಲ್ಲ. ಇವತ್ತು ನಮ್ಮ ಸಿಇಟಿ ಬಗ್ಗೆ ಉತ್ತರವನ್ನು ಕೊಟ್ಟಿದ್ದಾರೆ. ಆ ಉತ್ತರದಲ್ಲೂ ತಪ್ಪಿದೆ. ಶಿಸ್ತೇ ಇಲ್ಲ. ಯಾವ ಅಧಿಕಾರಿಗಳೂ ಕೂಡ ಆಫೀಸ್‌ನಲ್ಲಿ ಇರುವುದಿಲ್ಲ. ಬೇಕಾದರೆ ನೀವು ಚೆಕ್ ಮಾಡಿ. ಹತ್ತು ಗಂಟೆಗೆ ಯಾರೂ ಬಂದಿರುವುದೇ ಇಲ್ಲ.

ಉಪಾಧ್ಯಕ್ಷರು:– ನನ್ನ ವಾಚ್‌ನಲ್ಲಿ ಇನ್ನೂ 5 ನಿಮಿಷ ಜಾಸ್ತಿ ಇದೆ.

ಶ್ರೀ ಬಸವರಾಜ ರಾಯರೆಡ್ಡಿ:– ಆಯಿತು. In 30 seconds, I will finish. ಅದಕ್ಕೆ ನಮ್ಮ ಆಡಳಿತದಲ್ಲಿ ಶಿಸ್ತನ್ನು ತರಬೇಕು. ಮತ್ತು ಆಡಳಿತ ಸುಧಾರಣೆ ಏನು ಅಸಿಸ್ಟೆಂಟ್ ಕಮಿಷನರ್ ಪೋಸ್ಟ್, ಡಿವಿಜನಲ್ ಲೆವೆಲ್, ಇವೆಲ್ಲಾ ಪೋಸ್ಟ್‌ಗಳನ್ನು ತೆಗೆದುಹಾಕಿ ನೇರವಾಗಿ ಜಿಲ್ಲೆ ಮತ್ತು ರಾಜ್ಯಸರ್ಕಾರಕ್ಕೆ ನೇರವಾಗಿ ಆಡಳಿತ ನಡೆಸುವಂಥ ವ್ಯವಸ್ಥೆ ಆಗಬೇಕು. ಸೆಕ್ರೆಟೇರಿಯೆಟ್‌ನಲ್ಲಿ ಅಂಡರ್‌ಸೆಕ್ರೆಟರಿ, ಡೆಪ್ಯುಟಿ ಸೆಕ್ರಟರಿ, ಸೆಕ್ಷನ್ ಆಫೀಸರ್, ಅಬ್ಬಾ ನನಗಂತೂ ಸುಸ್ತು ಹೊಡೆದುಹೋಗಿದೆ. ಮಾನ್ಯ ಸಿದ್ದರಾಮಯ್ಯನವರೇ, ಯಾವುದಾದರೂ ಒಂದು ಆರ್ಡರ್ ತರಬೇಕಾದರೆ ನಾನು ಎಲ್ಲಿಂದ ಪ್ರಾರಭ ಮಾಡಬೇಕೆಂದರೆ ಕ್ಲರ್ಕ್, ಸೆಕ್ಷನ್ ಆಫೀಸರ್, ಟು ಅಂಡರ್ ಸೆಕ್ರೆಟರಿ. ಡೆಪ್ಯುಟಿ ಸೆಕ್ರೆಟರಿ, ಜಾಯಿಂಟ್ ಸೆಕ್ರೆಟರಿ, ಅಡಿಷನಲ್ ಸೆಕ್ರೆಟರಿ, ಸೆಕ್ರೆಟರಿ, ಆಮೇಲೆ ಮಂತ್ರಿಗಳು ನಾನು ಸುಸ್ತು ಹೊಡೆದಿದ್ದೇನೆ. ದಯಮಾಡಿ ಇದನ್ನು ಕಡಿಮೆ ಮಾಡಿ ಅಡ್ಮಿನಿಸ್ಟ್ರೇಟಿವ್ ಡಿಸಿಪ್ಲಿನ್‌ನ್ನು ತಂದರೆ ಈ ಸರ್ಕಾರಕ್ಕೆ ಇನ್ನು ಹೆಚ್ಚು ಹಿರಿಮೆ ಬರುತ್ತದೆ. none

more feather will be in your cap. ನೀವು ಅದರ ಬಗ್ಗೆ ಹೆಚ್ಚಿನ ಗಮನವನ್ನು ಹರಿಸುತ್ತೀರಿ ಎನ್ನುವ ಮಾತನ್ನು ಹೇಳಿ ಇವತ್ತು ಒಟ್ಟಾರೆ ಈ ಸರ್ಕಾರ ಧರ್ಮಸಿಂಗ್‌ರವರ ನಾಯಕತ್ವದಲ್ಲಿ ಅತ್ಯಂತ ಒಳ್ಳೆಯ ಬಜೆಟನ್ನು ಜನಪರವಾದ ಬಜೆಟ್‌ನ್ನು ವಿರೋಧಪಕ್ಷದವರೂ ಕೂಡ ಮೆಚ್ಚುವಂಥ ಬಜೆಟನ್ನು ಎಲ್ಲಾ ಜನರು ಮೆಚ್ಚುವಂಥ ಬಜೆಟ್‌ನ್ನು ಕೊಟ್ಟಿದ್ದೀರಿ. ಅದಕ್ಕೆ ನಿಮಗೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸಿ ಮತ್ತು ಈ ಬಜಟನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ. ಮತ್ತು ತಾವು ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೂ ಅಭಿನಂದನೆಯನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರ.

ಶ್ರೀ ಮಹದೇವ್(ಕೆ. ಆರ್. ನಗರ):- ಮಾನ್ಯ ಸಭಾಧ್ಯಕ್ಷರೆ, ಈ ಬಜೆಟ್ ಅಧಿವೇಶನದಲ್ಲಿ ಬಜೆಟ್ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ನನಗೆ ಅವಕಾಶ ಮಾಡಿಕೊಟ್ಟಿದಕ್ಕೆ ತಮಗೆ ವಂದಿಸುತ್ತೇನೆ. ಸಾಕಷ್ಟು ಜನ ಹಿರಿಕರು, ಅನುಭವಿಗಳು ಸಾಕಷ್ಟು ಜನ ಈ ಬಜೆಟ್ ಬಗ್ಗೆ ಚರ್ಚೆ ಮಾಡಿದ್ದಾರೆ. ಆ ಚರ್ಚೆಯಲ್ಲಿ ಸಾಧಕ ಬಾಧಕಗಳನ್ನೆಲ್ಲಾ ಎತ್ತಿ ಹಿಡಿದಿದ್ದಾರೆ. ಈ ಬಜೆಟ್‌ನ ಒಂದು ವಿಶೇಷ ಎನು ಎಂದರೆ ಪತ್ರಿಕೆಗಳು ಬಹಳಷ್ಟು ಈ ಬಜೆಟ್‌ನ ಪರವಾಗಿ ಮಾತನಾಡಿದ್ದಾರೆ. ಎಲ್ಲಾ ಪತ್ರಿಕೆಗಳೂ. ಎಡಿಟೋರಿಯಲ್ ಕೂಡ ಈ ಬಜೆಟ್‌ನ ವಿಚಾರದಲ್ಲಿ ಬಹಳಷ್ಟು ಹೊಗಳಿಕೆಯನ್ನು ತೋರಿಸಿದ್ದಾರೆ. ಆದರೆ ನಮ್ಮ ವಿರೋಧ ಪಕ್ಷದ ಕೆಲವು ಸ್ನೇಹಿತರು ಈ ಎಕನಾಮಿಕ್ ಮ್ಯಾನೆಜ್‌ಮೆಂಟ್ ಬಗ್ಗ, ಡೆಟ್ ಮ್ಯಾನೇಜ್ ಮೆಂಟ್ ಬಗ್ಗೆ ಡೆವಲಪ್‌ಮೆಂಟ್ ಸ್ಟ್ರಾಟಜಿ ಬಗ್ಗೆ ಸಾಕಷ್ಟು ಅವರದೇ ಆದ ಅಭಿಪ್ರಾಯಗಳನ್ನು ಹೇಳಿದ್ದಾರೆ. ನಾನು ಯಾವ ಎಕನಾಮಿಸ್ಟೂ ಅಲ್ಲ.: ಅಥವಾ ಬಹಳಷ್ಟು ಅನುಭವದ ರಾಜಕಾರಿಣಿ ಅಲ್ಲ. ಒಬ್ಬ ಲೇಮ್ಯಾನ್ ನೋಡುವ ದೃಷ್ಟಿಯಲ್ಲಿ ಬಜೆಟ್ ಅನ್ನು ನೋಡಿ ನನ್ನದೇ ಆದಂತಹ ಕೆಲವು ಅಭಿಪ್ರಾಯಗಳನ್ನು ಈ ಸದನದ ಮುಂದೆ ಮಂಡಿಸಲಿಕ್ಕೆ ಇಷ್ಟಪಡುತ್ತೇನೆ. ಒಬ್ಬ ಸಾಮಾನ್ಯ ಪೇಪರ್ ಓದತಕ್ಕ ನಾಗರೀಕ ಬಜೆಟ್ ಬಗ್ಗೆ ಎನು ಯೋಚನೆ ಮಾಡುತ್ತಾನೆ ಎನ್ನವ ದಿಕ್ಕಿನಲ್ಲೇ ನಾನು ಯೋಚನೆ ಮಾಡಿದ್ದೆನೆ. ಕೆಲವೇ ಕೆಲವು ಸಿಂಪಲ್ ಪ್ಯಾರಾಮೀಟರ್ಸ್ ಪ್ರಕಾರ ನೋಡಿದರೆ ಈ ಬಜೆಟ್ ಒಳ್ಳೆಯದು ಎನಿಸುತ್ತದೆ. ಕಾರಣ ಇಷ್ಟೇ. ನಿನ್ನೆ ಮಾನ್ಯ ಮಾಧುಸ್ವಾಮಿಯವರು ಒಂದು ಮಾತು ಹೇಳುತ್ತಿದ್ದರು. ಸರ್‌ಪ್ಲಸ್ ಬಜೆಟ್ ಕೊಟ್ಟರೂ ಅವರಿಗೆ ತಪ್ಪೇ. ನೀವು ಡಿಫಿಸಿಟ್ ಬಜೆಟ್ ಕೊಡಿ. ಡಿಫಿಸಿಟ್ ಬಜೆಟ್ ಕೊಟ್ಟು ಅದಕ್ಕೆ ಇನ್ನೂ ಡೆವಲಪ್‌ಮೆಂಟಿಗೆ ಎಂಫಸಿಸ್ ಕೊಡಬಹುದಾಗಿತ್ತು ಎನ್ನುವ ಮಾತನ್ನು ಅವರು ಆಡುತ್ತಾರೆ. ಈಗ ಕಾಮನ್ ಸೆನ್ಸ್ ಎನು ಹೇಳುತ್ತದೆ? ಕಳೆದ ವರ್ಷಕಿಂತ ಈ ವರ್ಷ ನಾನ್ ಡೆವಲಪ್‌ಮೆಂಟಲ್ ಎಕ್ಸ್‌ಪೆಂಡೀಚರ್ 62 ಪರ್ಸೆಟ್‌ನಿಂದ 45 ಪರ್‌ಸೆಟಿಗೆ ಇಳಿದಿದೆ. ಅಂದರೆ ಶೇಕಡಾ 17 ಪರ್ಸೆಟ್ ಕಡಿಮೆ ಆದಾಗ ಹೆಚ್ಚು ಕಡಿಮೆ 2.100 ಕೋಟಿರೂಯಷ್ಟು ಅಭಿವೃದ್ಧಿಗೆ ಹಣ ಸಿಕ್ಕಿದೆ. ಇದು ಖಂಡಿತವಾಗಿಯೂ ಆಶಾದಾಯಕ ಮತ್ತು ಅಭಿವೃದ್ಧಿಯ ದಿಕ್ಕಿನಲ್ಲಿ ಇರತಕ್ಕದ್ದು ಒಂದು. ಎರಡನೆಯದು ಬಜೆಟ್ ಅನ್ನು ಓದಿದಾಗ ಎಸ್ಟಿಮೇಟೆಡ್ ಗ್ರೋಥ್ ರೇಟಿ ಕೂಡ ಮೈನಸ್ ಇನ್‌ಫ್ಲೇಷನ್ 7.8 ಪರ್ಸೆಂಟ್ ತೋರಿಸುತ್ತಿದೆ.

ಅದೂ ಒಳ್ಳೆಯ ಮಳೆಗಳು ಆದ ಸಂದರ್ಭದಲ್ಲಿ ಯಾವ ಅತಿ ವೃಷ್ಟಿ, ಅನಾವೃಷ್ಟಿ ಆಗದೇ ಇದ್ದರೆ ಈ ಗ್ರೋತ್ ರೇಟ್ ಮೇಂಟೇನ್ ಆಗುತ್ತದೆ ಎಂದು ಆ ಭಗವಂತನ ಇಚ್ಚೆಯೂ ಇದರಲ್ಲಿ ಇದೆ ಎಂದು ಅಂದುಕೊಂಡು ಜೊತೆಗೆ ಟ್ಯಾಕ್ಸ್ ಕಲೆಕ್ಷನ್ ವಿಚಾರ. ಕರ್ನಾಟಕದಲ್ಲಿ ಅತೀ ಹೆಚ್ಚು 27 ಪರ್ಸೆಂಟ್ ಟ್ಯಾಕ್ಸ್ ಕಲೆಕ್ಷನ್ ಇದೆ. ಹಾಗಾಗಿ ಇದನ್ನೂ ನೋಡಿ. ಇದರ ಜೊತೆಗ ಸಾಮಾನ್ಯವಾಗಿ ಬಜೆಟ್ ಅಂದರೆ ಯಾವ ವಿಚಾರದಲ್ಲಿ ಮಾತನಾಡುತ್ತಾರೆ? ಬಜೆಟ್ ಎನ್ನಕ್ಕದ್ದು ಸರ್ಕಾರ ಇಂಟರ್‌ವೀನ್ ಆಗತಕ್ಕದ್ದು. ಸರ್ಕಾರ ನೇರವಾಗಿ ಯಾವ ನೆರವನ್ನು ಯಾವ ದಿಕ್ಕಿನಲ್ಲಿ ಕೊಡಬೇಕು? ಯಾವ ವರ್ಗಕ್ಕೆ ಕೊಡಬೇಕು, ಅದರ ಮೇಲೆ ಬಜೆಟ್‌ನ್ನು ನಾವು ತೂಕ ಹಾಕಿ ಪ್ರಶಂಸೆ ಮಾಡಬೇಕಾಗುತ್ತದೆ. ಇವತ್ತು ಸರ್ಕಾರದ ನೆರವು ಬಹಳ ಅಗತ್ಯ ಇರತಕ್ಕದ್ದು ಎರಡು ಸೆಕ್ಟಾರ್‌ಗೆ. ಒಂದು ಫಾರ್ಮಿಂಗ್ ಸೆಕ್ಟಾರ್ ಮತ್ತು ಇನ್ನೊಂದು ಸೋಶಿಯಲ್ ಸೆಕ್ಟಾರ್. ಅಂದರೆ ದುರ್ಬಲ ವರ್ಗಗಳ ಅಭಿವೃದ್ಧಿಯನ್ನು ದಿಕ್ಕಿನಲ್ಲಿ ಮತ್ತು ರೈತಾಪಿ ಜನಕ್ಕೆ ಬಹಳಷ್ಟು ಸರ್ಕಾರದ ನೆರವು ಅಗತ್ಯ ಇರತಕ್ಕಂಥದ್ದನ್ನು ನಾವೆಲ್ಲರೂ ನೋಡಿದ್ದೇವೆ. ಆ ದಿಕ್ಕಿನಲ್ಲಿ ಈ ಬಜೆಟ್ ತುಂಬಾ ಆಶಾದಾಯಕವಾಗಿದೆ. ಬಹಳಷ್ಟು ಆಶಾದಾಯಕವಾದಂತಹ ಬಜಡಟ್ ಆಗಿದೆ. ಇವತ್ತು ವೇವರ್ ಆಫ್ ಪೀನಲ್ ಇಂಟರಸ್ಟು ಇರಬಹುದು. 1750 ಕೋಟಿ ರೂಪಾಯಿ ಪವರ್ ಸೆಕ್ಟಾರ್ ಸಬ್ಸಿಡಿ ಇರಬಹುದು. ಮಾರ್ಕೆಟ್ ಇಂಟರ್‌ವೆನ್ಷನ್‌ಗೆ 200 ಕೋಟಿ ರೂ ದುಡ್ಡು ಇರಬಹುದು. ಎಸ್ಟೆಂಪ್ಷನ್ ಆಫ್ ಡ್ಯೂಟಿ ಆನ್ ರಿಜಿಸ್ಟ್ರೇಷನ್ ಆಫ್ ಆಲ್ ಅಗ್ರಿಕಲ್ಚರಲ್ ಕ್ರೆಡಿಟ್ ಇರಬಹುದು, ಕ್ವಾಲಿಟಿ, ಸೀಡ್ಸ್‌ಗೆ ಇರಬಹುದು. ಹೀಗೆ ಹಲವಾರು, ರೈತರಿಗೆ ನಹಳ ಅಗತ್ಯ ಇರತಕ್ಕಂಥ, ಫಾರ್ಮಿಂಗ್ ಸೆಕ್ಟಾರ್‌ಗೆ ಮತ್ತು ಸೋಶಿಯಲ್ ಸೆಕ್ಟಾರ್‌ಗೆ ಅಂದರೆ ದುರ್ಬಲ ವರ್ಗಗಳ ಅಭಿವೃದ್ಧಿ ದಿಕ್ಕಿನಲ್ಲಿ ಈ ಬಜೆಟ್ ಕಣ್ಣು ಹಾಯಿಸಿದೆ. ಹಣಕಾಸನ್ನೂ ಕೂಡ ಆ ದಿಕ್ಕಿನಲ್ಲೇ ಖರ್ಚು ಮಾಡುತ್ತಿರುವುದರಿಂದ ಖಂಡಿತವಾಗಲೂ ಕೂಡ ವಿರೋಧಿಗಳು ಏನೇ ಹೇಳಿದರೂ ಕೂಡ ಇದು ಒಂದು ಉನ್ನತವಾದಂತಹ ಬಜೆಟ್. ಬಹಳಷ್ಟು ಜನ ಅನುಭವ ಇರತಕ್ಕಂಥ ಹಿರಿಯ ರಾಜಕಾರಣಿಗಳು ನನ್ನ ಸಹೋದ್ಯೋಗಿಗಳು ಮಾತನಾಡಿದ್ದಾರೆ. ಬಹಳಷ್ಟು ಡೀಪ್ ಆಗಿ ಪ್ರತಿ ಒಂದು ಸೆಕ್ಟಾರ್ ಅನ್ನು ಬಹಳ ಕೂಲಂಕಷವಾಗಿ ಮಾನ್ಯ ರಾಯರೆಡ್ಡಿಯವರು ಒಂದೂವರೆ ಗಂಟೆಗಳ ಕಾಲ ಸುದೀರ್ಘವಾಗಿ ಚರ್ಚೆ ಮಾಡಿದ್ದಾರೆ. ಹಲವಾರು ವಿಚಾರಗಳನ್ನು ಅವರು ಹೇಳಿದ್ದಾರೆ. ಅವರು ಹೇಳಿರತಕ್ಕಂಥ ವಿಚಾರಗಳನ್ನು ಬಿಟ್ಟು ಬೇರೆ ಹೇಳುತ್ತೇನೆ. ಏಕೆಂದರೆ ಬಹಳಷ್ಟು ಸೆಕ್ಟಾರ್‌ಗಳ ಬಗ್ಗೆ ಕೂಡ ಆಲೋಚನೆ ಮಾಡತಕ್ಕಂಥ ನಮ್ಮದೇ ಅಭಿಪ್ರಾಯಗಳನ್ನು ಹೇಳಬಹುದು. ಆದರೆ ಸದನದ ಕಾಲ ಮಿತಿಯನ್ನು ಅರಿತುಕೊಂಡು ಯಾವ್ಯಾವ ಕ್ಷೇತ್ರದ ವಿಚಾರದಲ್ಲಿ ಅವರು ಮರೆತ್ತಿದ್ದಾರೆ ಅಥವಾ ಆ ವಿಚಾರ ಕಣ್ಣು ಹಾಯಿಸಿಲ್ಲ, ಆ ದಿಕ್ಕಿನಲ್ಲಿ ಮಾತ್ರ ನಾನು ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಮೊದಲು ಪ್ರಪ್ರಥಮವಾಗಿ ನಾನು ಸದನದ ಎಲ್ಲಾ ಪಕ್ಷದ ಸದಸ್ಯರ ಪರವಾಗಿ ಮಾನ್ಯ ಹಣಕಾಸು ಸಚಿವರಿಗೆ ಪ್ರತಿ ಒಬ್ಬ ಶಾಸಕರಿಗೂ 50 ಲಕ್ಷ ರೂಪಾಯಿ ಕ್ಷೇತ್ರ ನಿಧಿ ಕೊಟ್ಟಿರುವುದಕ್ಕೆ ಮೊದಲು ಪ್ರಶಂಸೆ ಮಾಡುತ್ತೇನೆ. ಏಕೆ ನಾನು ಇದನ್ನು

ಹೇಳುತ್ತೇನೆ ಎಂದರೆ ಶಾಸಕರು ನಾವು ಯಾವ ಮಟ್ಟಕ್ಕೆ ಇಳಿದಿದ್ದೇವೆ ಪ್ರಾಯಶಃ ಈ 50 ಲಕ್ಷ ರು ದುಡ್ಡು ಇಲ್ಲದೇ ಇದ್ದರೆ ಈ ವರ್ಷ ಪಂಚಾಯತಿಯ ಸದಸ್ಯರ ಹತ್ತಿರ ಹೋಗಿ ಮನೆಗಳನ್ನು ಕೇಳುವ ಪರಿಸ್ಥಿತಿಯನ್ನು ತಂದಿಡುತ್ತಿದ್ದರು. ಇಂತಹ ಸಂದರ್ಭದಲ್ಲಿ ಸದಸ್ಯರುಗಳ ಮಾನವನ್ನು ಕಾಪಾಡಿದ್ದಕ್ಕೋಸ್ಕರ ಮಾನ್ಯ ಅರ್ಥ ಸಚಿವರಿಗೆ ಪ್ರಶಂಸೆ ಮಾಡುತ್ತಾ ಹಲವಾರು ಇಲಾಖೆಗಳ ಬಗ್ಗೆ ಹಲವಾರು ಜನ ಮಾತನಾಡಿದ್ದಾರೆ. ನಾನು ಹೆಚ್ಚು ಇಲಾಖೆಗಳ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಕೆಲವೇ ಕೆಲವು ಇಲಾಖೆಗಳ ಬಗ್ಗೆ ಮಾತನಾಡಬೇಕಾಗುತ್ತದೆ. ಒಂದು ಹೆಲ್ತ್ ಸೆಕ್ಟಾರ್. ಇವತ್ತು ಏನೇ ಒಂದು ಒಳ್ಳೆಯ ಆರೋಗ್ಯಕರವಾದಂತಹ ಸಮಾಜ ಇರಬೇಕು ಎಂದರೆ ಇಲ್ಲಿರತಕ್ಕಂಥ ಆರೋಗ್ಯದ ಸುಧಾರಣೆ ಬಹಳಷ್ಟು ಆಗಬೇಕು ಎನ್ನುವುದು ಎಲ್ಲರ ಮಾತೂ ಕೂಡ. Quality citizens bring out quality society. ಅಂತ ಹೇಳಿ. ಹಾಗಾಗಿ ಮಾನ್ಯ ಅರ್ಥ ಸಚಿವರು ಕಳೆದ ಬಾರಿಗಿಂತ 18 ಪರ್ಸೆಂಟ್ ಜಾಸ್ತಿ ಹಣವನ್ನು ಕೊಟ್ಟಿದ್ದಾರೆ.332 ಕೋಟಿ ರೂಪಾಯಿಗಳನ್ನು ಆರೋಗ್ಯ ಕ್ಷೇತ್ರಕ್ಕೆ ನಿಗದಿ ಪಡಿಸಿದ್ದೀರಿ. ನೀವು ನಿಗದಿ ಪಡಿಸಿರತಕ್ಕದ್ದು ತುಂಬಾ ಒಳ್ಳೆಯದು. ಜೊತೆಗೆ ಅದರಲ್ಲಿ ನೀವು ಅಪ್‌ಗ್ರೇಡೇಷನ್ ಆಫ್ ಪಬ್ಲಿಕ್ ಹೆಲ್ತ್ ಯೂನಿಟ್ಸ್ ಗಳನ್ನು ಕೂಡ ಹೇಳಿದ್ದೀರಿ. ಬಹಳಷ್ಟು ಹಳ್ಳಿಗಳಲ್ಲಿ ಕ್ಲಾಸ್-4 ಎಂಪ್ಲಾಯಿಗಳು ಇಲ್ಲ. ಬಹಳಷ್ಟು ಹಳ್ಳಿಗಳಲ್ಲಿ ಮೆಡಿಸಿನ್ಸ್ ಇಲ್ಲ. ಬಹಳಷ್ಟು ಹಳ್ಳಿಗಳಲ್ಲಿ ಡಾಕ್ಟರ್ಸ್ ಕೂಡ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಪಬ್ಲಿಕ್ ಹೆಲ್ತ್ ಯೂನಿಟ್‌ಗಳನ್ನು ಅಪ್‌ಗ್ರೇಡೇಷನ್ ಮಾಡತಕ್ಕದ್ದು ಕೂಡ ಒಳ್ಳೆಯ ಕೆಲಸ. ಅದರ ಜೊತೆಗೆ ನಾವೆಲ್ಲರೂ ಕೂಡ ಒಂದು ದೊಡ್ಡ ಸಮಸ್ಯೆ, ಒಂದು ದೊಡ್ಡ ಅನಿಷ್ಟವಾಗಿರತಕ್ಕದ್ದು ಸಿಇಟಿ ವಿಚಾರ. ಪ್ರತಿ ವರ್ಷ ಕೂಡ ಎಕ್ಸಾಮಿನೇಷನ್ ಆದ ಸಂಧರ್ಭದಲ್ಲಿ. ಮತ್ತು ನಂತರ ಸಿಇಟಿಯ ಗೊಂದಲಗಳು. ಮಕ್ಕಳು ಓದತಕ್ಕವರು ಇವತ್ತು ಭವಿಷ್ಯದ ಬಗ್ಗೆ ಬಹಳ ಚಿಂತನೆ ಮಾಡತಕ್ಕಂಥ ಸಂದರ್ಭದಲ್ಲಿ ಪ್ರೊಫೆಷನಲ್ ಕೋರ್ಸಸ್ ಬಹಳ ಇರತಕ್ಕ ಸಂದರ್ಭದಲ್ಲಿ ತಾವು ಆರು ಮೆಡಿಕಲ್ ಕಾಲೇಜನ್ನು ಸ್ಯಾಂಕ್ಷನ್ ಮಾಡಿ ಈ ಒಂದು ಸಿಇಟಿಯ ಗೊಂಸಲವನ್ನು ನಿವಾರಣೆ ಮಾಡುವ ದಿಕ್ಕಿನಲ್ಲಿ ಬಹಳಷ್ಟು ಸಹಾಯ ಆಗುವ ರೀತಿಯಲ್ಲಿ ಮಾಡಿದ್ದೀರಿ. ಅದನ್ನೂ ಕೂಡ ನಾನು ಪ್ರಶಂಸೆ ಮಾಡುತ್ತೇನೆ. ತಾವು ಪ್ರತಿ ಒಂದು ಜಿಲ್ಲೆಯಲ್ಲೂ ಕೂಡ ಸಿಟಿ ಸ್ಕ್ಯಾನ್ ಯೂನಿಟ್‌ಗಳನ್ನು ಓಪನ್ ಮಾಡಬೇಕೆಂದು ಹೇಳಿದ್ದಿರಿ. ಬಹಳ ಸಂತೋಷ. ಆದರೆ ನಮ್ಮ ಅನುಭವ ಏನು ಆಂದರೆ ಪ್ರತಿ ಜಿಲ್ಲೆಯಲ್ಲಿ ಕೂಡ ಈ ಸಿಟಿ ಸ್ಕ್ಯಾನ್ ಯೂನಿಟ್ ಅನ್ನು ಓಪನ್ ಮಾಡಬೇಕು ಎನ್ನುತ್ತಿದ್ದೀರಿ, ಅದಕ್ಕೆ ಕ್ವಾಲಿಫೈಡ್ ಟೆಕ್ನೀಷಿಯನ್ಸ್ ಇರಬೇಕು. ನಾವು ಆರ್ಡಿನರಿ ಸ್ಕ್ಯಾನಿಂಗ್ ಮಿಷನ್‌ಗಳನ್ನು ಇಟ್ಟುಕೊಂಡಿದ್ದೇವೆ. ನಮ್ಮ ತಾಲ್ಲೂಕು ಆಸತ್ರೆಯಲ್ಲಿ ಟೆಕ್ನೀಷಿಯನ್ ಇಲ್ಲದೇ ಎರಡು ವರ್ಷ ಆಗಿದೆ. ಅದನ್ನು ಓಪನ್ ಮಾಡಿಲ್ಲ. ಯಾರೂ ಆಪರೇಟ್ ಮಾಡಿಲ್ಲ. ಇವತ್ತು ಬಹಳಷ್ಟು ಜನ ಪ್ರೈವೇಟ್ ಸೆಕ್ಟಾರ್‌ನಲ್ಲಿ ಅದು ರೇಡಿಯಾಲಜಿಸ್ಟ್‌ಗಳು ಇರಬಹುದು. ಅಥವಾ ಅನೇಸ್ಥೇಶಿಯಾದವರು ಇರಬಹುದು. ಹೀಗೆ ಬಹಳಷ್ಟು ಕ್ವಾಲಿಫೈಡ್ ಹ್ಯಾಂಡ್‌ಗಳನ್ನು ಪ್ರೈವೇಟ್ ಸೆಕ್ಟಾರ್ ಆಸ್ಪತ್ರೆಗಳು ತೆಗೆದುಕೊಳ್ಳುತ್ತಿದ್ದಾರೆ. ಇವತ್ತು ತಾವು ಡಿಸ್ಟ್ರಿಕ್ಟ್ ಹಾಸ್ಪಿಟಲ್‌ಗೆ ಸಿಟಿ ಸ್ಕ್ಯಾನ್

ಕೊಟ್ಟಿದ್ದರೂ ಕೂಡ ನಮ್ಮಲ್ಲಿ ಎಂಡಿ, ರೇಡಿಯಾಲಜಿಸ್ಟ್ ಇವತ್ತು ಕೂಡ ಶಾರ್ಟೇಜ್ ಇದ್ದಾರೆ. ಈ ಎಂಡಿ ರೇಡಿಯಾಲಜಿಸ್ಟ್‌ರನ್ನು ನೀವು ಇನ್‌ಸರ್ವೀಸ್‌ನಲ್ಲಿಯೇ ಹೆಚ್ಚು ಅವಕಾಶಗಳನ್ನು ಮಾಡಿ ಕೊಟ್ಟು, ನಮ್ಮ ಇನ್‌ಸರ್ವೀ ಡಾಕ್ಟರ್ಸ್‌ಗೆ ಎಂಡಿ ರೇಡಿಯಾಲಜಿಯಲ್ಲಿ ಅವಕಾಶ ಮಾಡಿಕೊಟ್ಟು ಇದನ್ನೆಲ್ಲ ಆಪರೇಟ್ ಮಾಡುವುದಕ್ಕೆ ನಿಮ್ಮ ಕಾರ್ಯಕ್ರಮದ ವ್ಯವಸ್ಥೆ ಮಾಡಬೇಕು. ಎಲ್ಲರೂ ಸಿಟಿ ಸ್ಕ್ಯಾನ್‌ಗೆ ಬೆಂಗಳೂರಿಗೆ ಬರುತ್ತಿದ್ದರು. ಆದರೆ ತಾವು ಎಲ್ಲಾ ಜಿಲ್ಲಾ ಕೇಂದ್ರಗಳಿಗೆ ಒಂದು ಸಿಟಿ ಸ್ಕ್ಯಾನ್ ಕೊಟ್ಟಿದ್ದೀರಿ. ಬಹಳಷ್ಟು ಸಂತೋಷ. ಆದರೆ ಆದನ್ನು ಆಪರೇಟ್ ಮಾಡುವ ಹ್ಯಾಂಡ್‌ಗಳನ್ನು ಕೊಡುವ ದಿಕ್ಕಿನಲ್ಲಿ ಕೂಡ ತಾವು ಕಾರ್ಯೋನ್ಮುಖವಾಗಬೇಕು ಎನ್ನುವ ಒಂದು ಮಾತು. ನಾನು ಹೆಲ್ತ್ ಸೆಕ್ಟಾರ್ ಜೊತೆಗೆ ಯಶಸ್ವಿನಿ ಕೂಡ ಕ್ಲಬ್ ಮಾಡಿ ಈ ವಿಚಾರದಲ್ಲಿ ಮಾತನಾಡಬೇಕಾಗಿದೆ. ಯಶಸ್ವಿನಿ ಕಾರ್ಯಕ್ರಮ ಇವತ್ತು ಒಂದು ವಿನೂತನವಾದಂತಹದು. ಕರ್ನಾಟಕ ರಾಜ್ಯ ಇಂಟ್ರಡ್ಯೂಸ್ ಮಾಡುರತಕ್ಕಂಥದ್ದು ವಿನೂತನವಾದ ಕಾರ್ಯಕ್ರಮ ಅದು ಕೇವಲ 60 ರೂಪಾಯಿಗಳಿಗೆ ವರ್ಷಕ ಒಬ್ಬನ ಆರೋಗ್ಯವನೆ ಬಂದುಕೆಟ್ಟರೂ ಕೂಡ, ಅವರ ಆರೋಗ್ಯ ತಪಾಸಣೆ ಮಾಡಿ ತಕ್ಕ ಸಂದರ್ಭದಲ್ಲಿ ಹೆಲ್ತ್ ಇನ್‌ಶ್ಯೂರೆನ್ಸ್ ಸರ್ಕಾರನೇ ಅದಕ್ಕೆ ಭಾಗಿ ಆಗಿ ಒಂದು ಯಶಸ್ವಿನಿ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದೆ. ಆದರೆ ಈ ಯಶಸ್ವಿನಿ ಕಾರ್ಯಕ್ರಮ ಒಳ್ಳೆಯದು ಆಗಿದ್ದರೂ ಸಹ ಅದಕ್ಕೆ ಒಂದು ಒಳ್ಳೆಯ ಯಶಸ್ಸು ಬರಬೇಕಾದರೆ ಬಹಳಷ್ಟು ಮಾರ್ಪಾಡುಗಳು ಯಶಸ್ವಿನಿ ಕಾರ್ಯಕ್ರಮದಲ್ಲಿ ಆಗಬೇಕು. ಏನು ಮಾರ್ಪಡು ಆಗಬೇಕು ಎಂದರೆ ಇನ್ನೂ ಹೊಸ ಹೊಸ ಖಾಯಿಲೆಗಳು ಇದರಲ್ಲಿ ಇನ್‌ಕ್ಲೂಡ್ ಆಗಬೇಕು.

ಇದು ಒಂದು. ಎರಡನೆಯದು ಇವತ್ತು ಆಸ್ಪತ್ರೆಗೆ ಹೋಗತಕ್ಕ ಯಶಸ್ವಿನಿಯ ಪೇಷೆಂಟ್‌ಗಳು ಏನು ಇದ್ದಾರೆ ಯಶಸ್ವಿನಿಯ ಕೇರ್‌ನಲ್ಲಿ ಯಾರು ಆಸ್ಪತ್ರೆಗೆ ಹೋಗಿದ್ದರೆ, ಅವರ ಒಂದು ಕಹಿ ಅನುಭವ ಏನು ಆಸ್ಪತ್ರೆಗಳಿಗೆ ಹೇಳುತ್ತಾರೆ. ನಿಮಗೆ ಇರತಕ್ಕ ಇನ್‌ಶ್ಯೂರೆನ್ಸ್ ಕವರ್ಸ್ ಬರೇ ಒಂದೇ ವಾಲ್ವ್‌ಗೆ ಕೊಡುತ್ತೆವೆ. ಎಡನೇ ವಾಲ್ವ್‌ಗೆ ನೀವು ದುಡ್ಡು ಕಟ್ಟಿ ಎಂದು ಹೇಳುತ್ತಾರೆ. ಕಾಲು ಮೂಳೆ ಮರಿದು ಹೋಗಿದ್ದರೆ ಒಂದೇ ಒಂದು ಮೂಳೆಗೆ ಕೊಡುತ್ತೇವೆ. ಟ್ಯೂಮರ್‌ಗೆ ಕೊಡುತ್ತೇವೆ, ಟ್ಯೂಬರ್‌ಗೆ ಕೊಡುವುದಕ್ಕೆ ಆಗುವುದಿಲ್ಲ ದಯವಿಟ್ಟು ಅದಕ್ಕೆ ದುಟ್ಟು ಕಟ್ಟಿ ಎಂದು ಹೇಳುತ್ತಾರೆ. ಹೀಗೆ It is not totally Comprehensive.

ಇವತ್ತು ತಂದೆ ಗಿಂತ ಮೊದಲು ಮಗ ಸಾಯುತ್ತಿದ್ದಾನೆ. ಹಾಗಾಗಿ, ಇಂಡಿವಿಜುಯಲ್‌ಗೆ ನೀವು 'ಯಶಸ್ವಿನಿ' ಕಾರ್ಯಕ್ರಮ ಹಮ್ಮಿಕೊಳ್ಳವ ಬದಲು, ಅದು family coverage ಆಗುವಂತೆ ಕ್ರಮ ಕೈಗೊಳ್ಳಬೇಕು. ಅದು family coverage ಆದಾಗ, ನಮ್ಮ BPL cards ತರಹ ಒಂದು head of the family ಇರುತ್ತದೆ, ಅವರ ಮನೆಯಲ್ಲಿ ನಾಲ್ಕೈದು ಜನರಿರುತ್ತಾರೆ. ಇಷ್ಟು ಜನರಿದಿದಾಗ ಅದನ್ನು family coverage ಮಾಡುವ ಮೂಲಕ ಹಣ ಹೆಚ್ಚಿಸಿದರೆ ಇದೊಂದು ರೀತಿಯಲ್ಲಿ social security ಒದಗಿಸಿಕೊಟ್ಟಂತಾಗುತ್ತದೆ. ಎರಡನೆಯದಾಗಿ, ನಮ್ಮ

ಅನುಭವದಲ್ಲಿ ಹೇಳುವುದಾದರೆ, ನಮ್ಮ ತಾಲ್ಲೂಕಿನಲ್ಲಿರುವ ಒಬ್ಬರು ಯಶಸ್ವಿನಿ ಯೋಜನೆಯಡಿ ಆಪರೇಶನ್ ಮಾಡಿಸಿಕೊಳ್ಳಲು ದೇವಿಶೆಟ್ಟಿ ಆಸ್ಪತ್ರೆಗೆ ಹೋಗಿದ್ದರು. ಅಲ್ಲಿ ಪರಿಸ್ಥಿತಿ ಏನಿದೆಯೆಂದರೆ, ಮೊದಲು ಕಾರ್ಡು ತೆಗೆದುಕೊಳ್ಳಲು ಸಮಸ್ಯೆ. ಕಾರ್ಡನ್ನು ಕೋ-ಅಪರೇಟಿವ್ ಇನ್ಸ್‌ಟಿಟ್ಯೂಷನ್‌ನವರು ಇಶ್ಯೂ ಮಾಡುತ್ತಾರೆ. ನಾವು Registrar of Co-operative Societiesಗೆ ಫೋನ್ ಮಾಡಿ ಕಾರ್ಡ್ ಬಗ್ಗೆ ವಿಚಾರಿಸಿದರೆ, ಇದ್ಯಾವುದೋ ಒಂದು independent Hyderabad based Company ಈ ಕಾರ್ಡನ್ನು ಇಶ್ಯೂ ಮಾಡುತ್ತಾರೆ. ಸರ್ಕಾರದವರಾದ ನೀವು ಕೊಡುವ ಈ ಸವಲತ್ತಿಗೆ ಯಾವುದೋ ಮತ್ತೊಂದು third party agencyಯ ಅಗತ್ಯವಿಲ್ಲ. ಮೂರನೆಯದಾಗಿ, ಯಶಸ್ವಿನಿ ಬೋರ್ಡ್‌ಗೆ ಹೈದರಾಬಾದ್‌ನಿಂದ ಹಣ ವಿತರಣೆಯಾಗುತ್ತದೆ. ಮಾನ್ಯ ಹಣಕಾಸು ಸಚಿವರು ಇದನ್ನು ಬಹಳ ಸೂಕ್ಷ್ಮವಾಗಿ ಗಮನಿಸಬೇಕು. ಯಶಸ್ವಿನಿ ಬೋರ್ಡ್ Hyderabad based company ಆಗಿದೆ. ಹೈದರಾಬಾದ್‌ನಿಂದ ಹಣ disburse ಆಗಬೇಕಾಗಿದೆ. ನಾವು Co-operative Societiesಗೆ ಮೂರು ಸಲ intervene ಮಾಡಿ ನಂತರ, ಒಂದು ವಾರ ಕಳೆದ ನಂತರ ಹಣ ಬಿಡುಗಡೆಯಾಗಿದೆ. ಜೊತೆಗೆ, ಹಣ ಬಿಡುಗಡೆಯಾಗದೆ ಆಸ್ಪತ್ರೆಯಲ್ಲಿ ಅವರು ಆಪರೇಶನ್ ಮಾಡುತ್ತಿಲ್ಲವೆಂಬ ವಿಷಯವನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ಇವೊತ್ತು ಹೆಸರು ಕೂಡ ಗೊತ್ತಿಲ್ಲ. ಆದರೆ totally, Yashaswini setupನಲ್ಲಿ ಒಂದು cropus fund ಮಾಡಿಕೊಂಡಿರುವುದರಿಂದ ಅದಕ್ಕೆ 12 ಕೋಟಿ ರೂಪಾಯಿಗಳಷ್ಟು ಹಣ ಸಂಗ್ರಹವಾಗಿದೆಯೆಂದು ಹೇಳುತ್ತಾರೆ. ಯಶಸ್ವಿನಿ ಯೋಜನೆ ಇನ್ನೂ ಬಹಳಷ್ಟು improvement ಆಗಬೇಕೆಂದು ಬಹಳ ಸೂಕ್ಷ್ಮವಾಗಿ ಹೇಳುತ್ತಿದ್ದೇನೆ.

ಇನ್ನು ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹೇಳುವುದಾರೆ, ಸದರಿ ಕ್ಷೇತ್ರಕ್ಕ 4,800 ಕೋಟಿ ರೂಪಾಯಿಗಳಷ್ಟು ಹಣ ಒದಗಿಸಿದ್ದೀರಿ. ಬಹಳಷ್ಟು ಅಗತ್ಯವಿರುವ ಪ್ರಾಥಮಿಕ ಶಿಕ್ಷಣಕ್ಕೆ, ಯಾವುದೇ ಒಂದು ಸಮಾಜ ಬೆಳೆಯಬೇಕಾದರೆ, ಒಳ್ಳೆಯ ಪ್ರಜೆಗಳಾಗಬೇಕಾದರೆ basic education foundation ಬಹಳ ಅಗತ್ಯವಾಗಿದೆ. ಹಾಗಾಗಿ, ಆ ದಿಕ್ಕಿನಲ್ಲಿ ಹೆಚ್ಚು ಹಣ ಕೊಟ್ಟು ವಿದ್ಯಾರಂಗ ಅಭಿವೃದ್ಧಿ ದಿಕ್ಕಿನತ್ತ ಸಾಗಲು ತಾವು ಸಹಾಯ ಮಾಡಿದ್ದೀರಿ. ಇದರಲ್ಲಿ ತಾವು ಒಂದು ಕಾರ್ಯಕ್ರಮ ಹಮ್ಮಿಕೊಂಡಿರುವುದರಿಂದ ಬಹಳ ಒಳ್ಳೆಯ ವಿಚಾರವಾಗಿದೆ. Fund for improving school teachhing Karnataka School Quality Assessment Organisation to be setup ಎಂದು ಮೂರು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ನಮ್ಮ ಅನುಭವದ ಪ್ರಕಾರ ಇದು ಬಹಳ ಅಗತ್ಯವಿತ್ತು. ಏಕೆ ಅಗತ್ಯವಿತ್ತು ಎಂದರೆ ನಮ್ಮ ಹಳ್ಳಿಯಲ್ಲಿರುವ ವಿದ್ಯಾರ್ಥಿಗಳು ಹೆಚ್ಚಾಗಿ ಅನುತ್ತೀರ್ಣರಾಗುತ್ತಿರುವುದು ಇಂಗ್ಲೀಷ್ ಮತ್ತು ಗಣಿತ ಶಾಸ್ತ್ರದಲ್ಲಿ. ಇವೊತ್ತಿಗೂ ಕೂಡ ಹಳ್ಳಿಯಲ್ಲಿರುವ ಒಬ್ಬ ಇಂಗ್ಲೀಷ್ ಮೇಷ್ಟ್ರಾಗಲಿ ಅಥವಾ ಗಣಿತ ಶಾಸ್ತ್ರದ ಮೇಷ್ಟ್ರಾಗಲಿ, ಅವರಿಗೆ ಅವೆರಡೂ ಬರುವುದಿಲ್ಲ! ಹಾಗಾಗಿ, ದಯವಿಟ್ಟು ತಾವು ಅದರ ಬಗ್ಗೆ ಏನು

ಗಮನಹರಿಸಿದ್ದೀರಿ, ಇದು ಬಹಳ ಒಳ್ಳೆಯ ಕೆಲಸ. ಆದರೆ ಇವೊತ್ತು ಇಂಗ್ಲೀಷ್ ಮತ್ತು ಗಣಿತ ಶಾಸ್ತ್ರದ ಮೇಷ್ಟ್ರಗಳನ್ನು ಹಳ್ಳಿಯಲ್ಲಿ train up ಮಾಡುವುದರ ಜೊತೆಗೆ ಎಲ್ಲಾ ಕಾರ್ಯಕ್ರಮಗಳನ್ನು ಸಿಟಿಯಿಂದ ಹಳ್ಳಿಗೆ ತಳ್ಳುತ್ತಿದ್ದೀರಿ. ತಾವು ವೈದ್ಯರುಗಳನ್ನು ಗ್ರಾಮಾಂತರ ಪ್ರದೇಶಗಳಿಗೆ ನೇಮಕ ಮಾಡುತ್ತಿದ್ದೀರಿ. ಸಿಟಿಯಲ್ಲಿರುವ ಇಂಗ್ಲೀಷ್ ಮತ್ತು ಗಣಿತ ಶಾಸ್ತ್ರಗಳನ್ನು ಬಹಳಷ್ಟು ತಿಳಿದುಕೊಂಡಿರುವ ಮೇಷ್ಟುಗಳನ್ನು ಕಡ್ಡಾಯವಾಗಿ ಗ್ರಾಮಾಂತರ ಪ್ರದೇಶಗಳಿಗೆ ನೇಮಕ ಮಾಡುವ ವ್ಯವಸ್ಥೆಯನ್ನು ತಾವು ಪ್ರಾರಂಭಮಾಡಬೇಕು. ನಾನು ಇದಕ್ಕೆ ಏಕೆ ಹೇಳುತ್ತಿದ್ದೇನೆಂದರೆ, ಮೊದಲೇ ಮೇಷ್ಟುಗಳಿಗೆ ಇಂಗ್ಲೀಷ್ ಮತ್ತು ಗಣಿತ ಶಾಸ್ತ್ರ ಗೊತ್ತಾಗುವುದಿಲ್ಲ. ಎಸ್.ಎಸ್.ಎಲ್.ಸಿ. ಯಲ್ಲಿ maximum number of failures ಆಗುತ್ತಿರುವುದು English and Mathematicsನಲ್ಲೇ. ಹಾಗಾಗಿ, ತಾವು ಕಡ್ಡಾಯವಾಗಿ ಬೆಂಗಳೂರು, ಮೈಸೂರು, ಹುಬ್ಬಳ್ಳಿ ಹೀಗೆ ಜಿಲ್ಲಾ ಕೇಂದ್ರಗಳಲ್ಲಿರುವ ಇಂಗ್ಲೀಷ್ ಮತ್ತು ಗಣಿತ ಶಾಸ್ತ್ರದ ಮೇಷ್ಟ್ರಗಳೇನಿದ್ದಾರೆ, ಅವರುಗಳನ್ನು ತಾವು ಹಳ್ಳಿಗಳಿಗೆ ಕಡ್ಡಾಯವಾಗಿ ಕಳುಹಿಸು ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು. ಜೊತೆಗೆ, aquality of English and mathematics teaching ಕೂಡ improve ಆಗಬೇಕು. ಈ ಮೂರು ಕೋಟಿ ರೂಪಾಯಿಗಳಷ್ಟು ಹಣ ಅದಕ್ಕೆ ಸಹಾಯವಾಗುತ್ತದೆಂಬ ಮಾತನ್ನು ಹೇಳುತ್ತಿದ್ದೇನೆ.

ಇವೊತ್ತು ನಾವೆಲ್ಲರೂ ತೀಳಿದಿರುವಂತೆ, ಕೇಂದ್ರ ಸರ್ಕಾರದ 'ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿ ರಾಜ್ಯಕ್ಕೆ ಬರುತ್ತಿದೆ. ಮಾನ್ಯ ಅರ್ಥ ಸಚಿವರು ಇದನ್ನು ಸೂಕ್ಷ್ಮವಾಗಿ ಗಮನಿಸಬೇಕು. ಸರ್ವ ಶಿಕ್ಷಣ ಅಭಿಯನ ಮೊದನೆ ಮಾಡಿ ಹಮ್ಮಿಕೊಳ್ಳಲಾಗಿರುವ ಎಲ್ಲಾ ಕಾರ್ಯಗಳಿಗೂ ಕೂಡ ಅವರು ಹಣ ಕೊಡುತ್ತಾರೆ. ಆದರೆ, building maintenanceಗೆ ಮಾತ್ರ ಹಣ ಕೊಡುವುದಿಲ್ಲ. ಅವರು ಕಾಂಪೌಂಡ್ ಕಟ್ಟಲು, ಶೌಚಾಲಯ ನಿರ್ಮಿಸಲು ಮತ್ತು ಬೋರ್‌ವೆಲ್ ಕೊರೆಸಲು ಹಣ ಕೊಡುತ್ತಾರೆ. ಹೊಸ ಪ್ರದೇಶಗಳಲ್ಲಿ ಅಥವಾ ಹೈದರಾಬಾದ್-ಕರ್ನಾಟಕ ಪ್ರದೇಶದ ಬಗ್ಗೆ ನನಗೆ ಗೊತ್ತಿಲ್ಲ. ಹಳೆಯ ಮೈಸೂರು ಭಾಗದಲ್ಲಿ ನನ್ನ ಅನುಭವ ಏನೆಂದರೆ, ನಮ್ಮಲ್ಲಿ ಬಹಳಷ್ಟು ಭಾಗಗಳು ರಾಜರ ಆಳ್ವಿಕೆಗೊಳಪಟ್ಟಿದ್ದ ಕಾರಣದಿಂದ ಬಹಳ ಹಿಂದೆ ಕೆ.ಆರ್.ನಗರ ತಾಲ್ಲೂಕಿನಲ್ಲಿ ಪ್ರಥಮಿಕ ಶಿಕ್ಷಣ ಶಾಲೆಗಳು ಪ್ರಾರಂಭವಾಗಿದೆ. ಇವೆಲ್ಲವೂ ಕೂಡ ಹೆಂಚಿನ ಮನೆಗಳಾಗಿವೆ ಮತ್ತು ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದಲ್ಲಿ ಅದನ್ನೆ include ಮಾಡಿ ಸುಂದರವಾದ ಕಾಂಪೌಡ್ ಕಟ್ಟಿದ್ದಾರೆ, ಜೊತೆಗೆ, ಬೋರ್‌ವೆಲ್ ಮತ್ತು ವಾಟರ್ ಟ್ಯಾಂಕ್ ನಿರ್ಮಿಸಿದ್ದಾರೆ. ಆದರೆ, ಗೋಡೆ ಮಾತ್ರ ಅದೇ! leaking ಗೋಡೆ. ಆ ಹೆಂಚಿನ ಮನೆ ಬಿದ್ದಹೋಗಿದೆ. ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದಲ್ಲಿ ನಿರ್ವಹಣೆಗೆ ದುಡ್ಡು ಕೊಡುತ್ತಿಲ್ಲ. ಈ ವರ್ಷ ಐದು ಸಾವಿರ ರೂಪಾಯಿಗಳನ್ನು ಮಾತ್ರ ಕೊಡುತ್ತಿದ್ದಾರೆ. ಇವೊತ್ತು ಬಹಳಷ್ಟು ಶಾಲೆಯ ನೆಲ ಕುಸಿದುಹೋಗಿದೆ. ಶಾಲಾ ಅಭಿವೃದ್ಧಿ ಮಂಡಳಿ ರಚಿಸುವ ಮೂಲಕ 4–5–7=6 ಕೊಠಡಿಗಳಿರುವ ಶಾಲೆಗಳಿಗೆ ಕೇವಲ ಐದು ಸಾವಿರ ರೈಪಾಯಿಗಳನ್ನು ನಿರ್ವಹಣೆಗೆ

ಕೊಡುತ್ತಿದ್ದೀರಿ. ಈ ಕುರಿತಂತೆ ನಮ್ಮ ತಾಲ್ಲೂಕಿನಲ್ಲಿ ಒಂದು ಅಂದಾಜು ವೆಚ್ಚವನ್ನು ಮಾಡಿಸಿದಾಗ, ಬಹಳ ತುರ್ತಾಗಿ ನಿರ್ವಹಣೆಗೆ ಅಗತ್ಯವಿರುವ ಶಾಲೆಗಳು ನನ್ನ ತಾಲ್ಲೂಕು ಒಂದರಲ್ಲೇ ಸುಮಾರು 800 ಕೊಠಡಿಗಳಿಗಿಂತಲೂ ಹೆಚ್ಚಿದೆ. ರಿಪೇರಿ ಕೆಲಸಕ್ಕೆ ಒಂದು ಕೋಟಿ ರೂಪಾಯಿಗೂ ಮೇಲ್ಪಟ್ಟು ಹಣ ಬೇಕಾಗಿದೆ. ಆದುದರಿಂದ, ಮಾನ್ಯ ಅರ್ಥ ಸಚಿವರು ದಯವಿಟ್ಟು ತಾವು ಈಗಾಗಲೇ ಪಿ.ಯು. ಕಾಲೇಜುಗಳಲ್ಲಿ additional class roomsಗೆ RIDFನಿಂದ ಹತ್ತು ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಕ್ಲಾಸ್‌ರೂಮ್‌ಗಳನ್ನು ಕಟ್ಟಿಸುತ್ತಿದ್ದೀರೆಂದು ಹೇಳುತ್ತಿದ್ದೀರಿ. ಇದು ಬಹಳ ಒಳ್ಳೆಯ ಕೆಲಸ. ಅದರ ಜೊತೆಗೆ RIDFನಲ್ಲೂ ಪ್ರತಿಯೊಬ್ಬ ಶಾಸಕರ ಕ್ಷೇತ್ರದಲ್ಲಿರುವ ಪ್ರತಿಯೊಂದು ಶಾಲಾ ಕಟ್ಟಡದ ಮೇಂಟನೆನ್ಸ್ ಪ್ರಬ್ಲಮ್ ಇದೆ. ಎಲ್ಲರಿಗೂ ಕೂಡ ಹಣದ ಅಗತ್ಯವಿದೆ. ಆದುದರಿಂದ, RIDFನಲ್ಲೋ, ನಬಾರ್ಡ್‌ನಲ್ಲೋ, ಮತ್ಯಾವುದೋ ಸ್ಕೀಮ್‌ನಲ್ಲಿ ಇದನ್ನು ತೆಗೆದುಕೊಳ್ಳಬೇಕು ಏಕೆಂದರೆ ಬಹಳಷ್ಟು ಹಣ ಬೇಕಾಗಿರುವುದರಿಂದ ತಾವು ಈ ದಿಕ್ಕಿನಲ್ಲಿ ಕಾರ್ಯೋನ್ಮುಖರಾಗಬೇಕು. ಪ್ರತಿ ವರ್ಷ ಪ್ರತಿ ಶಾಸಕರ ಕ್ಷೇತ್ರಕ್ಕೂ ಶಾಲಾ ಕಟ್ಟಡದ ರಿಪೇರಿಗೆ ಕನಿಷ್ಠವೆಂದರೂ 25 ಲಕ್ಷ ರೂಪಾಯಿಗಳನ್ನು ಕೊಡಲೇಬೇಕಾಗುತ್ತದೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಇದನ್ನು ಎಲ್ಲಾ ಪಕ್ಷಗಳಲ್ಲಿರುವ ಸದಸ್ಯರು ಒಪ್ಪಿಕೊಳ್ಳತಕ್ಕಂಥದ್ದು. ನಮ್ಮ ಅನುಭವದಲ್ಲಿ, ಮಕ್ಕಳು ಸುರಕ್ಷಿತವಾದ ಒಂದು ವಾತಾವರಣದಲ್ಲಿ ಅವರು ವಿದ್ಯಾಭ್ಯಾಸ ಮಾಡುತ್ತಿಲ್ಲವೆಂದು ತಂದೆ-ತಾಯಿಗಳಲ್ಲಿ ಆತಂಕ ನೆಲೆಸಿದೆ. ಇದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಇನ್ನು power sector ಕುರಿತಂತೆ ಹೇಳುವುದಾದರೆ, ಈ ಬಗ್ಗೆ ಸದಸ್ಯರಾದ ಮಾನ್ಯ ರಾಯರೆಡ್ಡಿಯವರು ಬಹಳ ಆಳವಾಗಿ ಮಾತನಾಡಿದರು. Hydel Power Project ಅನ್ನು ಮೊದಲು ಪ್ರಾರಂಭಿಸಿದ ಹೆಗ್ಗಳಿಕೆ ನಮ್ಮ ರಾಜ್ಯದ್ದಾಗಿದೆ. ಪ್ರಾಯಶಃ, ಅಂದು ಪ್ರಾರಂಭಿಸಿದ Sharavati Pumping Station ಮೊದಲನೆಯದಾಗಿತ್ತು. ಅಂದು Hydel Power Project ಪ್ರಾರಂಭಿಸಿದ ನಾವೆಲ್ಲರೂ surplusನಲ್ಲಿದ್ದೇವು. ಆದರೆ, ಇವೊತ್ತು ನಾವು Hydel power ಅನ್ನು ಬಹಳಷ್ಟು ಉಪಯೋಗಿಸುತ್ತಿದ್ದರೂ ನಮಗೆ ಸಾಕಾಗುತ್ತಿಲ್ಲ. ಜೊತೆಗೆ, ನಮ್ಮಲ್ಲಿ Thermal Power Plant, Diesel Power Plant ಇದೆ. ಇಷ್ಟೆಲ್ಲಾ ಇದ್ದರೂ, ಇವೊತ್ತು ಪವರ್‌ಸೆಕ್ಟಾರ್‌ನ production and consumption ನಾವು deficit ಇರುವುದಾಗಿ ತಾವು ಬಜೆಟ್‌ನಲ್ಲಿ ಪ್ರಸ್ತಾಪಿದ್ದೀರಿ. Pwith commissioning of so many projects, the power position will improve ಎಂದು ಹೇಳಿದ್ದೀರಿ. It will not reach optimum ಎಂದು ತಾವು ಹೇಳಿಲ್ಲ. `It will improve' ಎಂದರೆ, ಇನ್ನೂ shortage ಇರುತ್ತದೆಂದೇ ಅರ್ಥ. ಹಾಗಾಗಿ, ತಾವು ಅದರಲ್ಲಿ ಒಂದು clause ಹಾಕಿದ್ದೀರಿ. 'ನಾವು private power producers ಕೆಲವು ಕಡೆಗಳಲ್ಲಿ ಈಗಾಗಲೇ ಕಾರ್ಯೋನ್ಮುಖರಾಗಿದ್ದಾರೆ. ಆದರೆ, Power Purchase Agreement ನಲ್ಲಿ ಬಹಳಷ್ಟು ಗೊಂದಲಗಳಾಗಿವೆಯೆಂದು ನಾವು ಪತ್ರಿಕೆಗಳಲ್ಲಿ

ಓದುತ್ತಿದ್ದೇವೆ. ಇದಕ್ಕೆ ಸೂಕ್ಷ್ಮವಾಗಿ ಇನ್ನೊಂದು alternate ಆಗಿ ಅರ್ಥ ಸಚಿವರಿಗೆ ನಾನು ಏನು asuggest ಮಾಡಬಲ್ಲೆನೆಂದರೆ, ಪವರ್ ಸೆಕ್ಟಾರ್‌ನಲ್ಲಿ ಇವೊತ್ತು ನಾವೆಲ್ಲರೂ ಕೂಡ ಪತ್ರಿಕೆಗಳಲ್ಲಿ ಬಂದಿರುವುದನ್ನು ಓದಿದ್ದೇವೆ. ಹಿಮಾಲಯದಲ್ಲಿ ಹೊಸ ಹೊಸ innovative technologyಗಳಿಂದ, local water ಅಂದರೆ, ಬಹಳಷ್ಟು force ಅಲ್ಲ. ಸ್ವಲ್ಪ force ಇದ್ದರೂ ಸಹ ಅದಕ್ಕೆ ಕೆಲವು downstream mechanismನಲ್ಲಿ ಕೆಲವು adijutment ಮಾಡಿ ಅಲ್ಲಿ ಚಿಕ್ಕ ಚಿಕ್ಕ ಮೋಟಾರುಗಳ ಯುನಿಟ್‌ಗಳಿಂದ hydel power ಅನ್ನ ಅಲ್ಲಿಂದ tap ಮಾಡುವುದನ್ನು ನಾವೆಲ್ಲರೂ hill station ಗಳಲ್ಲಿ ನೋಡಿದ್ದೇವೆ. ಇವೆಲ್ಲವೂ successful experiment ಎಂದು ಈ ವಿಚಾರವನ್ನು ನಾವೆಲ್ಲರೂ ಓದಿದ್ದೇವೆ. ಆದುದರಿಂದ, ಮಾನ್ಯ ಅರ್ಥ ಸಚಿವರ ಗಮನಕ್ಕೆ ತರುವುದೇನೆಂದರೆ, ಎಲ್ಲೆಲ್ಲಿ ನೀರಿನ ಅವಕಾಶವಿದೆಯೋ, ಹರಿಯುವ ನಿರೀದೆಯೋ, ಅಲ್ಲೆಲ್ಲಾ ದಯವಿಟ್ಟು ಇದನ್ನು experimental basisನಲ್ಲಾದರೂ ಈ ವರ್ಷ ತಾವು ಪ್ರಾರಂಭಿಸಬೇಕಾಗುತ್ತದೆ. ಜೊತೆಗೆ, ಎಲ್ಲೆಲ್ಲಿ ನೀರಿನ ಕೊರತೆ ಇದೆಯೋ, ಅಲ್ಲೆಲ್ಲಾ ebio-mass ನೀರು ಕೂಡ electricity produce ಮಾಡುವ ತಂತ್ರಜ್ಞಾನವಿದ್ದು, ಪಕ್ಕದ ರಾಜ್ಯವಾದ ತಮಿಳುನಾಡಿನಲ್ಲಿ ಇದನ್ನು ಬಹಳ ಯಶಸ್ವಿಯಾಗಿ ಮಾಡಿ ತೋರಿಸಿದ್ದಾರೆ. ಆ ದಿಕ್ಕಿನಲ್ಲಿ ತಾವು ಕಾರ್ಯೋನ್ಮುಖರಾಗಬೇಕು ಎಂಬ ಮಾತನ್ನು ಹೇಳುತ್ತೇನೆ. ಇವತ್ತು ಹಳ್ಳಿಯಲ್ಲಿ ಬಹಳಷ್ಟು impeths ಅನ್ನು ನಾವು irural developmentಗೆ ಕೊಡುತ್ತಿದ್ದೇವೆ. ಎಲ್ಲವನ್ನೂ ಕೂಡ ನಾವು ವಾಪಸ್ಸು ಸಮುದಾಯಕ್ಕೇ ತಲುಪಿಸುತ್ತಿದ್ದೇವೆ. ಸರ್ಕಾರದ ಹಣದ best keepersಸಮುದಾಯವೇ ಎನ್ನತಕ್ಕಂಥ ತೀರ್ಮಾನಕ್ಕೆ ನಾವು ಬಂದಿದ್ದೇವೆ. ಈಗಾಗಲೇ ತಮಿಳುನಾಡಿನ ಪಂಚಾಯಿತಿಗಳಲ್ಲಿ ಈ ಒಂದು experiment ಅನ್ನು ಮಾಡಿದ್ದಾರೆ. ಹಲವಾರು ಕಡೆಗಳಲ್ಲಿ ಬಯೋಮಾಸ್‌ನಿಂದ ಕರೆಂಟ್ ಅನ್ನು ಪ್ರೊಡ್ಯೂಸ್ ಮಾಡಿದ್ದಾರೆ. ಕೆಲವು ಕಡೆ ಹೈಡಲ್ ಪವರ್ ಅನ್ನೂ ಕೂಡ running water ನಿಂದ ಮಾಡಿದ್ದಾರೆ. ಆ ದಿಕ್ಕಿನಲ್ಲಿ ತಾವು power sector ನಲ್ಲಿ ಆಲೋಚನೆ ಮಾಡುತ್ತೀರಿto fillelp the gap ಎನ್ನುವ ಮಾತನ್ನು ಹೇಳುತ್ತೇನೆ. ಇನ್ನು ಬಹಳಷ್ಟು ಪ್ರಮುಖವಾದಂತಹ ವಿಚಾರ ಏನೆಂದರೆ, ಈ Hirticulture sector. ಮಾನ್ಯ ಅರ್ಥ ಸಚಿವರು ಸೂಕ್ಷ್ಮವಾಗಿ ಗಮನಿಸಬೇಕು. ಈಗ ಪ್ರತಿಯೊಬ್ಬರೂ Horticulture Minister ಆದ ತಕ್ಷಣ,

ಇಸ್ರೇಲ್‌ಗೆ ಎಂದು ಪ್ರಾರಂಭ ಮಾಡುತ್ತಾರೆ. ಪ್ರತಿಯೊಬ್ಬ Horticulture Minister ಕೂಡ ಇಸ್ರೇಲ್ ಎಂದು visit ಹಾಕುತ್ತಾರೆ. ಇಸ್ರೇಲ್ ಮಾದರಿಯಲ್ಲಿ ನಾವು irrigation ಮಾಡುತ್ತೆವೆ ಎಂದು ಹೇಳುತ್ತಾರೆ. ಆದರೆ ಈಗ ಇದು ಹಳೆಯ ಕಥೆ. Israel model has now become outdated. Now Horticulture emphasis is on Holland model, Dutch model. ಇಸ್ರೇಲ್ ಮಾಡೆಲ್ ಅನ್ನು ಆಂಧ್ರ ಪ್ರದೇಶಗಳಲ್ಲಿ ಈಗಾಗಲೇ ಹಲವಾರು ಕಡೆಗಳಲ್ಲಿ ಮಾಡಿದ್ದಾರೆ. ಅದು ಹಲವಾರು ಕಡೆ failture ಆಗಿದೆ. ಆದರೆ

ಇವತು horticulture emphasis ಇರತಕ್ಕಂಥದ್ದು ಡಚ್ ಮಾಡೆಲ್‌ನಲ್ಲಿ. ಈ ಡಚ್ ಮಾಡೆಲ್ ಯಾವುದು ಎಂದರೆ, cut flowers and fruits export ಮಾಡತಕ್ಕಂಥದ್ದು ತಾವೇ ಸೂಕ್ಷ್ಮವಾಗಿ ``Horticulture accounts for the 15% of the cultivable land, but accounts for 40% of the agticulture income" ಎಂದು ತಮ್ಮ ಬಜೆಟ್ಟಿನಲ್ಲಿ ಹೇಳಿದ್ದೀರಿ. ಅಂದರೆ ಇನ್ನೂ 85% cultivable land gives an income of only 60%. 85% cutivable area ನಿಂದ ನಮಗೆ ಬರತಕ್ಕಂಥ income 60% ಮಾತ್ರ. ಆದರೆ 15% land ನಲ್ಲಿ ನಮಗೆ ಬರತಕ್ಕಂಥ horticulture 40%. Today, it is a global village. ಇವತ್ತು ಪ್ರಪಂಚ ಚಿಕ್ಕದಾಗುತ್ತಿದೆ. ಬೆಳಿಗ್ಗೆ ಎದ್ದರೆ, ಇಂಟರ್‌ನೆಟ್ ಮುಖೇನ ನೋಡಿದರೆ, ಅಮೆರಿಕಾದಲ್ಲಿ ಏನಾಗುತ್ತಿದೆ, ಲಂಡನ್‌ನಲ್ಲಿ ಏನಾಗುತ್ತಿದೆ ಎಂಬುದನ್ನು ಒಂದು ನಾಬ್‌ನಲ್ಲಿ ನಾವು ಚೆಕ್ ಮಾಡುತ್ತಿರಬಹುದು. ದಯವಿಟ್ಟು ಈ ನಮ್ಮ Horticulture Departmentನವರು ಈ ನಮ್ಮ ನವರು ಈ ' ಇಸ್ರೇಲ್ ಮಾಡೆಲ್ ' ಅನ್ನುವುದನ್ನು ತಲೆಯಿಂದ ತೆಗೆದು ಬಿಡಿ. ಈ ಇಸ್ರೇಲ್ ಮಾಡೆಲ್ ಈಗೆಲ್ಲೂ ನಡೆಯುತ್ತಿಲ್ಲ ಈಗೆಲ್ಲಾ ಡಚ್ ಮಾಡೆಲ್ ನಡೆಯುತ್ತಿದೆ. ಮಾನ್ಯ ಸಭಾಧ್ಯಕ್ಷರೇ, ಇವತ್ತು ಕರ್ನಾಟಕದಲ್ಲಿ ಐದು Aiportಗಳನ್ನು ಮಾಡುತ್ತಿದ್ದಾರೆ. ಕೆಲವು upgrade ಆಗುತ್ತಿವೆ, ಕೆಲವು ಹೊಸದಾಗಿ Aiportಗಳನ್ನು ಆರಂಭಿಸುತ್ತಿದ್ದಾರೆ. ರಾಜ್ಯ ಸರ್ಕಾರದವರೂ ಕೂಡ ಅವರಿಗೆ ಲ್ಯಾಂಡ್ ಕೊಟ್ಟು 20 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಮಿಕ್ಕಿದ ಹಣ ನೆರವಿನ ರೂಪದಲ್ಲಿ ಕೇಂದ್ರ ಸರ್ಕಾರದಿಂದ ಇದಕ್ಕಾಗಿ ಬರುತ್ತಿದೆ. ಈ Aiportಗಳ ಕಾರ್ಯ ಏಕೆ tspeed up ಆಗಬೇಕು ಎಂದರೆ, ಅಲ್ಲಿ ಒಂದು cold storage facility ಇಟ್ಟುಕೊಂಡು, fruit ಮತ್ತು flower export ಮಾಡಲಿಕ್ಕೆ ಇದರಿಂದ ಅನುಕೂಲವಾಗುತ್ತದೆ. ಯಾವ fertilisers ಅನ್ನು ಬಳಸಿದರೂ ಕೂಡ cultivable ಆಗದಂತಹ ಬಂಜರು ಭೂಮಿ ಏನಿದೆ, ಲ್ಯಾಂಡ್‌ನಲ್ಲಿ organic manure ನಿಂದ ಬೆಳೆದಂತಹ ಸಾಕಷ್ಟು ಪದಾರ್ಥಗಳಿಗೆ ಹೊರ ದೇಶಗಳಲ್ಲಿ ಸಾಕಷ್ಟು ಬೇಡಿಕೆ ಇದೆ. ಇಂತಹ organic farming ಅನ್ನು ಕೂಡencourage ಮಾಡಬೇಕಾಗುತ್ತದೆ. ದಯವಿಟ್ಟು ಇಸ್ರೇಲ್ ಮಾಡೆಲ್ ಅನ್ನು 5 ತಾಲ್ಲೂಕಿನಲ್ಲಿ ಮಾಡುವುದು, 3 ತಾಲ್ಲೂಕಿನಲ್ಲಿ ಮಾಡುವುದು ಅನ್ನುವುದನ್ನು ಬಿಡಿ. ತಾವು ಆ ದಿಕ್ಕನ್ನು ಬಿಟ್ಟು ಡಚ್ ಮಾಡೆಲ್‌ಗೆ ತಾವೆಲ್ಲಾ stick on ಆಗಬೇಕಾಗುತ್ತದೆ. ಎಂಬುದನ್ನು ನಾನು ಸೂಕ್ಷ್ಮವಾಗಿ ಹೇಳಬಯಸುತ್ತೇನೆ. Agriculture researchಗೆ ತಾವು 27 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. Agriculture researchನಲ್ಲಿ ಏನಾಗುತ್ತದೋ, ಬಿಡುತ್ತದೋ ಎಂದು ನಮಗಂತೂ ಗೊತ್ತಿಲ್ಲ. ಇವತ್ತು 27 ಕೋಟಿ ರೂಪಾಯಿಗಳಲ್ಲಿ ಎಲ್ಲಿಯೂ ಕೋಡ accountability ಇಲ್ಲ. 2-3 ವರ್ಷಗಳ ಹಿಂದೆ ನುಸಿ ರೋಗ ಬಂತು. ಅದು ಬಂದಾಗ, ಆ ನುಸಿ ರೋಗಕ್ಕೆ ಪರಿಹಾರ ಕಂಡು ಹಿಡಿಯಲು ಲಕ್ಷಾಂತರ ರೂಪಾಯಿಗಳನ್ನು researchಗೆ ಹಾಕಲಾಯಿತು. ಆದರೆ ಯಾವ research ನಿಂದಲೂ ಕೂಡ ನುಸಿ ಪೀಡೆಯನ್ನು

ನಾವು ಫೈನಲ್ಲಾಗಿ ಹೋಗಲಾಡಿಸಿದ್ದೇವೆ ಎಂದು ಹೇಳುವುದಕ್ಕಾಗಲಿಲ್ಲ. ಆದರೆ ನಾವು ಮೊನ್ನೆ ಈ ಬಗ್ಗೆ Assurance committee ನಲ್ಲಿ ಚರ್ಚೆ ಮಾಡಿದಾಗ, ಇದೇ Horticulture Department ನ ಅಧಿಕಾರಿಗಳನ್ನು ನಾವು "ಈಗ ನುಸಿ ರೋಗ ಹೇಗಿದೆ?" ಎಂದು ಕೇಳಿದೆವು. ಆಗ ಅವರು " Sir, our research has been very successfyl:ನುಸಿ ರೋಗ ಈಗ ಹೋಗಿ ಬಿಟ್ಟಿದೆ" ಎಂದು ಹೇಳಿದರು. ನಾನು immediately intervene ಆಗಿ "ನೀವು ನುಸಿ ರೋಗವನ್ನು ಹೋಗಿಸಿಲ್ಲ. ಮಳೆ ಬಂತು, ನುಸಿ ರೋಗ ತಾನೇ ತಾನಾಗಿ ಮಾಯವಾಯಿತು, ನಿಮ್ಮ researchನಿಂದ ಅದು ಹೋಗಲಿಲ್ಲ" ಎಂದು ನಾನು ಸೂಕ್ಷ್ಮವಾಗಿ ಒಂದು ಮಾತು ಹೇಳಿದೆ. ದಯವಿಟ್ಟು ತಾವು ಈ agriculture research ಗೆ ಹಣವನ್ನೇನು ಕೊಡುತ್ತಿದ್ದಿರೋ, ಈ ಹಣದ ಸದುಪಯೋಗವಾಗಬೇಕು. ಜೊತೆಗೆ ....

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಭಾಷಣ ಮಡುತ್ತಿದ್ದಾರೆ. ಈ ಸದನಸಲ್ಲಿ ಇಲ್ಲಿ ಬರೆದುಕೊಳ್ಳುವವರನ್ನು ಬಿಟ್ಟರೆ ಬೇರೆ ಯಾರಾದರೂ ಅವರ ಮಾತುಗಳನ್ನು ಕೇಳುತ್ತಿದ್ದಾರೆಯೇ? ನಾನು ನಿಮ್ಮನ್ನೇನೂ ಆಕ್ಷೇಪಣೆ ಮಾಡುತ್ತಿಲ್ಲ. ಇದು ಯಾವ ಪುರುಷಾರ್ಥಕ್ಕೆ? ಅವರು ಯಾರಿಗೋಸ್ಕರ ಭಾಷಣ ಮಾಡುತ್ತಿದ್ದಾರೆ? ನಾನು ಆಗಿನಿಂದಲೂ ನೋಡುತ್ತಿದ್ದೇನೆ, ಅವರೊಬ್ಬರು ಮಾತ್ರ ಭಾಷಣ ಮಾಡುತ್ತಿದ್ದಾರೆ. ಇಡೀ ಸದನ ಸುತ್ತಲೂ ಹೇಗಿದೆ ಎಂಬುದನ್ನು ಒಮ್ಮೆ ಮಾನ್ಯ ಉಪಾಧ್ಯಕ್ಷರು ನೋಡಬೇಕು.

ಡಾ : ಕೆ. ಅನ್ನದಾನಿ :- ನಾವೆಲ್ಲ ಭಾಷಣವನ್ನು ಕೇಳುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ :- ತಾವು ಯಾವ ರೀತಿಯಲ್ಲಿ ಅವರ ಭಾಷಣವನ್ನು ಕೇಳುತ್ತಿದ್ದೀರಿ ಎಂಬುದು ನನಗೆ ಗೊತ್ತಿದೆ. ನೀವೆಲ್ಲಾ ಹೇಗೆ ನಿಂತಿದ್ದಿರಿ ಎಂಬುದು ನನಗೆ ಗೊತ್ತು ನೀವೆಲ್ಲಾ ಸಂತೆಯಲ್ಲಿ ನಿಂತ ಹಾಗೇ ನಿಂತಿದ್ದಿರಿ. ಹೀಗಿರುವಾಗ ನೀವು ಹೇಗೆ ಅವರ ಭಾಷಣ ಕೇಳುವುದು ಸಾಧ್ಯ? ನಾನು ಆಗಿನಿಂದಲೂ ನಿಮ್ಮ ಪರಿಸ್ಥಿತಿಯನ್ನು ನೋಡುತ್ತಿದ್ದೇನೆ. ಇದೇನು ಸದನವೇ? ಮಾನ್ಯ ಉಪಾಧ್ಯಾಕ್ಷರೇ, ದಯವಿಟ್ಟು ತಾವು ಸದನವನ್ನು ಮುಂದಕ್ಕೆ ಹಾಕಿ. ಇದು ಸರಿಯಿಲ್ಲ. ಮಾನ್ಯ ಸದಸ್ಯರು ಏನು ಮಾತನಾಡುತ್ತಿದ್ದಾರೆ ಎಂಬುದನ್ನೇ ಯಾರೂ ಕೇಳುತ್ತಿಲ್ಲ. ಒಂದೊಂದು ಕಡೆ ಒಂದೊಂದು ಗುಂಪು ತಮ್ಮ ತಮ್ಮಲ್ಲೇ ಚರ್ಚಿಸುತ್ತಿದೆ. ಇವರನ್ನು ಮತ್ತು ಹಣಕಾಸಿನ ಸಚಿವರನ್ನು ಬಿಟ್ಟರೆ........;

ಶ್ರೀ ಸಿದ್ಧರಾಮಯ್ಯ :- ಗಂಭೀರವಾಗಿ ಮಾನ್ಯ ಸದಸ್ಯರು ಹೇಳುವುದನ್ನೆಲ್ಲಾ ನಾವು ಕೇಳುತ್ತಿದ್ದೇವೆ. ಅವರು ಏನೇನು ಸಲಹೆಗಳನ್ನು ಕೊಟ್ಟಿದ್ದಾರೋ, ಏನೇನು ಪ್ರಸ್ತಾಪ ಮಾಡಿದ್ದರೋ, ಏನೇನು ಟೀಕೆಗಳನ್ನು ಮಾಡಿರುತ್ತಾರೋ ಅದೆಲ್ಲಕ್ಕೂ ಉತ್ತರವನ್ನು ನಾನೇ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಉಪಾಧ್ಯಕ್ಷರೇ, ನಾನು ತಮಗೆ ಕೈಮುಗಿದು ಕೇಳಿಕೊಳ್ಳುತ್ತೇನೆ. ತಾವು ದಯವಿಟ್ಟು ಸ್ವಲ್ಪ ಎದ್ದು ನಿಂತುಕೊಂಡು ಸದನದ ಕಡೆ ಕಣ್ಣು ಹಾಯಿಸಿ.

ಶ್ರೀ ಸಿದ್ಧರಾಮಯ್ಯ :– ಮಾನ್ಯ ವಾಟಾಳ್ ನಾಗರಾಜ್ ತರಹ ಬಹಳ 100% ಇಲ್ಲಿ ಯಾರೂ ಕುಳಿತುಕೊಳ್ಳುವುದಿಲ್ಲ. He stands No.1. ಏನಾದರೂ ಹೆಚ್ಚು ಕಾಲ Assembly attend ಮಾಡಿದವರ್‍ಯಾರಿಗಾದರೂ ಬಹುಮಾನ ಕೊಡುವುದಾದರೆ, ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಮೊದಲನೇ ಬಹುಮಾನ ಕೊಡಬೇಕಾಗುತ್ತದೆ. ಅದು ಬೇರೆ ಯಾರಿಗೂ ಸಿಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ :– ಆ ಪ್ರಶ್ನೆ ಅಲ್ಲ.

ಶ್ರೀ ಸಿದ್ಧರಾಮಯ್ಯ :– ಎಂ.ಎಲ್.ಎ.ಗಳಿಗೆಲ್ಲಾ ಏನಾಗಿದೆ ಎಂದರೆ, ಗ್ರಾಮ ಪಂಚಾಯಿತಿ ಚುನಾವಣೆಗಳು, ಸೊಸೈಟಿಗಳ ಚುನಾವಣೆಗಳು ಈಗ ನಡೆಯುತ್ತಿವೆ, ಹಾಗಾಗಿ ಸದನದಲ್ಲಿ ಅವರ ಸಂಖ್ಯೆ ಸ್ವಲ್ಪ ವಿರಳವಾಗಿದೆ. ಬಹಳ ಜನ ಆ ಚುನಾವಣೆಗಳಲ್ಲಿ involve ಆಗಿದ್ದಾರೆ. ಇದು ಈ ಸಾರಿ ಸ್ವಲ್ಪ ಅನಿವಾರ್ಯವಾಗಿ ಬಿಟ್ಟಿದೆ. ಆದರೂ ಎಂ.ಎಲ್.ಎ.ಗಳು ಸದನಕ್ಕೆ ಬರಬೇಕು. ಮಾನ್ಯ ಸದಸ್ಯರು ಕಳಕಳಿ ನನಗೆ ಅರ್ಥವಾಗುತ್ತದೆ. ಎಂ.ಎಲ್.ಎ.ಗಳು ಅಸೆಂಬ್ಲಿಯಲ್ಲಿ ಇರಬೇಕು, ಇಲ್ಲಿ ನಡೆಯುವ ಡಿಸ್ಕಷನ್‌ನಲ್ಲಿ ಭಾಗವಹಿಸಬೇಕು, ಅನೇಕ ವಿಚಾರಗಳ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಬೇಕು, ನಿಮ್ಮಂತಹ ಸೀನಿಯರ್ ಮಾತನಾಡುವಾಗ ಕೇಳಬೇಕು, ಕಲಿತುಕೊಳ್ಳಬೇಕು ಎಂಬುದನ್ನು ನಾನೂ ಒಪ್ಪುತ್ತೇನೆ, ಇದೆಲ್ಲಾ ಇರಬೇಕಾಗುತ್ತದೆ. ಸ್ವಲ್ಪ improve ಆಗುತ್ತಾರೆ ಬಿಡಿ.

ಶ್ರೀ ವಾಟಾಳ್ ನಾಗರಾಜ್ :– ಅವರ ಭಾಷಣವನ್ನು ಯಾರು ಕೇಳುತ್ತಿಲ್ಲವಲ್ಲಾ ಎಂದು ನಮಗೆ ನೋವಾಗುತ್ತಿದೆ. ನಮಗೆ ಒಂದು ರೀತಿಯಲ್ಲಿ ಅಗೌರವವಾಗುತ್ತಿದೆ. ಅಲ್ಲೊಂದು ಗುಂಪು ಇಲ್ಲೊಂದು ಗುಂಪು ಎಂಬಂತೆ ನಾವು ಕುಳಿತಿದ್ದೇವೆಲ್ಲಾ ಎಂದು ನಮಗೇ ಬೇಜಾರಾಗುತ್ತದೆ. ಅವರವರ ಚರ್ಚೆ ನಡೆಯುತ್ತಿದೆ. ...

ಶ್ರೀ ಎಸ್. ಎಸ್. ಪಾಟೀಲ್ :– ತಾವು ಈಗ ಹೋಗಬೇಕಾಗಿದೆ ಎಂದೆನಿಸುತ್ತಿದೆ.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಪಾಟೀಲರೇ, ದಯಮಾಡಿ ಬೇರೇನೂ ಹೇಳುವುದಕ್ಕೆ ಹೋಗಬೇಡಿ. ನೀವು ಸತ್ಯ ಮಾತನಾಡುತ್ತಿಲ್ಲ, ದಯವಿಟ್ಟು ತಾವು ಕುಳಿತುಕೊಂಡು ಬಿಡಿ. ಎಲ್ಲೋ ಒಂದು ಕಡೆ ಇದು ಸರಿಯಾಗಿ ಕಾಣುತ್ತಿಲ್ಲ. ನಿಜಕ್ಕೂ ಇದು ಅಗೌರವ. ಮಾನ್ಯ ಸದಸ್ಯರಿಗೆ ತಮ್ಮ ಭಾಷಣ ಮುಂದುವರೆಸಲು ತಾವು ನಾಳೆ ಅವಕಾಶ ಕೊಡಿ, ಅವರು ಈ ಕಷ್ಟದಲ್ಲಿ ಮಾತನಾಡುವುದು ಬೇಡ.

ಡಾ : ಎಂ. ಸಿ ಸುಧಕಾರ್ :– ಬಹಳಷ್ಟು ನಮ್ಮ ಸ್ನೇಹಿತರು ಅವರ ಭಾಷಣವನ್ನು ಕೇಳುತ್ತಿದ್ದೇವೆ. ಅವರಿಗೆ ಪ್ರೋತ್ಸಾಹವನ್ನು ಕೊಡುತ್ತಿದ್ದೇವೆ. ಅವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಮಾನ್ಯ ವಾಟಾಳ್‌ರವರು ಏಕೆ ಈ ರೀತಿಯಾಗಿ ಹೇಳುತ್ತಿದ್ದಾರೋ, ನಮಗೆ ಅರ್ಥವಾಗುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ :– ಅವರು ಈ ಕಷ್ಟದಲ್ಲಿ ಮಾತನಾಡುವುದು ಬೇಡ. ನಾಳೆ ಅವರಿಗೆ ಅವಕಾಶ ಕೊಡಿ.

ಉಪಾಧ್ಯಕ್ಷರು :- ಮಹದೇವ್‌ರವರೇ ಬೇಗ ಮುಗಿಸಿ.

ಶ್ರೀ ವಾಟಾಳ್ ನಾಗರಾಜ್ :- ನಾನು ಕೆಳಗಿದ್ದೇ ಈ ಪರಿಸ್ಥಿತಿ. ನೀವು ಮೇಲೆ ಕುಳಿತು ಸ್ವಲ್ಪ ಈ ದುರಂತ ಕಥೆಯನ್ನು ನೋಡಿ.

ಉಪಾಧ್ಯಕ್ಷರು :- ನಿಮ್ಮ ಸಮಸ್ಯೆ ನಮಗೆ ಅರ್ಥವಾಯಿತು. ಸದನದಲ್ಲಿ ಮಹದೇವ್‌ರವರು ಭಾಷಣ...

ಶ್ರೀ ವಾಟಾಳ್ ನಾಗರಾಜ್ :- ಇದೊಂದು ದುರಂತ. ಇದು ಪ್ರಜಾತಂತ್ರ ವ್ಯವಸ್ಥೆಗೇ ಅಪಾಯ. ಪ್ರಜಾಸತ್ತೆಗೆ ಇದು ಅಪಾಯಕಾರಿ, ಅಪಮಾನ, ಅಗೌರವ, ಅನ್ಯಾಯ ಎಂದು ನಾನು ಹೇಳುತ್ತೇನೆ. ನೀವು ಏನು ಬೇಕಾದರೂ ಮಾಡಿಕೊಳ್ಳಿ.

ಉಪಾಧ್ಯಕ್ಷರು :- ಮಹದೇವ್‌ರವರೇ, ತಾವು ಮತನಾಡಿ.

ಶ್ರೀ ಎಸ್. ಎಸ್. ಪಾಟೀಲ್ :- ಕೋರಂ ಇದೆ.

ಶ್ರೀ ವಾಟಾಳ್ ನಾಗರಾಜ್ :-ನಾವು ಎಷ್ಟು ಜನ ಇರಬೇಕು ಎಂಬ ಸಂಖ್ಯೆ ಪ್ರಶ್ನೆ ಇದಲ್ಲ. ಕೋರಂ ಇಟ್ಟುಕೊಂಡು ಭಾಷಣ ಮಾಡುವ ವಿಚಾರ ಬೇರೆ. ನಾವು ಸದನಕ್ಕೆ ಬರುವುದು ನಮ್ಮ ಪೂರ್ವ ಜನ್ಮ ಪುಣ್ಯವೇ ಸರಿ. ಈ ದೇಶದಲ್ಲಿ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸಂವಿಧಾನ ಬದ್ಧವಾಗಿ ದೇಶಕ್ಕೆ ಲೋಕಸಭೆಯಾದರೆ, ರಾಜ್ಯಕ್ಕೆ ಶಾಸನ ಸಭೆ. ಇದರ ಶಕ್ತಿಯನ್ನು ನಾವೆಲ್ಲರೂ ಸೇರಿ ಕಳೆಯುವುದಾದರೆ, ಅದಕ್ಕೆ ಯಾವುದಾದರೂ ಒಂದು ರೂಪದಲ್ಲಿ ಈ ಸದನ ....

ಉಪಾಧ್ಯಕ್ಷರು :- ದಯವಿಟ್ಟು ಕುಳಿತುಕೊಳ್ಳಿ. ಸದನದಲದಲ್ಲಿ dicipline ಇರಬೇಕೆಂಬ ದೃಷ್ಟಿಯಿಂದ ಮಾನ್ಯ ಸದಸ್ಯರು ಈ ಮಾತುಗಳನ್ನು ಹೇಳುತ್ತಿದ್ದಾರೆ. ಮಾನ್ಯ ನಾಗರಾಜ್‌ರವರು ಹೇಳುತ್ತಿರುವುದಲ್ಲಿ ತಪ್ಪೇನೂ ಇಲ್ಲ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ ಕಾಗೇರಿ :- ಶಾಸಕರು ಹೆಚ್ಚಿನ ಸಮಯ ಸದನದಲ್ಲಿ ಇರಬೇಕು. ಸದನದ ಘನತೆ ......

ಶ್ರೀ ವಾಟಾಳ್ ನಾಗರಾಜ್ :- 12 ಗಂಟೆಯಾದರೂ ಸರಿ ನಾನು ಇಲ್ಲಿ ಕುಳಿತುಕೊಂಡಿರುತ್ತೇನೆ. ತಾವು ಎಷ್ಟು ಹೊತ್ತು ಸದನ ನಡೆಸುತ್ತೀರೂ ಅಷ್ಟು ಹೊತ್ತು ನಾನು ಇಲ್ಲಿ ಕುಳಿತಿರುತ್ತೇನೆ. ಅದರಲ್ಲೇನೂ ಎರಡನೇ ಅಭಿಪ್ರಾಯ ಇಲ್ಲ.

ಉಪಾಧ್ಯಕ್ಷರು :- ನಿಮ್ಮ ತವಕ ಅರ್ಥವಾಯಿತು.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಉಪಾಧ್ಯಕ್ಷರೇ, ನಾವೇಕೆ ಚುನಾವಣೆಯನ್ನು ಗೆಲ್ಲುತ್ತೇವೆ? ನಾವು ಗೆದ್ದು ಬರತಕ್ಕಂಥದ್ದು ಎಲ್ಲಿಗೆ? ಆಸನ ಸಭೆಗೆ ಚುನಾಯಿತರಾಗಲು ನಮಗೆ ಮತ ಕೊಡಿ ಎಂದು ಕೇಳಿ ನಾವು ಇಲ್ಲಿಗೆ ಗೆದ್ದು ಬಂದಿರಿತ್ತೇವೆ. ಜನತೆ ನಮಗೆ ಶಾಸನ ಸಭೆಗೆ ಹೋಗಲು ಮತ ಕೊಟ್ಟಿರುತ್ತಾರೆ, ಮೂರನೇ ಮಹಡಿಯಲ್ಲಿ ಓಡಾಡುವುದಕ್ಕಲ್ಲ. ಹೊರಗಡೆ ಹೋಗಿ ತಿರುಗಾಡುವುದಕ್ಕಲ್ಲ. ಈ ಶಾಸನ ಸಭೆಗೆ ಮತ ಕೊಟ್ಟಿರುವುದು, ಇಲ್ಲಿ ನಡೆಯಬೇಕು ಶಾಸನ ಸಭೆ. ಇದು ಮೊದಲನೆಯ ಆಯವ್ಯಯ. ಗಂಭೀರವಾಗಿ ಕೆಳುತ್ತಾ ಕುಳಿತಿದ್ದಾರೆ. ನಾವೆಷ್ಟು

ಸಲಹೆಗಳನ್ನು ಕೊಡಬೇಕು, ಚಿಂತನೆಯಾಗಬೇಕು, ಮಂಥನವಾಗಬೇಕು, ಅವ್ಯಾವೂ ಕಾಣುತ್ತಿಲ್ಲವೆ? ಏನೋ ಒಂದು ತರಹ ಇದು ಸರಿಯಲ್ಲ ನೀವು ಅಂತದ್ರಲ್ಲೂ ನಡೆಯಲಿ, ನಡೆಯಲಿ ಎಂದರೆ ಏನಿದು? ಅರ್ಥವಾಗುವುದಿಲ್ಲ, ಇದು ತಮಗೆ ಸೇರಿದ್ದು ಆ ಲವಲವಿಕೆಯೂ ಇಲ್ಲ, ಎಲ್ಲೋ ಒಂದು ಕಡೆ ಸತ್ಯಕ್ಕೆ ಪ್ರಾಮಣೀಕತೆಗೆ ಅಪಚಾರವಾಗುತ್ತಿದೆ, ಸುಮ್ಮನೆ ಏನೋ ಮಾತನಾಡುವುದು.

ಶ್ರೀ ಮಹದೇವ (ಕೃಷ್ಣರಾಜನಗರ):– ಮಾನ್ಯ ವಾಟಾಳ್‌ನಾಗರಾಜ್‌ರವರು ನನ್ನ ಬಗ್ಗೆ ಇಟ್ಟಿರುವ ಕಳಕಳಿಗೆ ಧನ್ಯವಾದಗಳು. ಆದರೆ ಪ್ರಾಯಶಃ ಭಾರತ ದೇಶದ್ದೇ ಎಲ್ಲಾ ಕಛೇರಿಗಳಲ್ಲಿ ಇದೋಂದು ಖಾಯಿಲೆ ಎಂದೆನಿಸುತ್ತದೆ, ಆಫೀಸ್ ಪ್ಯಾಕಪ್ ಟೈಮ್ ಎಂದರೆ ಆಫೀಸ್ ಐದು ಗಂಟೆಗೇ ನಾಲ್ಕೂಮುಕ್ಕಾಲು ಗಂಟೆಗೆ ಕ್ಲೋಸ್ ಆಗುತ್ತದೆ. ಆದ್ದರಿಂದ ಶಾಸಕರೂ ಈ ಸಂಪ್ರದಾಯಕ್ಕೆ ಹೊರತುಯಪಡಿಸಿದವರಲ್ಲ ಎನ್ನುವ ಮಾತನ್ನು ಹೇಳುತ್ತಾ ವಾಟರ್ ಶೆಡ್ ಡೆವಲಪ್‌ಮೆಂಟ್ ಪ್ರೋಗ್ರಾಮ್‌ನ್ನು ಇನ್‌ಟೆನ್‌ಸಿಫೈ ಮಾಡುತ್ತೇನೆಂದು ಮಾನ್ಯ ಅರ್ಥ ಸಚಿವರು ಹೇಳಿದರು. ಈ ಪ್ರೋಗ್ರಾಮ್ ಬಹಳಷ್ಟು ವರ್ಷಗಳಿಂದ ನಡೆದುಕೊಂಡು ಬಂದಿದೆ. ನಾವು ಹಣವನ್ನು ಬಿಡುಗಡೆ ಮಾಡುವುದಕ್ಕೂ ಮೊದಲು ಇಷ್ಟು ವರ್ಷಗಳಿಂದ ವಾಟರ್ ಶಡ್ ಡೆವಲಪ್‌ಮೆಂಟ್‌ಗೆ ಏನೇನು ದುಡ್ಡು ಹೋಗಿದೆ. ಏನೇನು ಕೆಲಸವಾಗಿದೆ ಎಂಬ ಬಗ್ಗೆ ಸೂಕ್ಷ್ಮವಾಗಿ ನೋಡಿ ಅನಂತರ ಹಣವನ್ನು ಬಿಡುಗಡೆ ಮಾಡಬೇಕು. ನನ್ನ ಅನುಭವವನ್ನು ಹೇಳುವುದಾರೆ, ಮೊನ್ನೆ ನಾನು ನನ್ನ ತಾಲ್ಲೂಕಿನ ಕೆ.ಡಿ.ಪಿ ಸಭೆಯನ್ನು ಮಾಡಿದೆ. ನಾನು ಆ ಸೋಶಿಯಲ್ ಫಾರೆಸ್ಟ್‌ರಿ ಮತ್ತು ವಾಟರ್‌ಶೆಡ್ ಡೆವಲಪ್‌ಮೆಂಟ್‌ನವರನ್ನು ಕರೆದು ಏನೇನು ಮಾಡಿದ್ದೀರಾ ಒಂದು ಕೇಳಿದೆ. ಅದಕ್ಕೆ ಸಾಯಿಲ್ ಕನ್‌ಸರ್ವೇಷನ್‌ನವರು 48 ಕಿಲೋಮೀಟರ್ ಮರಗಳನ್ನು ಹಾಕಿದ್ದೇವೆಂದು ಹೇಳಿದೆ. ಅದೆಷ್ಟೋ ಚಡಕ್‌ಬಂಡ್‌ಗಳನ್ನು ಹಾಕಿದ್ದೇವೆಂದು ಹೇಳಿದ. ಆಯಿತು ನಾಳೆ ಬೆಳಿಗ್ಗೆ ಇನ್ಸ್‌ಪೆಕ್ಷನ್‌ಗೆ ಹೋಗೋಣವೆಂದು ಕರೆದರೆ ಸಾಯಂಕಾಲ ಯಾರದೋ ಕೈಯಲ್ಲಿ ಫೋನ್ ಮಾಡಿಸಿ ಅದೇನೋ ಅಸಿಸ್ಟೆಂಟ್ ಡೈರೆಕ್ಟರ್‌ರವರು ಬಂದು ಎಂ.ಎಲ್.ಎ ರವರನ್ನು ನೋಡಬೇಕಂತೆ ಎಂದು ಹೇಳಿಸುತ್ತಾನೆ. ಏತಕ್ಕೆ ಎಂದರೆ, ಅದೇನೋ ಅಡ್ಜೆಸ್ಟ್‌ಮೆಂಟ್ ಅಂತೆ ಸಾರ್ ಎನ್ನುತ್ತಾನೆ ಇವತ್ತು ಪ್ರಾಯಶಃ ನಮ್ಮ ಶ್ರೀನಿವಾಸಗೌಡರು ಇದ್ದಿದ್ದರೆ ಹೇಳುತ್ತಾ ಇದ್ದರು, ಅಸಿಸ್ಟೆಂಟ್ ಡೈರೆಕ್ಟರ್, ಡೆಪ್ಯೂಟಿ ಡೈರೆಕ್ಟರ್ ಈ ಪೋಸ್ಟ್‌ಗಳಿಗೆ ಯಾರು ಕೇಳುವವರೇ ಇಲ್ಲ. ಇರತಕ್ಕ most lucrative post, soil conservation, watershed developmentಗೆ ಅಸಿಸ್ಟೆಂಟ್ ಡೈರೆಕ್ಟರ್ ಕೆಲಸ, ಇದನ್ನೇಕೆ ಹೇಳುತ್ತಿದ್ದೇನೆಂದರೆ, ಹಣವನ್ನು ಕೊಡುವುದಕ್ಕಿಂತ ಮೊದಲು ಈ ಖದೀಮರು ಮೊದಲಿನಿಂದಲೂ ಮಾಡಿಕೊಂಡು ಬಂದಿರುವ ಇತಿಹಾಸವನ್ನು ದಯವಿಟ್ಟು ಚೆಕ್ ಮಾಡಿ. ಇವತ್ತು ನಾವು ಕೊಟ್ಟಿರುವ ಹಣಕ್ಕೆ may be we should had more than 20-25% extra ನಮಗೆ ಫಾರೆಸ್ಟ್ ಕವರೋ ಅಥವಾ ಟ್ರೀ ಕವರ್ ಆಗಿರಬೇಕಾಗಿತ್ತು. ಆದರೆ, ಅದು ಎಲ್ಲೂ ಆಗಿಲ್ಲ. It is plundering department. ಪ್ರಾಯಃಶ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ನಲ್ಲಿ ಸೀಡ್ಸ್ ಸಬ್ಸಿಡಿ ಕೊಡುವುದು ಒಂದು ಜೊತೆಗೆ

ಸಾಯಿಲ್ ಕನ್‌ಸರ್ವೇಶನ್ ಈ ಎರಡು ಐಟಂ ಇಲ್ಲದಿದ್ದರೆ ಆ ಇಲಾಖೆಯಲ್ಲಿ ಇರುವವರೆಲ್ಲಾ ವಾಲೆಂಟರಿ ರಿಟೈರ್‌ಮೆಂಟ್ ತೆಗೆದುಕೊಂಡು ಬಿಡುತ್ತಿದ್ದರು. ಇದನ್ನು ನೊಂದು ಹೇಳುತ್ತೇನೆ. ದಯವಿಟ್ಟು ಮುಂದೆ ವಾಟರ್‌ಶೆಡ್‌ಗೆ ಏನೇ ಹಣವನ್ನು ಕೊಟ್ಟರೂ you please take stock of what all has happened. ದುಡ್ಡು ಕೊಟ್ಟಿದ್ದಕ್ಕೆ ಆ ಪುಣ್ಯಾತ್ಮರು ಇದುವರೆಗೆ ಏನೇನು ಅಫಾರ್‌ಸ್ಟೇಷನ್ ಮಾಡಿದ್ದಾರೆ, ಎಷ್ಟೆಷ್ಟು ಪ್ರಾಜೆಕ್ಟ್‌ಗಳನ್ನು ಇವರು ವಾಟರ್‌ಶೆಡ್‌ನಲ್ಲಿ they have development ecology, they have development the ground water level, ಎಷ್ಟೆಷ್ಟು ಮೇಲಕ್ಕೆ ಬಂದಿದೆ ಎಂಬ ಬಗ್ಗೆ ಚೆಕ್ ಮಾಡಿ ದಯವಿಟ್ಟು ಹಣವನ್ನು ಕೊಡಿ ಎಂಬ ಮಾತನ್ನು ಹೇಳುತ್ತೇನೆ, ಫಾರೆಸ್ಟ್ ವಿಚಾರದಲ್ಲಿ ಜಪಾನ್ ಏಡ್‌ನಿಂದ ಐದು ವರ್ಷದ ಕಾಲಕ್ಕೆ 785 ಕೋಟಿ ರೂಪಾಯಿಗಳನ್ನು ಬಾರೋ ಮಾಡಿ ಅಫಾರ್‌ಸ್ಟೇಷನ್‌ಗೆ ಕಾರ್ಯಕ್ರಮವನ್ನು ಹಾಕಿದ್ದೀರಿ. ಅಲ್ಟಿಮೇಟಲಿ ಫಾರೆಸ್ಟ್ ಉದ್ದೇಶವೇನು, ಫಾರೆಸ್ಟ್ ಕವರಿಂಗ್, ಇನ್ ಕ್ರೀಸ್ ಇಂಪ್ರೂವ್ ಮಾಡುವ ಉದ್ದೇಶವೇನು, ಎಕಾಲಜಿ ಬ್ಯಾಲೆನ್ಸ್ ಮಾಡುವುದಕ್ಕೆ ಇವತ್ತು ಮಾನ್ಯ ಅರ್ಥ ಸಚಿವರು ಸೂಕ್ಷ್ಮವಾಗಿ ತಿಳಿದುಕೊಳ್ಳಬೇಕು, ಇವತ್ತು ಕೆಲವು ಜನರು ಮರದ ಹೆಸರಿನಲ್ಲಿ ಲೂಟಿ ಮಾಡುತ್ತಿದ್ದಾರೆ. ಯಾವೂದೋ ಗುರು ಟೀಕ್ ಕಂಪನಿ ಎಂದು, ಅದೊಂದೇ ಅಲ್ಲ ಹತ್ತಾರು ಟೀಕ್ ಕಂಪನಿಗಳು ಇದೆ, ಅವರು ಏನು ಮಾಡುತ್ತಾರೆಂದರೆ, ಯಾವುದೋ ಬೆಂಗಾಡಿನಲ್ಲಿ 25 ಎಕರೆ ಜಮೀನು ತೆಗೆದುಕೊಳ್ಳುವುದು, ಸಂದರವಾಗಿ ಪ್ಲಾಂಟೇಷನ್ ಮಾಡುತ್ತಿದ್ದೇವೆ. Your money is going on trees. After seven years your money will be doubled. After twenty years it will become so much.120 ರೂಪಾಯಿ ಹದಿನೆಂಟು ವರ್ಷಕ್ಕೆ ಒಂದು ಲಕ್ಷವಾಗುತ್ತದೆ, ಇಂಥ ಸುಂದರವಾದ ಕನಸನ್ನು ಜನರಿಗೆ ಕೊಟ್ಟು ಟೋಪಿ ಹಾಕುತ್ತಿದ್ದಾರೆ. ಬೇಂಗಳೂರಿನಲ್ಲಿ ಐ.ಟಿ. ಮತ್ತು ಬಿ.ಟಿ ದುಡ್ಡು ಜಾಸ್ತಿಯಾಗಿಬಿಟ್ಟಿದೆ. ನೀವು ಸೂಕ್ಷ್ಮವಾಗಿ ಬಂಜರು ಭೂಮಿಯೊಳಗೆ ಸ್ವಲ್ಪ ಫಾರೆಸ್ಟ್ ಲಾಗಳನ್ನು ರಿಲ್ಯಾಕ್ಸ್ ಮಾಡಿ, ಹತ್ತು ಹದಿನೈದು ವರ್ಷದವರೆಗೆ ನೀವು ಮರಗಳನ್ನು ಬೆಳೆದುಕೊಳ್ಳಿ, ಅನಂತರ ಬೇಕಾದರೆ ಮಾರಿಕೊಳ್ಳಿ, ನಾವು ನಿಮಗೆ ಅವಕಾಶ ಮಾಡಿಕೊಡುತ್ತೇವೆ ಎಂದಾಗ, ನೀವು ಇಡೀ ಕಂಟ್ರಿಸೈಡ್ ಏನೇನು ಬ್ಯಾರನ್ ಲ್ಯಾಂಡ್ ಇದೆ ಅದನ್ನು ಜನರು ಸ್ವಲ್ಪವೂ ಬಿಡುವುದಿಲ್ಲ, ಏಕೆಂದರೆ, ಏನು ಕಂಪನಿಯನ್ನು ಪ್ರಮೋಟ್ ಮಾಡಿಕೊಂಡು ಟೋಪಿ ಹಾಕಲು ಹೊರಟಿದ್ದಾರಲ್ಲಾ ಆ ಬೆನಿಫಿಟ್ ಡೈರೆಕ್ಟ್ ಆಗಿ. ಬೇಕಾದರೆ ಒಬ್ಬ ಶ್ರೀಮಂತ ಹದಿನೈದು ಎಕರೆ ಜಮೀನು ತೆಗೆದುಕೊಂಡಿರುವವನಿಗೇ ಕೊಡಿ. ಇವತ್ತು ಪ್ರಾಯಶಃ if you do this may be you can avoid this Rs. 745 crores, what you are trying to bring from Japan. ಇದನ್ನು ನಾನು ಏಕೆ ಹೇಳುತ್ತೇನೆಂದರೆ There is lot of money ಎಂದು ಜನರಿಗೆ ಬಂದುಬಿಟ್ಟಿದೆ. ಬಹಳಷ್ಟು ಜನ ಮುಗ್ಧರು ಸಿಟಿಗಳಲ್ಲಿ ಏನೂ ಮಾಡಲು ಆಗುವುದಿಲ್ಲ. ನಮ್ಮನ್ನು ನಿಮ್ಮ ಊರಿನ ಕಡೆ ಮರ ಚೆನ್ನಾಗಿ ಬೆಳೆಯುತ್ತಿದೆಯಾ ಎಂದು ಕೇಳುತ್ತಾರೆ. ಅವರೆಲ್ಲಾ ಟೋಪಿ

ಮಾಸ್ಟರ್‌ಗಳು. ಅದರ ಬಗ್ಗೆ ಸೂರ್ಕ್ಷವಾಗಿ ತಮಗೆ ಹೇಳುತ್ತೇನೆ. ಈ ಸದನದಲ್ಲಿ ಎಲ್ಲರೂ ಗಂಭೀರವಾಗಿ ಚಿಂತನೆ ಮಾಡತಕ್ಕ ಒಂದು ವಿಚಾರ ರೋಡ್ಸ್‌ದ್ದು. ಇನ್ನು ಎರಡೇ ವಿಚಾರವನ್ನು ಮಾತನಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ, ರೂರಲ್ ಮುಖ್ಯಮಂತ್ರಿಗಳ ನಿಧಿಯಲ್ಲಿ 80 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಅದರ ಕೊನೆಯಲ್ಲಿ ಒಂದೇ ಒಂದು ಮಾತನ್ನು ಹಾಕಿದ್ದೀರಿ. ಅದೇನೆಂದರೆ Fund allocation according to regional imbalance ಎಂದು. ಅಂದರೆ ಡಾ. ನಂಜುಂಡಪ್ಪನವರ ವರದಿಯ ಪ್ರಕಾರ ನಮಗೆ ಕಳೆದ ಅನುಭವನೇನೆಂದರೆ 39 ತಾಲ್ಲೂಕುಗಳಿಗೆ ಹೆಚ್ಚು ದುಡ್ಡು ಹೋಗುತ್ತದೆ. ನಮಗೆ ದುಡ್ಡು ಬರುತ್ತಿಲ್ಲ. ಮಾನ್ಯ ನಂಜುಂಡಪ್ಪನವರು ಬ್ಯಾಕ್‌ವರ್ಡ್‌ನೆಸ್‌ನ್ನು ಯಾವ ರೀತಿಯಾಗಿ ನಿಗದಿ ಮಾಡಿದ್ದಾರೆ. Economic backwardness agriculture backwardness ನಿಂದ ಪ್ರಾರಂಣವಾಗುತ್ತದೆ. ರೋಡ್ಸ್‌ಗೆ ಡಾ. ನಂಜುಂಡಪ್ಪನವರ ವರದಿಯನ್ನು ಏಕೆ ಅಪ್ಲೈ ಮಾಡಬೇಡಿ ಎಂಬ ಬಗ್ಗೆ ಸೂಕ್ಷ್ಮವಾಗಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಬ್ಯಾಕ್‌ವರ್ಡ್‌ನೆಸ್, ಅಗ್ರಿಕಲ್ಚರ್ ಬ್ಯಾಕ್‌ವರ್ಡ್‌ನೆಸ್ ಎಂದರೆ ಏನು? ಆ ದಿಕ್ಕಿನಲ್ಲಿ ಆ ಊರುಗಳಲ್ಲಿ ಮಳೆಯಾಗುವುದಿಲ್ಲವೆಂದು ಅರ್ಥ. ಈ 39 ತಾಲ್ಲೂಕುಗಳಲ್ಲಿ ಹೆಚ್ಚು ಮಳೆಯಾಗುವುದಿಲ್ಲವೆಂದು ಅದರ ಅರ್ಥ. ಮಳೆ ಆಗುವುದಿಲ್ಲವೆಂದರೆ ಅಲ್ಲಿ ರಸ್ತೆಗಳು ಹೆಚ್ಚು ಕೆಡುವುದಿಲ್ಲವೆಂದು ಅರ್ಥ ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಇವತ್ತು ಹೆಚ್ಚು ರಸ್ತೆಗಳು ಕೆಡತಕ್ಕದ್ದು, ನಮ್ಮಂಥ ಮಳೆಬರತಕ್ಕ ತಾಲ್ಲೂಕುಗಳಲ್ಲಿ It is unscientific ನನ್ನ ತೀರ್ಮಾನದಲ್ಲಿ ಏಕೆಂದರೆ ಡಾ. ನಂಜುಂಡಪ್ಪನವರ ವರದಿಯ ಪ್ರಕಾರ ಎಕನಾಮಿಕ್ ಬ್ಯಾಕ್‌ವರ್ಡ್‌ನೆಸ್ ಆಧಾರದ ಮೇಲೆ ಫಂಡ್ಸ್‌ನ್ನು ರಲೀಸ್ ಮಾಡುತ್ತಿದ್ದೀರಿ. ನೀವು ಒಂದು industry set up ಮಾಡುವುದಕ್ಕೋ ಅಥಾವ job incentive ಕೊಡುವುದಕ್ಕೋ ಎನು ಬೇಕಾದರೂ ಅದರಲ್ಲಿ ಮಾಡಿ, ಆದರೆ ರಸ್ತೆ ವಿಚಾರದಲ್ಲಿ ದಯವಿಟ್ಟು ಡಾ. ನಂಜುಂಡಪ್ಪನವರ ವರದಿಯ ಆಧಾರದ ಮೇಲೆ ಕ್ಲಾಸಿಫೈ ಮಾಡಲು ಹೋಗಬೆಡಿ. ಏಕೆಂದರೆ, ನಂಜುಂಡಪ್ಪನವರ ವರದಿಯಲ್ಲಿ ನಮ್ಮ ತಾಲ್ಲೂಕನ್ನು better of taluks ಎಂದು ಡಿಕ್ಲೇರ್ ಮಾಡಿದ್ದಾರೆ. ಬೇರೆ ತಾಲ್ಲೂಕಿಗೆ ಕಂಪೇರ್ ಮಾಡಿದರೆ ನಮ್ಮ ತಾಲ್ಲೂಕಿಗೆ ಹಣವೇ ಬರುತ್ತಿಲ್ಲ ಇವತ್ತು ಈ ದಿಕ್ಕಿನಲ್ಲಿ ಕಾರ್ಯೋನ್ಮುರಾಗುತ್ತೀರಿ ಎಂಬ ಮಾತನ್ನು ಹೇಳುತ್ತೇನೆ. ಇಡೀ ಬಜೆಟ್‌ನಲ್ಲಿ ಸ್ವಲ್ಪ ಸಮಾಧಾನ ಕಪಡದಿರುವ ವಿಚಾರವೆಂದರೆ self employment ಬಗ್ಗೆ employment generation ಬಗ್ಗೆ ತಾವು ಕೈಗಾರಿಕಾ ವಿಕಾಸ ಎಂದು ಒಂದೇ ಹತ್ತು ಕೋಟಿರೂಲನ್ನು ಕೊಟ್ಟಿದ್ದೀರಿ. ಅದರಲ್ಲಿ sIntensive industrialzation of 39 backward taluks which will help to create jobs of 1.5 lakhs over a period of five years.ಅಷ್ಟನ್ನು ಬಿಟ್ಟರೆ ತಾವು self employment ಗೆ ಯಾವುದೇ ಕಾರ್ಯಕ್ರಮವನ್ನು ತೋರಿಸಿಲ್ಲ. ಇವತ್ತು ಬಹಳಷ್ಟು ನಿರುದ್ಯೋಗವಿದೆ. ಗೌರ್ನಮೆಂಟ್ employment opportunity ಕ್ಲೋಸ್ ಆಗಿದೆ. ನಮಗೆ ಇರತಕ್ಕ self employment

ಮಾತ್ರ ಈ self employmentಗೆ ಇವತ್ತು ಯಾವೂದೇ incentive ಇವತ್ತು ಯಾವೂದೇ ತೋರಿಸಿಲ್ಲ. ಸೂಕ್ಷ್ಮವಾಗಿ ತಮಗೆ ಒಂದನ್ನು ಹೇಳಬಲ್ಲೆ ಇವತ್ತು Prime Minister Rojgar ಯೋಜನೆಯಲ್ಲಿ ತಾವು ಯಾವುದಾದರೂ self employment ಕಾರ್ಯಕ್ರಮವನ್ನು ಮಾಡಬೇಕಾಗುತ್ತದೆ. ಜೊತೆಗೆ ಬಹಳಷ್ಟು self employment ಗೆ ಹೋಗತಕ್ಕವರು I.T.I ಕೋರ್ಸ್‌ನ್ನು ಮಾಡುತ್ತಾರೆ ಬಹಳಷ್ಟು ಜನ ಐ.ಟಿಐ. ಕೋರ್ಸ್‌ನ್ನು ಮಾಡುವವರು ಟರ್ನರ್ಸ್ ಫಿಟ್ಟರ್ಸ್ ಆಗುತ್ತಿದ್ದಾರೆ. ಆದರೆ, ಇವತ್ತು ಈ ಸಮಾಜದಲ್ಲಿ ಟರ್ನರ್ಸ್ ಮತ್ತು ಫಿಟ್ಟರ್ಸ್‌ಗೂ ಕೆಲಸ ಎಲ್ಲೂ ಕೆಲಸ ಸಿಗುತ್ತಿಲ್ಲ. ಹೊಸ ಜೊಸ ಐ.ಟಿಐ.ಗೆ ಹೊಸ ಹೊಸ ಕೋರ್ಸ್‌ನ್ನು ಪ್ರಾರಂಭ ಮಾಡಿಸಬೇಕಾಗುತ್ತದೆ. ಬಯೋಟೆಕ್ನಾಲಜಿ ಮಾಡಿಸನೇಕಾಗುತ್ತದೆ, ಬಿ.ಟಿ ಸೆಕ್ಟಾರ್ ಐ.ಟಿ. ಸೆಕ್ಟಾರ್‌ನಲ್ಲಿ short term courses ಐ.ಟಿ.ಐ ನಲ್ಲಿ ಮಂಡಿಸಬೇಕಾಗುತ್ತದೆ. ಇದು ಮಾಡಿಸಿದರೆ ಕೆಲವರಿಗೆ ಪ್ರೈವೇಟ್ ಕಂಪನಿಗಳಲ್ಲಿ ಅವಕಾಶವಾಗುತ್ತದೆ. ಎರಡನೆಯದಾಗಿ, ಇವತ್ತು ಐ.ಟಿಐ. ಕೋರ್ಸ್‌ಮಾಡಿದವರಿಗೆ self employment ಗೆ ಅವಕಾಶವಾಗುತ್ತದೆಂದು ಅವನು ಐ.ಟಿ.ಐ. ಕೋರ್ಸ್‌ಗೆ ಸೇರುತ್ತಾರನೆ. ಆದರೆ ಅವನ್ನು ಅಲ್ಲಿಂದ ಪಾಸಾಗಿ ಹೊರಕ್ಕೆ ಬಂದಮೇಲೆ ಸ್ವಯಂ ಉದ್ಯೋಗ ಮಾಡಲು ಬ್ಯಾಂಕ್‌ಗೋ ಅಥವಾ ಇನ್ನೊಂದು ಕಡೆಗೂ ಹೋದಾಗ ಯಾವ ಬ್ಯಾಂಕ್‌ನಲ್ಲೂ ಇನ್‌ಸೆನ್‌ಟೀವ್ ಕೊಡುವುದಿಲ್ಲ. ತಾವು ಕೊನೆಯ ಪಕ್ಷ ಕೋ–ಆಪರೇಟೀವ್ ಸೆಕ್ಟಾರ್ಸ್‌ನಲ್ಲಿ ನಮ್ಮ ರಾಜ್ಯದಿಂದ ಪಾಸಾದಂಥ ಐ.ಟಿಐ. ಹುಡುಗರು ಯಾರಿದ್ದಾರೆ ಅವರಿಗೆ ಸಾಲವನ್ನು ಕೊಡತಕ್ಕದನ್ನು ಮ್ಯಾಂಡೇಟರಿ ಮಾಡಬೇಕು ಏಕೆಂದರೆ ಬ್ಯಾಂಕ್‌ನವರು ನಮ್ಮನ್ನು oblige ಮಾಡುವುದಿಲ್ಲ. ನಮ್ಮಲ್ಲಿರುವ ಪಿ.ಎಲ್.ಡಿ. ಬ್ಯಾಂಕ್‌ಗಳಲ್ಲಿ ನಮ್ಮಲಿರತಕ್ಕ ಸಹಾಕಾರಿ ಸಂಘಗಳಲ್ಲಿ ಯಾರೇ ಒಬ್ಬ ಐ.ಟಿಐ. ಯಲ್ಲಿ ಪಾಸಾಗಿ ಹೊಂದಂಥ ಹುಡುಗರಿಗೆ tThat certificate itself should be the criferi for giveing loons ಈಗ P.M.R.Y. ಗೆ ಎಸ್.ಎಸ್.ಎಲ್.ಸಿ ಸರ್ಟಿಫಿಕೇಟನ್ನು ಕೊಟ್ಟರೆ Prime Minister Rojgar Yojane ಯಲ್ಲಿ They are eligible to start an industry up to Rs. one laks ಎಂದು ಇದೆ. ಹಾಗೆ ಐ.ಟಿ.ಐ. ಕೋರ್ಸ್ ಮೂಡಿದಂಥ ಟರ್ನರೋ, ಫಿಟ್ಟರೋ, ಬಯೋಟೆಕ್ನಾಲಜಿ ಕೋರ್ಸ್ ಮಾಡಿರುವ ಯಾರೇ ಆಗಲಿ ಅವರು ಕೋಆಪರೇಟೀವ್ ಇನ್ಸ್ಟಿಟ್ಯೂಷನ್‌ಗೆ ಹೋಗಿ ಅಪ್ರೋಚ್ ಮಾಡುದಾಗ that certificate should enable him to get at least minimum of loan to start some self-employment. ಇಷ್ಟನ್ನು ತಮಗೆ ಹೇಳುತ್ತಾ, ತಾವು ಆಶ್ರಯಕ್ಕೆ ಹಣವನ್ನು ಕೊಟ್ಟಿದ್ದೀರಿ, Rs. 100 crores subsidy under Ashraya Housing ಕೊಟ್ಟಿದ್ದೀರಿ, ಎಸ್‌ಸಿ/ಎಸ್‌ಟಿಗೆ ಅಂಬೇಡ್ಕರ್ ಹೌಸಿಂಗ್‌ಗೆ 50 ಕೋಟಿ ರೈಪಾಯಿ ಕೊಟ್ಟಿದ್ದೀರಿ, ಇಂದಿರಾ ಆವಾಸ್ ಯೋಜನೆಗೆ 110 ಕೋಟಿ ರೂಪಾಯಿ ಕೊಟ್ಟಿದ್ದೀರಿ. ಇದು ಇಡೀ ರಾಜ್ಯಕ್ಕೆ ಕೊಟ್ಟಿರುವುದು. ನಮ್ಮ ಒಂದೇ ತಾಲ್ಲೂಕಿನಲ್ಲಿ accumulated Ashraya payment ಎರಡು ಕೋಟಿ ರೂ ಇದೆ. ಪ್ರತಿ ಶಾಸಕನ ಹಳೆಯ ಪಾಮೆಂಟ್‌ಗಳೇ ಒಂದೊಂದು ಕ್ಷೇತ್ರದಲ್ಲಿ

ಕನಿಷ್ಟ ಒಂದು ಒಂದುವರೆ ಕೋಟಿ ರೂ ಹಣ ಇದೆ. ಹೀಗಿರಬೇಕಾದರೆ ಆಶ್ರಯಕ್ಕೆ ನಾವು ಹಳೆಯ back bills cleatr- ಮಾಡುವುದೋ ಅಥವಾ ಹೊಸ ಕಾರ್ಯಕ್ರಮಗಳನ್ನು ಮಾಡುವುದೋ ಎಂಬ ಬಗ್ಗೆ ತಾವು ಮಾರ್ಗದರ್ಶನ ನೀಡಬೇಕು. ಎರಡನೆಯದು ಆಶ್ರಯ ಸಮಿತಿಯದ್ದು ಒಂದು ಗೊಂದಲ ಇದೆ. where we stand on that Ashraya committee ಎಂಬುದು ನಮಗೆ ಇನ್ನು ಗೊತ್ತಿಲ್ಲ. ಪ್ರತಿ ಸಾರಿ ಮೊನ್ನೆ ಮುಖ್ಯ ಮಂತ್ರಿಗಳು ಅ ಆಶ್ರಯ ಕಮಿಟಿ ವಿಚಾರದಲ್ಲಿ ಸದನದಲ್ಲಿ ಒಂದು ಭರವಸೆ ಕೊಟ್ಟಿದ್ದಾರೆ. ಅದನ್ನೆಲ್ಲಾ ಅಮೆಂಡ್‌ಮೆಂಟ್ ಮಾಡಿ ನಿಮ್ಮನ್ನೆಲ್ಲಾ ಆಶ್ರಯ ಸಮಿತಿಯ ಸಧ್ಯಕ್ಷರನ್ನಾಗಿ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಇವತ್ತಿನವರೆಗೆ ಮುಖ್ಯ ಮಂತ್ರಿಗಳು ಇಲ್ಲವೆಂದರೆ ಆರ್‌ಡಿಪಿಆರ್ ಮಂತ್ರಿಗಳು ತೇಲಾಡುವ ಮಾತುಗಳನ್ನು ಆಡುತ್ತಾರೆ. ಹಾಗಾಗಿ ದಯವಿಟ್ಟು ಹಣಕಾಸು ಆಶ್ರಯ ದಿಕ್ಕಿನಲ್ಲಿ ಆಶ್ರಯಕ್ಕೆ ಹಳೆಯ ಬಿಲ್ಸ್ ಕ್ಲಿಯರ್ ಮಾಡಿ ನಾವು ಹೊಸ ಕಾರ್ಯಕ್ರಮ ಹಾಕುವುದಕ್ಕೆ ಆಗುವುದಿಲ್ಲ. ತಾವು ಕೊಟ್ಟಿರತಕ್ಕಂತಹ ಹಣದಲ್ಲಿ ಪ್ರತಿ ತಾಲ್ಲೂಕಿನಲ್ಲಿ ಹಳೆಯ ಬಿಲ್ ಕೂಡ ಕ್ಲಿಯರ್ ಮಾಡುವುದಕ್ಕಾಗುವುದಿಲ್ಲ. ಹಾಗಾಗಿ ದಯವಿಟ್ಟು ಹೌಸಿಂಗ್ ಸ್ಕೀಮ್‌ನಲ್ಲಿ ತಾವು ಹೆಚ್ಚು ಹಣವನ್ನು ಕೊಡಬೇಕಾಗುತ್ತದೆ. ಕೊನೆಯ ಒಂದು ಅಂಶ ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ. ಇವತ್ತು ಲಾ ಅಂಡ್‌ಆರ್ಡರ್ ಸಿಚ್ಯುಯೇಷನ್ ಬಗ್ಗೆ ತಾವು ಮಾತನಾಡಿದಿರಿ, ಮಾಡ್ರನೈಸೇಷನ್ ಆಫ್ ಪೋಲಿಸ್ಸ್ ಪೋಸ್ಟ್‌ಗೆ ತಾವು 964 ಕೋಟಿ ರೂ ಹಣ ಕೊಟ್ಟಿದ್ದೀರಿ. ಇವತ್ತು ಹಲವಾರು ಕಡೆ ಒಳ್ಳಯ ವೈರ್‌ಲೆಸ್ ಇನ್‌ಸ್ಟುಮೆಂಟ್ಸ್ ಇದೆ, ವೆಹಿಕಲ್ಸ್ ಇದೆ, ಪೋಲಿಸ್ ಫೋರ್ಸ್ ಸಾಕಷ್ಟು ಮಾಡ್ರನೈಸ್ ಆಗಿದೆ. ಇದಕ್ಕೆ ಸಂಬಂಧಪಟ್ಟ ವಿಚಾರ ಅಲ್ಲದಿದ್ದರೂ ಸಹ ಮೊನ್ನೆ ನಕ್ಸಲಿಸಂ ವಿಚಾರದಲ್ಲಿ ಸದನದಲ್ಲಿನ ಬಹಳಷ್ಟು ಚರ್ಚೆ ಮಡೆಯಿತು. ನಾನು ಸಕ್ಸಲಿಂ ವಿಚಾರಾವನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಇವತ್ತು ಬಹಳಷ್ಟು ಜನ ನಕ್ಸಲಿಸಂ ಬಗ್ಗೆ ಬಹಳ ಕನ್‌ಫ್ಯೂಸ್ ಮಾಡಿಕೊಳಡಿದ್ದಾರೆ. ಬಹಳಷ್ಟು ಜನ ಮುಂದೆ ಮಾತನಾಡುವವರು ಲಾ ಅಂಡ್ ಆಡ್‌ರ್ ತೆಗೆದುಕೊಂಡು ನಕ್ಸಲಿಸಂ ಮಾಡುತ್ತಿದ್ದಾರೆ. ಇವತ್ತು Naxlism has failed in this country. ನಕ್ಸಲಿಸಂ ಎಂದರೆ ಏನು ಎಂದೂ ಕೂಡ ಯಾರೂ ಅರ್ಥ ಮಾಡಿಕೊಳ್ಳತ್ತಿಲ್ಲ. ನಕ್ಸಲಿಸಂ ಎಂದರೆ ಇರುವವನ ಹತ್ತಿರ ಕಿತ್ತು ಬಡವನಿಗೆ ಕೊಡಬೇಕೆಂದು. ಇರುವವರ ಹತ್ತಿರ ಕಿತ್ತು ಬಡವರಿಗೆ ಕೊಡುವುದು ಎಂದರೆ, ಅವರ ಜೊತೆ ಧರ್ಮಸಿಂಗ್‌ರವರು ಹೇಗೆ ನೆಗೋಷಿಯೇಟ್ ಮಾಡುವುದಕ್ಕೆ ಸಾಧ್ಯವಾಗುತ್ತದೆ.? ಯಾರೋ ಮೊನ್ನೆ ಮುಂದೆ ಕೂತು ಮಾತನಾಡುತ್ತಿದ್ದರು You should negotie with naxalites. chief Minister ahould negotiate with naxalities ಎಂದು ನಮ್ಮ ರಾಜ್ಯದಲ್ಲಿ ಕೂಲಿಕಾರರನ್ನು ಎತ್ತಿ ಕಟ್ಟುವುದಕ್ಕೆ ನಕ್ಸ್ಲೈಟ್ ಪ್ರಯತ್ನ ಮಾಡಿದರು. ನಮ್ಮಲ್ಲಿ ಲ್ಯಾಂಡ್ ರಿಫಾರ್ಮ್ಸ್ ಆಗಿದೆ. ನಮ್ಮಲ್ಲಿ ಮಿನಿಮಮ್ ವೇಜಸ್ ಇದೆ, ನಮ್ಮಲ್ಲಿ ಸರ್ಕಾರದ ಹಲವಾರು ಸ್ಕೀಮ್‌ಗಳಲ್ಲಿ ಬಡವರಿಗೆ ಮೂರು ರೂಪಾಯಿಗೆ ಕೆಜಿ ಅಕ್ಕಿ ಕೊಡುತ್ತಿದ್ದಾರೆ, ಹಾಗಾಗಿ ಎಲ್ಲೂ ಕೂಲಿಕಾರರಿಗೆ ಎತ್ತಿ ಕಟ್ಟುವುದಕ್ಕೆ ನಕ್ಸಲ್ಯೆಟ್ಸ್‌ಗಳಿಗೆ ಆಗಲಿಲ್ಲ. ಹಾಗಾಗಿ ಹೋಗಿ ಕಾಡಿಗೆ

ಸೇರಿಕೊಂಡಿದ್ದಾರೆ. ಕಾಡಿನಲ್ಲಿ ಯಾರ ಪರವಾಗಿ ಅವರು ಸೇರಿಕೊಂಡಿದ್ದಾರೆ? ಯಾವುದೋ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ನಿಂದ ಅವರನ್ನು ಡಿಸ್‌ಪ್ಲೇಸ್ ಮಾಡಿದೆ ಎಂದು ಕೋರ್ಟ್ ಜಡ್ಜ್‌ಮೆಂಟ್ ಬಂದಿತ್ತು ಆ ಅವಿದ್ಯಾವಂತರನ್ನು ಇವರು ಮೋಟಿವೇಟ್ ಮಾಡಲಿಕ್ಕೆ ಹೋಗಿ ಕಾಡಿಗೆ ಸೇರಿಕೊಂಡಿದ್ದಾರೆ. Has Naxalism clicred? Naxalism has failed.

ಸುಮ್ಮನೆ ಕೆಲವರು ಏನು ಮಾತನಾಡುತ್ತಾರೆ, ಪೋಲಿಸ್ ಲಾ ಅಂಡ್ ಆರ್ಡರ್ ಫೇಲಾದರೂ ಅದನ್ನು ನಕ್ಸಲಿಸಂ ಎಂದು ಹೇಳುವುದು. ಇವತ್ತು ಮುಗ್ಧ ಜನ ಅವಿದ್ಯಾವಂತರನ್ನು ತೆಗೆದುಕೊಂಡು ಹೋಗಿ ಮೋಟಿವೇಟ್ ಮಾಡುತ್ತೇವೆಂದು ಹೇಳಿ ಆ ನಕ್ಸಲೈಟ್ ಅವರು ಕಾಡಿಗೆ ಹೋಗಿ ಸೇರಿಕೊಂಡಿದ್ದಾರೆ ಅಂದರೆ ರಾಜ್ಯದಲ್ಲಿ ನಕ್ಸಲಿಸಂ ಕ್ಲಿಕ್ ಆಗಿದೆಯಾ? ಈ ದೇಶದ ಪ್ರಜಾಪಭುತ್ವದ ವ್ಯವಸ್ಥೆಯಲ್ಲಿ ನಕ್ಸಲಿಸಂಗೂ ಡೆಮಾಕ್ರಸಿಗೂ ನೆಲೋಸಿಯೇಷನ್ನೇ ಇಲ್ಲ. ಹಾಗಿದ್ದರೆ ಉವತ್ತು ಜ್ಯೋತಿ ಬಸುರವರು ಡೆಮಾಕ್ರಟಿಕ್ ಸಿಸ್ಟಮ್‌ನಲ್ಲಿ ಮುಖ್ಯ ಮಂತ್ರಿಗಳಾಗುವ ಅಗತ್ಯ ಇರಲಿಲ್ಲ. ಜಾರು ಮಜುಂದಾರ್ ಮತ್ತು ಸನ್ಯಾಲ್‌ರವರು ಅವರೆಲ್ಲಾ ಜೈಲಿಗೆ ಹೋಗುವ ಅಗತ್ಯ ಇರಲಿಲ್ಲ. ಅವರೆಲ್ಲಾ ಟ್ರೈ ಮಾಡಿದರು ಫೇಲಾಯಿತು. ಹಾಗಾಗಿ ದಯವಿಟ್ಟು ಲಾ ಅಂಡ್ ಆರ್ಡರ್ ಬಗ್ಗೆ ನಕ್ಸಲೈಟ್ಸ್ ಬಗ್ಗೆ ಸದನದಲ್ಲಿ ಯಾರೂ ಸಿಂಪಥಿ ತೋರಿಸಬಾರದು. ಯಾರೋ ಒಬ್ಬ ಮೈಸೂರಿನ ಸಾಕೇತ್ ರಾಜ್ ಎನ್ನುವವರು ಒಂದು ರೌಂಡ್‌ಗೆ ಸತ್ತು ಹೋಗಿದ್ದಾರೆ ಎಂದರೆ ಅವನೇನೂ ದೊಡ್ಡ ಟೆರರಿಸ್ಟ್ ಅಲ್ಲ. ಅವನಿಗೆ ಗನ್ ಹ್ಯಾಂಡ್ಲೆ ಮಾಡುವುದಕ್ಕೆ ಬರುವುದಿಲ್ಲವೆಂಬುದು ನನ್ನ ತೀರ್ಮಾನ. ಏಕೆಂದರೆ ಎರಡು ರೌಂಡ್ ಪೋಲಿಸ್ ಫೈರಿಂಗ್‌ನಲ್ಲಾಲಗಲೀ ಅವರು ಸತ್ತು ಹೋಗಿದ್ದಾನೆ. ಕೆಲವು ಶ್ರೀಮಂತರ ಮಕ್ಕಳಿಗೆ ಏನು ಕಾಯಿಲೆ ಎಂದರೆ, something we hare to do different ಆತ ಏನೋ ಒಂದು ವಿಚಿತ್ರ ಮಾಡೋಣ ಅಂತ. ಕೆಲವರು ಆ ಕಾರ್ಯಕ್ರಮಕ್ಕೆ ಹೊರಟು misplaced individuals ಇವರೆಲ್ಲಾ ಅವರ ಬಗ್ಗೆ ಕೆಲವರು ಪತ್ರಿಕೆಗಳವರು ಸಿಂತಥಿ ತೋರಿಸುವುದು, ಇದೇನಾಗುತ್ತದೆ, if we show sympathy in this House,

ಬೇರೆ ಕಡೆ ವೈಯುಕ್ತಿಕವಾಗಿ ಆ ಸಾಕೇತ್ ರಾಜನ ಬಗ್ಗೆ ಒಳ್ಳೆಯ ಮಾತುಗಳನ್ನು ಆಡಬಹುದು. ಆದರೆ ಸಾಕೇತ್ ರಾಜ್ is a naxalite man.

ಏಕೆ ಸಿಂಪಥೈಸ್ ಮಾಡಬಾರದು ಎಂದರೆ, ನಾಳೆ it will send a wrong meaning. They should be put down.

ಇವತ್ತು ಅವನ ಹತ್ತಿರ ಯಾವ ನೆಗೋಸಿಯೇಷನ್ಸ್ ಕೂಡ ಇಲ್ಲ. ಏಕೆಂದರೆ ಅವರು ಏನೆಂದು ಹೇಳುತ್ತಾರೆ, ಕಾಪಿ ಬೆಳೆಗಾರರು ಇದ್ದಾರೆ, ದೊಡ್ಡೇಗೌಡರು, ಬೋರೇಗೌಡರು ಐದೈದು ಸಾವಿರ ಎಕರೆ ಇಟ್ಟಿದ್ದಾರೆ, ಅದನ್ನಯ ಕಿತ್ತು ಎಲ್ಲರಿಗೂ ಹಂಚಿ ಎಂದು ಹೇಳುತ್ತಾರೆ. ಧರ್ಮಸಿಂಗ್‌ರವರು ಹಂಚುವುದಕ್ಕೆ ಆಗುತ್ತದೆಯೇ? ಇದನ್ನು ನಾನು ಏಕೆ ಹೇಳುತ್ತಿದ್ದೇನೆ, ಈ ರಾಜ್ಯದಲ್ಲಿ Naxlism can never be alive.

ದಯವಿಟ್ಟು ಯಾರೂ ಕೂಡ ಲಾ ಅಂಡ್ ಆರ್ಡರ್ ವಿಷಯವನ್ನು ತೆಗೆದುಕೊಂಡು ಇಲ್ಲಿ ಹೌಸ್‌ನಲ್ಲಿ ನಕ್ಸಲಿಸಂ ಆಯಿತು, ಜಾಸ್ತಿ ಆಯಿತು ಎಂದು ದಯವಿಟ್ಟು ಯಾರೂ ಕೂಡ ಸದನದಲ್ಲಿ ಮಾತನಾಡಬಾರದು ಎಂದು ಹೇಳುತ್ತಾ, ಮಾನ್ಯ ಅರ್ಥಸಚಿವರಿಗೆ ಹೇಳುತ್ತೇನೆ, ನಮಗೆ ಅನುಭವ ಕಡಿಮೆ ಇದೆ, ಹೊಸದಾಗಿ 9 ರಿಂದ 10 ನೇ ತಿಂಗಳು ನಾನು ಶಾಸಕನಾಗಿ ನಿಂತಿರುವುದು. ಬಹಳಷ್ಟು ವಿಚಾರಗಳನ್ನು ಬೇರೆ ಸದಸ್ಯರುಗಳು ಮಾತಾನಾಡಿದ್ದಾರೆ. ಮಾನ್ಯ ಮಾಧುಸ್ವಾಮಿಯವರು ಏನೋ ಮಾತನಾಡಿದರು, ರಾಜೇಂದ್ರನ್‌ರವರು ಏನೋ ಮಾತನಾಡಿದರು, ಬಹಳಷ್ಟು ಡಿಬೇಟ್ ಆಯಿತು. The were all talking like ದೊಡ್ಡ ದೊಡ್ಡ ಎಕಾನಮಿಸ್ಟ್‌ಗಳ ಹಾಗೆ. ಅವರದೆಲ್ಲಾ ಕೇಳಿದೆವು ನಮಗೆ ಅಷ್ಟು ಅರ್ಥವಾಗಲಿಲ್ಲ ಆದರೆ ನನ್ನ ಕಾಮನ್ ಸೆನ್ಸ್ ಏನು ಹೇಳುತ್ತದೆ. ಈ ಒಂದು ಬಜೆಟ್ if it has to be a working budget, if it has to be more menaningful.

ಈ ಬಜೆಟ್‌ಗೆ ನಮ್ಮ ಚಿಕ್ಕಪುಟ್ಟ ಸಲಹೆಗಳು ಇವೆ. ಯಾವುದು, ನೆಲದ ವಾಸನೆ ಸಲಹೆಗಳು ಇವು. ನೆಲದ ವಾಸನೆ ಎಂದರೆ, ನಾವು ಬೆಳ್ಳಿಗ್ಗೆ ಎಂದು ಜನರ ಬಳಿ ಕೇಳುತ್ತೇವಲ್ಲಾ ಏನಪ್ಪ ಸಮಸ್ಯೆ ಎಂದರೆ ಯಶಸ್ವಿನಿ ಎಂದು ಸೂಕ್ಷ್ಮವಾಗಿ ಹೇಳುತ್ತಾರೆ. ಡಾಕ್ಟ ಒಂದು ವಾಲ್ವ್‌ಗೆ ದುಡ್ಡು ಕೊಡುತ್ತೇನೆಂದು ಹೇಳುತ್ತಾರೆ. ಆದರೆ ಅದು ಹೇಗಣ್ಣ ಇನ್ನೊಂದು ವ್ಯಾಲ್ವ್‌ಗೆ ದುಡ್ಡು ಎಂದ ಹಾಗೆ. ಇವೆಲ್ಲಾ ನಮ್ಮ ಲಿಟ್ಲ್ ಪ್ರಕ್ಟಿಕಲ್ ಇನ್‌ಪುಟ್ಸ್‌ನ್ನು ನಾನು ತಮಗೆ ಹೇಳಿದ್ದೇನೆ. ತಮ್ಮ ಅಪಾರವಾದ ಅನುಭವದಲ್ಲಿ ತಮಗೆ ಮತ್ತು ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳುತ್ತೇನೆ. ಇವತ್ತು ಒಂದು ವಿಶೇಷ ಎನೆಂದರೆ, ಈ ಬಜೆಟ್‌ನ್ನು ಯಾರೂ ಜನತಾದಳದ ಬಜೆಟ್ ಎಂದೂ ಹೇಳಲಿಲ್ಲ, ಕಾಂಗ್ರೆಸ್ ಬಜೆಟ್ ಎಂದೂ ಕೂಡ ಹೇಳಲಿಲ್ಲ. ಇದು "ಸಿದ್ದುಸ್ ಬಜೆಟ್" ಎಂದು ಹೇಳಿ ಬಿಟ್ಟರು. ಪ್ರೆಸ್‌ನವರು ಯಾರಿಗೂ ಕ್ರೆಡಿಟ್ ಕೊಡುವುದಕ್ಕೆ ಹೋಗಲಿಲ್ಲ. ಅವರು ಕೊಟ್ಟಿದ್ದೇ ತಮಗೆ. ಪ್ರಾಯಶಃ ಅವರು ನಿಮ್ಮ ಬಗ್ಗೆ ಇಟ್ಟಿರತಕ್ಕಂತಹ ಕಾಳಜಿ, ನಿಮ್ಮ ಬಗ್ಗೆ ಇರತಕ್ಕಂತಹ ಗೌರವ, ತಮಗೆ ಇರತಕ್ಕಂತಹ ಕಮಿಟ್‌ಮೆಂಟನ್ನು ಎಲ್ಲಾ ಪೇಪರ್‌ಗಳವರು ಹೇಳಿದ್ದಾರೆ. They have not given credit toany single Party. They have not given it to congress, nither given it to Janatha Dal. They ave given it to siddaramaiah. so, to that extent, people have got trust in you.

ಮಾನ್ಯ ರಾಯರೆಡ್ಡಿಯವರು ಹೇಳಿದ ಹಾಗೆ ಇದು ಒಂದು ಉತ್ತಮವಾದ ಬಜೆಟ್ vagaries of monsoon, ಅತೀವೃಷ್ಟಿ ಅಥವಾ ಅನಾವೃಷ್ಟಿ ಇಲ್ಲದೆ, ಬಜೆಟ್ ವರ್ಕಿಂಗ್‌ನಲ್ಲಿ ನಾವು ಏನು ಎಸ್ಟಿಮೇಟೆಡ್ ಗ್ರೋಥ್ ರೇಟ್ ಲೆಕ್ಕ ಹಾಕಿಕೊಂಡಿದ್ದೇವೆ ಏಳು ಪರ್ಸೆಂಟ್ ಲೆಕ್ಕ ಹಾಕಿದ್ದೇವೆ. ಅದು ಮೈನಸ್ ಇನ್‌ಪ್ಲೇಷನ್ ಏಳು ಏಳುವರೆ ಪರ್ಸೆಂಟ್ ಹಾಕಿಕೊಂಡಿದ್ದೇವೆ. ಅದೆಲ್ಲಾ ಆಗಬೇಕೆಂದರೆ ಒಳ್ಳೊಳ್ಳೆಯ ಮಳೆ ಆಗಬೇಕು, ಆ ದಿಕ್ಕಿನಲ್ಲಿ ನಾನು ಭಗವಳತನಲ್ಲಿ ಈ

ರಾಜ್ಯಕ್ಕೆ ಒಳ್ಳೆಯದಾಗಲಿ, ಒಳ್ಳೆಯ ಸುಭಿಕ್ಷೆಯಾಗಿ ಮಳೆ ಬೆಳೆ ಆಗಲಿ ಈ ನಾಡಿಗೆ ಎಂದು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಸದನವನ್ನು ನಾಳೆ ಬೆಳಿಗ್ಗೆ 10.00 ಗಂಟೆವರೆಗೆ ಮುಂದೂಡಲಾಗಿದೆ.

(ಸದನವು ಸಂಜೆ 7.35 ಗಂಟೆಗೆ ಮುಂದೂಡಲ್ಪಟ್ಟು ಪುನ: ದಿ: 24.3.05 ರಂದು ಬೆಳಿಗ್ಗೆ 10.00ಗಂಟೆಗೆ ಸೇರಲು ನಿಶ್ಚಯಿಸಿತು.)

2440(2963) ಶ್ರೀ ಅಭಯ ಪಾಟೀಲ್ (ಬಾಗೇವಾಡಿ):– ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಬೆಳಗಾವಿಯಲ್ಲಿ ನೂತನವಾಗಿ ಪ್ರಾರಂಭಗೊಂಡ ವೈದ್ಯಕೀಯ ಕಾಲೇಜಿಗೆ ಕಿತ್ತೂರು ರಾಣಿ ಚೆನ್ನಮ್ಮ ಹೆಸರನ್ನಿಡುವ ಪ್ರಸ್ತಾವನೆ ಸರ್ಕಾರಕ್ಕೆ ಇದೆಯೆ;

ಆ) ಹಾಗಿದ್ದಲ್ಲಿ, ಈ ಕಾಲೇಜಿಗೆ ಯಾವಾಗ ಈ ಹೆಸರನಿಡಲಾಗುವುದು;

ಶ್ರೀ ಇಕ್ಬಾಲ್ ಅನ್ಸಾರಿ (ವೈದ್ಯಕೀಯ ಶಿಕ್ಷಣ ಸಚಿವರು)

ಅ) ಸಧ್ಯದಲ್ಲಿ ಇಲ್ಲ

ಆ) ಉದ್ಭವಿಸುವುದಿಲ್ಲ.

2442(3353) ಶ್ರೀ ಆಲ್ಕೋಡ್ ಹನುಮಂತಪ್ಪ ವೈ. (ದೇವದುರ್ಗ):– ಮಾನ್ಯ ವಸತಿ ಸಚಿವರು ದಯವಿಟ್ಟು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ದೇವದುರ್ಗ ಮತಕ್ಷೇತ್ರಕ್ಕೆ ಕಳೆದ 3 ವರ್ಷಗಳಿಂದ ಇದುವರೆಗೆ ಯಾವ ಯಾವ ಯೋಜನೆಗಳ ಅಡಿಯಲ್ಲಿ ಮನೆಗಳನ್ನು ಮಂಜೂರು ಮಾಡಲಾಗಿದೆ;

ಆ) ಇವುಗಳಲ್ಲಿ ಪೂರ್ಣಗೊಂಡ, ಅಪೂರ್ಣಗೊಂಡ, ಪ್ರಾರಂಭಿಸದೆ ಇರುವ ಮನೆಗಳೆಷ್ಟು? ಗ್ರಾಮವಾರು, ಫಲಾನುಭವಿಗಳವಾರು ವಿವರವಾದ ಮಾಹಿತಿ ನೀಡುವುದು;

ಇ) ಇದರಲ್ಲಿ ಭಾರಿ ಭ್ರಷ್ಟಚಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಅಂತಹ ಅಧಿಕಾರಿಗಳ ಮೇಲೆ ತೆಗೆದುಕೊಂಡ ಕ್ರಮವೇನು;

ಶ್ರೀ ಅಂಜನಮೂರ್ತಿ (ವಸತಿ ಸಚಿವರು):–

ಅ) ಗ್ರಾಮೀಣ ಆಶ್ರಯ, ನಗರ ಆಶ್ರಯ, ಗ್ರಾಮೀಣ ಅಂಬೇಡ್ಕರ್, ನವಗ್ರಾಮ, ಜಿ.ಪಿ.ಹೆಚ್.ಪಿ. ದೇವದಾಸಿ, ಎಸ್.ಸಿ. ತಾಂಡ, ಹಾಗೂ ಐ.ಎ.ವೈ. ಪಿ.ಎಂ.ಜಿ.ವೈ. ಯೋಜನೆಗಳಡಿಯಲ್ಲಿ ದೇವದುರ್ಗ ಮತಕ್ಷೇತ್ರಕ್ಕೆ ಮನೆಗಳನ್ನು ಮಂಜೂರು ಮಾಡಲಾಗಿದೆ.

ಆ) ಅನುಬಂಧ 'ಅ' ಲಗತ್ತಿಸಲಾಗಿದೆ.

ಗ್ರಾಮವಾರು, ಫಲಾನುಭವಿಗಳವಾರು ಪಟ್ಟಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದೆ.

(ಪಟ್ಟಿಯನ್ನು ಹಾಗೂ ಅನುಬಂಧ 'ಅ' ಹೆಚ್ಚು ಪುಟಗಳಿರುವುದರಿಂದ ಸದಸ್ಯರಿಗೆ ಮಾತ್ರ ವಿತರಿಸಲಾಗಿದೆ.